

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 26 ಸೋಮವಾರ 2024

ಸಂಪುಟ: 44 | ಸಂಚಿಕೆ: 309 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4




ಲೋಕಸಭಾ ಚುನಾವಣೆ ಮತದಾನದಲ್ಲಿ ಪಾಲ್ಗೊಳ್ಳಿ

'ಮನ್ ಕೀ ಬಾತ್'ನಲ್ಲಿ ಯುವ ಸಮೂಹಕ್ಕೆ ಪ್ರಧಾನಿ ಮೋದಿ ಮನವಿ

ನವದೆಹಲಿ, ಫೆ.25– ಮೊದಲ ಬಾರಿಯ ಮತದಾರರು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ದಾಖಲೆ ಸಂಖ್ಯೆಯಲ್ಲಿ ಮತ ಚಲಾಯಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಯುವ ಸಮೂಹಕ್ಕೆ ಭಾನುವಾರ ಮನವಿ ಮಾಡಿಕೊಂಡರು.

ಈ ಅವಧಿಯ ಕೊನೆಯ ಮನ್ ಕೀ ಬಾತ್ ರೇಡಿಯೊ ಕಾರ್ಯಕ್ರಮದ 110ನೇ ಸಂಚಿಕೆಯಲ್ಲಿ ಭಾನುವಾರ ಮಾತನಾಡಿದ ಅವರು, 18ನೇ ಲೋಕಸಭಾ ಚುನಾವಣೆಯು ಯುವ ಜನರ ಆಶೋತ್ತರಗಳ ಪ್ರತೀಕ ಎನಿಸಿದೆ. ನಿಮ್ಮ ಮೊದಲ ಮತ ಈ ದೇಶಕ್ಕಾಗಿ ಆಗಬೇಕು ಎಂಬುದನ್ನು ನೆನಪಿನಲ್ಲಿಟ್ಟುಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಮತದಾನ ಮಾಡಿ' ಎಂದು ಕರೆ ನೀಡಿದರು.



ಯುವ ಜನರು ತಮ್ಮನ್ನು, ಮತದಾನ ಪ್ರಕ್ರಿಯೆಗೆ ಮಾತ್ರ ಸೀಮಿತಗೊಳಿಸದೆ, ಚುನಾವಣಾ ಚಟುವಟಿಕೆಗೆ ಸಂಬಂಧಿಸಿದ ಸಂವಾದ ಮತ್ತು ಚರ್ಚೆಗಳ ಬಗ್ಗೆಯೂ ಅರಿವು ಹೊಂದಬೇಕು ಎಂದು ಸಲಹೆ ನೀಡಿದರು.

ಚುನಾವಣೆಯ ನೀತಿ ಸಂಹಿತೆ ಜಾರಿಯಾಗಲಿರುವ ಕಾರಣ ಮುಂದಿನ ಮೂರು ತಿಂಗಳು ಮನ್ ಕೀ ಬಾತ್ ಪ್ರಸಾರವಾಗುವುದಿಲ್ಲ ಎಂದು ಮೋದಿ ಇದೇ ಸಂದರ್ಭದಲ್ಲಿ ಹೇಳಿದರು. ಈ ಕಾರ್ಯಕ್ರಮದ 110 ಸಂಚಿಕೆಗಳು ಯಶಸ್ವಿಯಾಗಿ ಪೂರ್ಣಗೊಂಡಿವೆ. ಮುಂದಿನ ಬಾರಿ ನಾವು 111ನೇ ಸಂಚಿಕೆಯಲ್ಲಿ ಭೇಟಿಯಾಗೋಣ ಎನ್ನುವ ಮೂಲಕ ತಾವು ಮತ್ತೊಮ್ಮೆ ಅಧಿಕಾರಕ್ಕೇರುವ ವಿಶ್ವಾಸ ವ್ಯಕ್ತಪಡಿಸಿದರು.

ಮಾರ್ಚ್ 8 ರಂದು ನಾವು ಮಹಿಳಾ ದಿನವನ್ನು ಆಚರಿಸುತ್ತೇವೆ. ಈ ವಿಶೇಷ ದಿನವು ದೇಶದ ಅಭಿವೃದ್ಧಿಯಲ್ಲಿ ಮಹಿಳಾ ಶಕ್ತಿಯ ● 8ನೇ ಪುಟಕ್ಕೆ

ಕಾಂಗ್ರೆಸ್ ಶಾಸಕ ರಾಜಾ ವೆಂಕಟಪ್ಪ ನಾಯಕ ನಿಧನ

ಬೆಂಗಳೂರು: ಯಾದಗಿರಿ ಜಿಲ್ಲೆ ಸುರಪುರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ರಾಜಾ ವೆಂಕಟಪ್ಪ ನಾಯಕ ನಿಧನರಾಗಿದ್ದಾರೆ. ಅವರಿಗೆ 67 ವರ್ಷ ವಯಸ್ಸಾಗಿತ್ತು.



ಹೃದಯಾಘಾತದಿಂದ ಅವರು ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಇಂದು ಕೊನೆಯುಸಿರೆಳೆದಿದ್ದಾರೆ

ನಾಲ್ಕು ಬಾರಿ ಶಾಸಕರಾಗಿದ್ದ ರಾಜಾ ವೆಂಕಟಪ್ಪ ನಾಯಕ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಆಪ್ತರಾಗಿದ್ದರು. ಕಾಂಗ್ರೆಸ್‌ನಿಂದಲೇ ರಾಜಕೀಯ ಜೀವನ ಆರಂಭಿಸಿದ್ದ ರಾಜಾ ವೆಂಕಟಪ್ಪ ನಾಯಕ ಇತ್ತೀಚೆಗೆ ಉಗ್ರಾಣ ನಿಗಮದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ್ದರು. ಮೃತರು ಇಬ್ಬರು ಪುತ್ರರು, ಅಭಿಮಾನಿಗಳನ್ನು ಅಗಲಿದ್ದಾರೆ. ಅವರ ನಿಧನಕ್ಕೆ ಸಿಎಂ ಸಿದ್ದರಾಮಯ್ಯ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.

ಅಯೋಧ್ಯೆಯಲ್ಲಿ ಕರ್ನಾಟಕದ ಪ್ರವಾಸಿಗರ ಸರ ಕದ್ದಿದ್ದ ಕಳ್ಳರ ಗ್ಯಾಂಗ್ ಬಂಧನ

ಅಯೋಧ್ಯೆ: ಉತ್ತರ ಪ್ರದೇಶದ ಅಯೋಧ್ಯಾದಲ್ಲಿನ ಶ್ರೀ ರಾಮ ಮಂದಿರಕ್ಕೆ ಭೇಟಿ ನೀಡುವ ಸಾವಿರಾರು ಭಕ್ತರ ನಡುವೆ ಪ್ರವಾಸಿಗರ ಸೋಗಿನಲ್ಲಿ ಸರಗಳ್ಳತನ ಮಾಡುತ್ತಿದ್ದ 16 ಮಂದಿಯ ಗ್ಯಾಂಗ್ ಅನ್ನು ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳನ್ನು ಬಿಹಾರದ ವಿವಿಧ ಜಿಲ್ಲೆಗಳವರು ಎಂದು ಗುರುತಿಸಲಾಗಿದೆ.

ಈ ಗ್ಯಾಂಗ್ ಅಯೋಧ್ಯೆ ಮಾತ್ರವಲ್ಲದೇ ವಾರಾಣಸಿ ಹಾಗೂ ಮಥುರಾದಲ್ಲೂ ಪ್ರವಾಸಿಗರನ್ನು ಗುರಿಯಾಗಿಸಿ ಸರಗಳ್ಳತನದಲ್ಲಿ ತೊಡಗಿತ್ತು ಎಂದು ಪೊಲೀಸರು ಪತ್ತೆ ಮಾಡಿದ್ದಾರೆ.

ಬಂಧಿತರಿಂದ 21 ಲಕ್ಷ ರೂ ಮೌಲ್ಯದ 11 ಚಿನ್ನದ ಸರಗಳು ಹಾಗೂ ಎರಡು ಎಸ್‌ಯುವಿ ವಾಹನಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಅಯೋಧ್ಯಾದಲ್ಲಿ ರಾಮ ಮಂದಿರ ಉದ್ಘಾಟನೆ ಸಮಾರಂಭ ನಡೆದ ಬಳಿಕ ಸರಗಳ್ಳತನ ಹಾಗೂ ಕಳವು ಪ್ರಕರಣದಲ್ಲಿ ಏರಿಕೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ● 8ನೇ ಪುಟಕ್ಕೆ

'ಗ್ಯಾರಂಟಿ' ಅನುಷ್ಠಾನ ಪ್ರಶ್ನಿಸುವ ಸಂಪೂರ್ಣ ಹಕ್ಕು ಮತದಾರರಿಗಿದೆ

ಚುನಾವಣಾ ಆಯೋಗ ಸ್ಪಷ್ಟನೆ

ಚೆನ್ನೈ: ಚುನಾವಣೆ ಸಮಯದಲ್ಲಿ ರಾಜಕೀಯ ಪಕ್ಷಗಳು ಒಡ್ಡುವ ಆಶ್ವಾಸನೆಗಳ ಅನುಷ್ಠಾನ ಕಾರ್ಯ ಸಾಧ್ಯತೆ ಬಗ್ಗೆ ಪ್ರಶ್ನಿಸುವ ಹಕ್ಕನ್ನು ಮತದಾರರು ಹೊಂದಿದ್ದಾರೆ ಎಂದು ಚುನಾವಣಾ ಆಯೋಗ ಸ್ಪಷ್ಟಪಡಿಸಿದೆ. ಲೋಕಸಭಾ ಚುನಾವಣೆಗೆ ರಾಜಕೀಯ ಪಕ್ಷಗಳ ಭರದ ಸಿದ್ಧತೆ ಹಾಗೂ ಇತ್ತೀಚೆಗೆ ನಡೆದ ವಿವಿಧ ವಿಧಾನಸಭೆ ಚುನಾವಣೆಗಳಲ್ಲಿ 'ಗ್ಯಾರಂಟಿ'ಗಳ ಅಬ್ಬರದ ಹಿನ್ನೆಲೆಯಲ್ಲಿ ಆಯೋಗದ ಸ್ಪಷ್ಟನೆ ಮಹತ್ವ ಪಡೆದಿದೆ.



ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಗಳಲ್ಲಿ ಭರವಸೆಗಳನ್ನು ನೀಡುವ ಹಕ್ಕನ್ನು ಹೊಂದಿವೆ. ಅದೇ ರೀತಿ, ಮತದಾರರೂ ಸಹ ಇಂತಹ ಭರವಸೆಗಳು ಎಷ್ಟು ವಾಸ್ತವಿಕ ಎಂದು ಪರೀಕ್ಷಿಸುವ ಹಕ್ಕು ಹೊಂದಿರುತ್ತಾರೆ. ಇದರ ಭಾಗವಾಗಿ ಅವುಗಳ ಅನುಷ್ಠಾನ ಕಾರ್ಯಸಾಧ್ಯತೆಯನ್ನು ಪ್ರಶ್ನಿಸುವ ಹಕ್ಕು ಹೊಂದಿರುತ್ತಾರೆ. ಆದರೆ, ಪ್ರಸ್ತುತ ಈ ವಿಚಾರ ನ್ಯಾಯಾಲಯದ ಅಂಗಳದಲ್ಲಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

ಲೋಕಸಭೆ ಸಾರ್ವತ್ರಿಕ ಚುನಾವಣೆ ಹಾಗೂ ಹಲವು ರಾಜ್ಯಗಳ ವಿಧಾನಸಭೆ ಚುನಾವಣೆಯ ಹಿನ್ನೆಲೆಯಲ್ಲಿ ಚುನಾವಣಾ ಆಯೋಗ ವಿವಿಧ ರಾಜ್ಯಗಳಲ್ಲಿ ರಾಜಕೀಯ ಪಕ್ಷಗಳ ಜತೆ ಸಮಾಲೋಚನೆ ನಡೆಸುತ್ತಿದೆ. ಇದರ ಭಾಗವಾಗಿ ಶನಿವಾರ ತಮಿಳುನಾಡಿನ ಪಕ್ಷಗಳ ಜತೆ ಸಭೆ ನಡೆಸಿತು.

ಆನ್‌ಲೈನ್ ಪಾವತಿ ನಿಗಾಕ್ಕೆ ಸೂಚನೆ
ಮತದಾರರನ್ನು ಸೆಳೆಯಲು ಹಣ ಹಾಗೂ ಫ್ರೀಬಿಗಳ ಹಂಚಿಕೆ ಬಗ್ಗೆ ನಿಗಾ ಇರಿಸುವಂತೆ ಕಾನೂನು ● 8ನೇ ಪುಟಕ್ಕೆ



ಆಳ ಸಮುದ್ರದಲ್ಲಿ ಶ್ರೀ ಕೃಷ್ಣನ ದ್ವಾರಕ ದರ್ಶನ ಮಾಡಿದ ಪ್ರಧಾನಿ ಮೋದಿ

ದ್ವಾರಕ, ಫೆ.25– ಕೃಷ್ಣನ ನಗರ ದ್ವಾರಕದಲ್ಲಿರುವ ಪ್ರಧಾನಿ ನರೇಂದ್ರ ಮೋದಿ, ಆಳ ಸಮುದ್ರಕ್ಕಿಳಿದು ಶ್ರೀ ಕೃಷ್ಣನ ದ್ವಾರಕ ದರ್ಶನ ಮಾಡಿದ್ದಾರೆ. ಸಮುದ್ರದೊಳಗಿರುವ ದ್ವಾರಕಾಗೆ ತೆರಳಿದ ಮೋದಿ, ವಿಶೇಷ ಪ್ರಾರ್ಥನೆ ಸಲ್ಲಿಸಿದ್ದಾರೆ. ಈ ವೇಳೆ ನವಿಲು ಗರಿಗಳನ್ನು ಸಮುದ್ರದೊಳಗೆ ಒಯ್ದು ಶ್ರೀ ಕೃಷ್ಣನಿಗೆ ಸಮರ್ಪಿಸಿದ್ದಾರೆ. ಹಿಂದೂ ಧಾರ್ಮಿಕ ಕೇಂದ್ರಗಳಲ್ಲಿ ದ್ವಾರಕ ಅತ್ಯಂತ ಪ್ರಮುಖ ಕ್ಷೇತ್ರಗಳಲ್ಲಿ ಒಂದಾಗಿದೆ. ಮೋದಿ ಅತ್ಯಂತ ಕಠಿಣವಾದ ಸಮುದ್ರದೊಳಗೆ ಇಳಿದು ದ್ವಾರಕ ದರ್ಶನ ಮಾಡಿ ಪೂಜೆ ಸಲ್ಲಿಸಿರುವುದು ಭಾರಿ ಶ್ಲಾಘನೆಗೆ ಒಳಗಾಗಿದೆ. ಈ ಅನುಭವವು ಭಾರತದ ಆಧ್ಯಾತ್ಮಿಕ ಮತ್ತು ಐತಿಹಾಸಿಕ ಬೇರುಗಳಿಗೆ ಅಪರೂಪದ ಮತ್ತು ಆಳವಾದ ಸಂಪರ್ಕ ನೀಡಿದೆ.

ನಕಲಿ ದಾಖಲಿ ಸೃಷ್ಟಿಸಿ ಮೃತ ವ್ಯಕ್ತಿ ಆಸ್ತಿ ಲಪಟಾಯಿಸಲು ಯತ್ನ

ಮೂವರ ವಿರುದ್ಧ ಉಪ ವಿಭಾಗಾಧಿಕಾರಿ ದೂರು ದಾಖಲು

ಮೈಸೂರು, ಫೆ.25(ಆರ್‌ಕೆ)– ನಕಲಿ ದಾಖಲೆ ಸೃಷ್ಟಿಸಿ ಮೃತ ವ್ಯಕ್ತಿ ಹೆಸರಿನಲ್ಲಿ ಲಕ್ಷಾಂತರ ರೂ. ಮೌಲ್ಯದ ಜಮೀನು ಲಪಟಾಯಿಸಲೆತ್ನಿಸಿರುವ ಮೂವರ ವಿರುದ್ಧ ಮೈಸೂರು ಉಪ ವಿಭಾಗಾಧಿಕಾರಿ ಕೆ.ಆರ್.ರಕ್ಷಿತ್ ಅವರು ಎನ್.ಆರ್.ಠಾಣೆಗೆ ದೂರು ನೀಡಿದ್ದಾರೆ.

ಮೈಸೂರಿನ ರಾಜೇಂದ್ರನಗರದ ನಿವಾಸಿಗಳಾದ ಎಂ.ಈಶ್ವರಯ್ಯ, ಇಲಿಯಾಸ್ ಅಹಮ್ಮದ್, ಅಬೂಬಕರ್ ಎಂಬುವರೇ ಆಸ್ತಿ ಲಪಟಾಯಿಸಲು ಯತ್ನಿಸಿದವರಾಗಿದ್ದು, ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಬಂಧಿಸುವಂತೆ ಉಪ ವಿಭಾಗಾಧಿಕಾರಿಗಳು ಜ.22ರಂದು ದೂರು ನೀಡಿದ್ದಾರೆ. ಮೈಸೂರು ತಾಲೂಕು ಕೆಸರೆ ಗ್ರಾಮದ ಸರ್ವೆ ನಂ.609ರಲ್ಲಿ 0.14 ಗುಂಟೆ ಜಮೀನು ಹೊಂದಿದ್ದ ಕುಳ್ಳಯ್ಯ ಎಂಬುವರು ಎಂ.ಈಶ್ವರಯ್ಯ ಅವರಿಗೆ ಜಮೀನಿನ ಜಿಪಿಎ ಮಾಡಿಸಿಕೊಟ್ಟಿರುವುದಾಗಿ ಆ ಪ್ರಕಾರ ಅವರು ಸದರಿ ಸ್ವತ್ತನ್ನು ಇಲಿಯಾಸ್ ಅಹಮ್ಮದ್ ಹಾಗೂ ಅಬೂಬಕರ್ ಎಂಬುವರಿಗೆ ಕ್ರಯ ಮಾಡಿರುತ್ತಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ನಂತರ ಕ್ರಯ ಬರೆಸಿಕೊಂಡ ಇಲಿಯಾಸ್ ಅಹಮ್ಮದ್ ಹಾಗೂ ಅಬೂಬಕರ್ ಅವರು ಖಾತೆ ದಾಖಲಿಸುವಂತೆ ಅರ್ಜಿ ಸಲ್ಲಿಸಿದ ಹಿನ್ನೆಲೆಯಲ್ಲಿ ಅವರು ಹಾಜರುಪಡಿಸಿದ ದಾಖಲಾತಿಗಳನ್ನು ಪರಿಶೀಲಿಸಲಾಗಿ ಕುಳ್ಳಯ್ಯ ಅವರ ● 8ನೇ ಪುಟಕ್ಕೆ

ಸಂವಿಧಾನ ಮತ್ತು ರಾಷ್ಟ್ರೀಯ ಐಕ್ಯತಾ ಸಮಾವೇಶದ ಸಮಾರೋಪ

ಸಂವಿಧಾನ ಬದಲಿಸುತ್ತೇವೆ ಎಂದವರನ್ನು ಅಧಿಕಾರದಿಂದ ಕಿತ್ತೊಗೆಯದಿದ್ದರೆ ಪ್ರಜಾಪ್ರಭುತ್ವಕ್ಕೆ ಉಳಿಗಾಲವಿಲ್ಲ

ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ

ಬೆಂಗಳೂರು, ಫೆ.25– ಸಂವಿಧಾನ ಬದಲಾಯಿಸಲು ಬಂದಿರುವವರನ್ನು ಅಧಿಕಾರದಿಂದ ಕಿತ್ತೊಗೆಯದಿದ್ದರೆ ಪ್ರಜಾಪ್ರಭುತ್ವಕ್ಕೆ ಉಳಿಗಾಲವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದರು.

ಅರಮನೆ ಮೈದಾನದಲ್ಲಿ ನಡೆದ ಸಂವಿಧಾನ ಮತ್ತು ರಾಷ್ಟ್ರೀಯ ಐಕ್ಯತಾ ಸಮಾವೇಶದ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಇಡೀ ವಿಶ್ವದ ಸಂವಿಧಾನಗಳನ್ನೆಲ್ಲಾ ಅಧ್ಯಯನ ಮಾಡಿ ಎಲ್ಲದರಲ್ಲಿರುವ ಅತ್ಯುತ್ತಮ ಸಾರವನ್ನು ತೆಗೆದು ಡಾ.ಬಿ.ಆರ್.ಅಂಬೇಡ್ಕರ್ ಅವರು ಸಾಮಾಜಿಕ ನ್ಯಾಯದ ಹಕ್ಕುಗಳನ್ನು ನಮ್ಮ ಸಂವಿಧಾನದಲ್ಲಿ ಸೇರಿಸಿದ್ದಾರೆ. ಬುದ್ದ, ಬಸವಾದಿ ಶರಣರು, ವಚನ ಕ್ರಾಂತಿಯ ಆಶಯಗಳು ಮತ್ತು ಕುವೆಂಪು, ನಾರಾಯಣ ಗುರು, ವಿವೇಕಾನಂದ ಸೇರಿದಂತೆ ಮಹನೀಯರ ಆಶಯಗಳ ಮೂರ್ತರೂಪ ನಮ್ಮ ಸಂವಿಧಾನವಾಗಿದೆ ಎಂದು



ಸಂವಿಧಾನ ಮತ್ತು ರಾಷ್ಟ್ರೀಯ ಐಕ್ಯತಾ ಸಮಾವೇಶದ ಸಮಾರೋಪ ಸಮಾರಂಭವನ್ನು ನಗಾರಿ ಬಾರಿಸುವ ಮೂಲಕ ಸಿಎಂ ಸಿದ್ದರಾಮಯ್ಯ ಉದ್ಘಾಟಿಸಿದರು.

ವಿವರಿಸಿದರು. ನರೇಂದ್ರಮೋದಿಯವರ ಮಂತ್ರಿಮಂಡಲದಲ್ಲಿ ಇದ್ದುಕೊಂಡೇ ಕೇಂದ್ರ ಸಚಿವರಾಗಿದ್ದ ಅನಂತ ಕುಮಾರ ಹೆಗ್ಡೆ ನಾವು ಅಧಿಕಾರಕ್ಕೆ ಬಂದಿರುವುದೇ ಸಂವಿಧಾನ ಬದಲಾಯಿಸಲು ಎಂದು ಘೋಷಿಸಿದರು. ಈ ಘೋಷಣೆಯನ್ನು ಪ್ರಧಾನಿ ಮೋದಿಯವರಾಗಲೀ, ಅಮಿತ್ ಶಾ ಆಗಲೀ, ಬಿಜೆಪಿಯಾಗಲೀ, ಆರ್‌ಎಸ್‌ಎಸ್ ಆಗಲಿ ಖಂಡಿಸಲಿಲ್ಲ ವಿರೋಧಿಸಲಿಲ್ಲ. ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ಅಜೆಂಡಾ ಹಾಗೂ ಉದ್ದೇಶವನ್ನು ಅನಂತಕುಮಾರ ಹೆಗ್ಡೆ ಬಾಯಲ್ಲಿ ಹೇಳಿಸಿದರು. ಈ ಬಗ್ಗೆ ಇಡೀ ದೇಶದ ಜನತೆ ಎಚ್ಚೆತ್ತುಕೊಳ್ಳಬೇಕು ಎಂದರು.


ಈ ದೇಶದ, ನಮ್ಮ ನಾಡಿನ ದುಡಿಯುವವರ ಹಕ್ಕುಗಳು, ಶ್ರಮಿಕರು, ರೈತರು, ಕಾರ್ಮಿಕರು ಮತ್ತು ಮಹಿಳಾ ಸಮುದಾಯದ ಅಸ್ತಿತ್ವ ಅಡಗಿರುವುದೇ ನಮ್ಮ ಸಂವಿಧಾನದಲ್ಲಿ. ಸಂವಿಧಾನ ಬದಲಾವಣೆಯಿಂದ ● 8ನೇ ಪುಟಕ್ಕೆ

ವಿಧಾನಮಂಡಲ ಅಧಿವೇಶನ ಬುಧವಾರದವರೆಗೆ ವಿಸ್ತರಣೆ

ಬೆಂಗಳೂರು, ಫೆ.25–ಶಾಸಕ ರಾಜಾ ವೆಂಕಟಪ್ಪ ನಾಯಕ ನಿಧನರಾಗಿರುವ ಕಾರಣ ವಿಧಾನಮಂಡಲ ಅಧಿವೇಶನವನ್ನು ಬುಧವಾರದವರೆಗೆ ವಿಸ್ತರಿಸಲಾಗಿದೆ.

ವಿಧಾನಮಂಡಲ ಅಧಿವೇಶನ ಫೆ.23ರವರೆಗೆ ನಿಗದಿಯಾಗಿತ್ತು. ಬಜೆಟ್ ಮೇಲಿನ ಚರ್ಚೆಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ತರಿಸಿ, ಪ್ರಸಕ್ತ ವರ್ಷದ ಪೂರಕ ಅಂದಾಜುಗಳಿಗೆ ಒಪ್ಪಿಗೆ ಪಡೆದು ಅಧಿವೇಶನ ಅನಿರ್ದಿಷ್ಟಾವಧಿಗೆ ಮುಂದೂಡಬೇಕಾಗಿತ್ತು. ಆದರೆ ಸಿದ್ದರಾಮಯ್ಯನವರಿಗೆ ಅನಾರೋಗ್ಯ ಕಾಣಿಸಿಕೊಂಡಿದ್ದರಿಂದ ಫೆ.23ರಂದು ಅವರು ವಿಧಾನಸಭೆಗೆ ಹಾಜರಾಗದ ಕಾರಣ ಅಧಿವೇಶನವನ್ನು ಸೋಮವಾರ ದವರೆಗೆ ವಿಸ್ತರಿಸಲಾಗಿತ್ತು. ಆದರೆ ಶಾಸಕ ರಾಜಾ ವೆಂಕಟಪ್ಪ ನಾಯಕ ಅವರು ನಿಧನರಾಗಿರುವುದರಿಂದ ● 8ನೇ ಪುಟಕ್ಕೆ





ಜುಲೈ 1ರಿಂದ ಮೂರು ಹೊಸ ಅಪರಾಧ ಕಾನೂನುಗಳು ಜಾರಿಗೆ

ನವದೆಹಲಿ: ದೇಶದಲ್ಲಿ ಅಪರಾಧ ನ್ಯಾಯ ವ್ಯವಸ್ಥೆಯನ್ನು ಸಂಪೂರ್ಣವಾಗಿ ಮರುಪರಿಶೀಲಿಸಲು ಹೊಸದಾಗಿ ಜಾರಿಗೆ ತರಲಾದ ಮೂರು ಕಾನೂನುಗಳು ಜುಲೈ 1 ರಿಂದ ಜಾರಿಗೆ ಬರಲಿವೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಭಾರತೀಯ ನ್ಯಾಯ (ದ್ವಿತೀಯ) ಸಂಹಿತಾ, ಭಾರತೀಯ ನಾಗರಿಕ ಸುರಕ್ಷಾ (ದ್ವಿತೀಯ) ಸಂಹಿತಾ ಮತ್ತು ಭಾರತೀಯ ಸಾಕ್ಷ್ಯ (ದ್ವಿತೀಯ) ಕಾಯ್ದೆಗಳು ಜುಲೈನಿಂದ ಅನುಷ್ಠಾನಕ್ಕೆ ಬರಲಿವೆ. ಈ ಮೂರು ಕಾನೂನುಗಳಿಗೆ ಕಳೆದ ವರ್ಷ ಡಿಸೆಂಬರ್ 21ರಂದು ಸಂಸತ್ತಿನಲ್ಲಿ ಅನುಮೋದನೆ ನೀಡಲಾಗಿತ್ತು. ಡಿಸೆಂಬರ್ 25ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಂಕಿತ ಹಾಕಿದ್ದರು.

ಕೇಂದ್ರ ಗೃಹ ಸಚಿವಾಲಯ ಹೊರಡಿಸಿದ ಅಧಿಸೂಚನೆ ಪ್ರಕಾರ ಮೂರು ಹೊಸ ಕಾನೂನುಗಳ ನಿಬಂಧನೆಗಳು ಜುಲೈ 1ರಿಂದ ಜಾರಿಗೆ ಬರಲಿವೆ. ಈ ಕಾನೂನುಗಳು ವಸಾಹತುಶಾಹಿ-ಯುಗದ ಕ್ರಮವಾಗಿ ಭಾರತೀಯ ದಂಡ ಸಂಹಿತೆ, ಅಪರಾಧ ಪ್ರಕ್ರಿಯಾ ಸಂಹಿತೆ ಮತ್ತು 1872ರ ಭಾರತೀಯ ಸಾಕ್ಷಿ ಕಾಯ್ದೆಯನ್ನು ಬದಲಾಯಿಸಿವೆ. ಮೂರು ಕಾನೂನುಗಳು ವಿವಿಧ ಅಪರಾಧಗಳು ಮತ್ತು ಅವುಗಳ ಶಿಕ್ಷೆಗಳ ವ್ಯಾಖ್ಯಾನಗಳನ್ನು ನೀಡುವ ಮೂಲಕ ದೇಶದಲ್ಲಿ ಅಪರಾಧ ನ್ಯಾಯ ವ್ಯವಸ್ಥೆಯನ್ನು ಸಂಪೂರ್ಣವಾಗಿ ಕೂಲಂಕಷವಾಗಿ ಪರಿಶೀಲಿಸುವ ಗುರಿಯನ್ನು ಹೊಂದಿವೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಇಂದು ಮೂಕ ಸ್ಪಂದನೆ ಜಾಗೃತಿ ಅಭಿಯಾನ



ಮೈಸೂರು,ಫೆ.25– ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಬೇಸಿಗೆ ಬೇಗೆ ತೀವ್ರತೆ ಹಿನ್ನೆಲೆಯಲ್ಲಿ ಪ್ರಾಣಿ–ಪಕ್ಷಿಗಳಿಗೆ ನೀರು ಹಾಗೂ ಆಹಾರದ ಬಟ್ಟಲು ಅಳವಡಿಸುವ ಮೂಲಕ ಮೂಕ ಸ್ಪಂದನೆ ಎಂಬ ಜಾಗೃತಿ ಅಭಿಯಾನವನ್ನು ಚಾಮುಂಡಿಪುರಂ ವೃತ್ತದಲ್ಲಿರುವ ತಗಡೂರು ರಾಮಚಂದ್ರರಾವ್ ಉದ್ಯಾನವನದಲ್ಲಿ ಫೆ.26ರಂದು ಬೆಳಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್ ತಿಳಿಸಿದ್ದಾರೆ.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹಾದೇವಸ್ವಾಮಿ, ರಾಜ್ಯ ಹಿಂದುಳಿದ ವರ್ಗದ ಮೋರ್ಚಾದ ಅಧ್ಯಕ್ಷ ಆರ್.ರಘು ಕೌಟಿಲ್ಯ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಯಶಸ್ವಿ ಸೋಮಶೇಖರ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಮಾಜಿ ಕಾರ್ಪೊರೇಟರ್ ಮಾ.ವಿ.ರಾಮ್‌ಪ್ರಸಾದ್, ಉರಗ ತಜ್ಞ ಸ್ನೇಕ್ ಶ್ಯಾಮ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆ.ಆರ್. ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಕಡಕೊಳ ಜಗದೀಶ್ ಆಗಮಿಸಲಿದ್ದಾರೆ.

ಇಂದು ಸ್ವಾತಂತ್ರ್ಯ ವೀರ ಸಾವರ್ಕರ್ ಸ್ಮೃತಿ ದಿನ: ಪಂಜಿನ ಮೆರವಣಿಗೆ



ಮೈಸೂರು, ಫೆ.25– ಸ್ವಾತಂತ್ರ್ಯ ವೀರ ಸಾವರ್ಕರ್ ಸ್ಮೃತಿ ದಿನದ ಅಂಗವಾಗಿ ನಗರದ ಗನ್‌ಹೌಸ್ ಬಳಿಯ ಬಸವೇಶ್ವರ ಪುತ್ಥಳಿ ಮುಂಭಾಗ ಫೆ.26ರ ಸೋಮವಾರ ಸಂಜೆ 6.30ಕ್ಕೆ ಪಂಜಿನ ಮೆರವಣಿಗೆ ಪ್ರಾರಂಭವಾಗಿ ಚಾಮರಾಜ ಜೋಡಿ ರಸ್ತೆ ಮೂಲಕ ಸಾಗಿ ಸುಬ್ಬರಾಯನ ಕೆರೆಯ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಅಂತ್ಯಗೊಳ್ಳಲಿದೆ. ನಂತರ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ಹಿರಿಯ ನ್ಯಾಯವಾದಿ ಸಿ.ವಿ.ಕೇಶವಮೂರ್ತಿ ಅವರು ವೀರ ಸಾವರ್ಕರ್ ಕುರಿತು ಮಾತನಾಡಲಿದ್ದಾರೆ ಎಂದು ಸಾವರ್ಕರ್ ಪ್ರತಿಷ್ಠಾನದ ರಾಕೇಶ್ ಭಟ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಂಡಿನ ಮಾರಮ್ಮ ಸೇವಾ ಸಮಿತಿ ನೂತನ ಪದಾಧಿಕಾರಿಗಳು



ಮೈಸೂರು,ಫೆ.25–ಮೈಸೂರಿನ ದಂಡಿನ ಮಾರಮ್ಮ ಸೇವಾ ಸಮಿತಿಯ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಎಂ.ಮಹದೇವು (ಗೌರವ ಅಧ್ಯಕ್ಷ), ಚಂದ್ರಶೇಖರ್ (ಅಧ್ಯಕ್ಷ), ಕೆ.ಸುರೇಶ್ (ಉಪಾಧ್ಯಕ್ಷ), ಪಿ.ಎಸ್. ಶಂಕರನಾರಾಯಣ (ಪ್ರಧಾನ ಕಾರ್ಯದರ್ಶಿ), ಎಂ.ಶಿವಕುಮಾರ್ (ಸಹ ಕಾರ್ಯದರ್ಶಿ), ಎಸ್.ಲೋಕೇಶ (ಸಂಘಟನಾ ಕಾರ್ಯದರ್ಶಿ), ಆರ್.ಚಂದ್ರ–ಖಜಾಂಚಿ. ಗುರುಸಿದ್ದ, ಪಿ.ಸುರೇಶ, ಜಯರಾಮ್, ವಿಜಯಕುಮಾರ್ (ಸಂಚಾಲಕರು), ಡಿ.ರವಿ, ವಿ.ಎಸ್.ಮಹದೇವ, ಎಂ.ಸಿದ್ದರಾಜು, ರವಿಕುಮಾರ್, ಎಸ್. ಲೋಕೇಶ್, ಎಸ್.ಸಿದ್ದರಾಜು, ಎನ್. ಪ್ರತಾಪ್, ರಾಜು, ಕಿಶೋರ್ ಶರ್ಮ (ನಿರ್ದೇಶಕರು), ಕುಮಾರ್, ಪ್ರದೀಪ್, ಮಂಜುನಾಥ್ (ನಾಮನಿರ್ದೇಶಿತ ನಿರ್ದೇಶಕರು). ವಿ.ಶಂಕರ, ಭರತಕುಮಾರ್ (ಕಾನೂನು ಸಲಹೆಗಾರರು).



ಮೈಸೂರಿನ ರಾಮಾನುಜ ರಸ್ತೆಯಲ್ಲಿ ನಡೆದ ಶ್ರೀ ಎಲ್ಲಮ್ಮ ತಾಯಿ ಪೂಜಾ ಮಹೋತ್ಸವದಲ್ಲಿ ಅನ್ನದಾಸೋಹಕ್ಕೆ ಮಾಜಿ ಶಾಸಕ ಎಂಕೆ.ಸೋಮಶೇಖರ್ ಚಾಲನೆ ನೀಡಿದರು. ಈ ವೇಳೆ ಸಂತೋಷ್, ಸಂಜು, ಮಹಾದೇವು(ಗುಡ್ಡಪ್ಪ), ಪ್ರಜ್ವಲ್, ಮುಖೇಶ್, ಸಜನ್ ಮತ್ತಿತರರು ಉಪಸ್ಥಿತರಿದ್ದರು.

ಅನಂತಗೀತ ವಿದ್ಯಾಲಯದ ವಿದ್ಯಾರ್ಥಿಗಳು ಜಿಲ್ಲಾ ಮಟ್ಟದ ವಿಜ್ಞಾನ ರಸಪ್ರಶ್ನೆ ಸ್ಪರ್ಧೆಯಲ್ಲಿ ಪ್ರಥಮ



ಮೈಸೂರು ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ ಡಯಟ್ ವಸಂತ್ ಮಹಲ್ ವತಿಯಿಂದ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ವಿಜ್ಞಾನ ರಸಪ್ರಶ್ನೆ ಸ್ಪರ್ಧೆಯಲ್ಲಿ ಮೈಸೂರಿನ ವಿವಿಧ 9 ತಾಲೂಕುಗಳಿಂದ ಸುಮಾರು 18 ತಂಡಗಳು ಭಾಗವಹಿಸಿದ್ದವು. ಅಂತಿಮವಾಗಿ ಅನಂತಗೀತ ವಿದ್ಯಾಲಯದ ಪ್ರೇರಣ್, ಕುಶಾಲ್ ರಾಜ್ ಪ್ರಥಮ ಸ್ಥಾನ ಪಡೆದುಕೊಂಡರು. ವಿಜೇತರನ್ನು ಡಯಟ್‌ನ ಪ್ರಾಂಶುಪಾಲ ನಾಗರಾಜಯ್ಯ, ವಿಜ್ಞಾನ ರಸಪ್ರಶ್ನೆ ಸಂಚಾಲಕ ಬಸವರಾಜು, ಶಾಲೆ ಪ್ರಾಂಶುಪಾಲ ಶ್ರೀಕಾಂತ್, ಉಪಪ್ರಾಂಶುಪಾಲ ಲೋಕೇಶ್ ಹೆಚ್.ಪಿ. ಮತ್ತು ವಿಜ್ಞಾನ ಸಂಯೋಜಕಿ ಶ್ರೀಮತಿ ಉಷಾ ಅಭಿನಂದಿಸಿದರು.

ನಾಳೆ ಮೈವಿವಿಯಲ್ಲಿ ದತ್ತಿ ಉಪನ್ಯಾಸ

ಮೈಸೂರು, ಫೆ.25–ಮೈಸೂರು ಮಾನಸಗಂಗೋತ್ರಿಯ ಬಯೋಟೆಕ್ನಾಲಜಿ ವಿಭಾಗದ ವತಿಯಿಂದ ಫೆ27ರಂದು ಬೆಳಗ್ಗೆ 11 ಗಂಟೆಗೆ ವಿಜ್ಞಾನ ಭವನದ ಸಭಾಂಗಣದಲ್ಲಿ ಪ್ರೊಫಾಲ್ ನೀರ್ ಗಾರ್ಡ್ ಹಾಗೂ ಪ್ರೊ.ವಿಗ್ಗೋ ಸ್ಮಿಡೆ ಗಾರ್ಡ್ವರ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಬೆಂಗಳೂರಿನ ಇನ್ಸಿಟ್ಯೂಟ್‌ಆಫ್ ಬಯೋ ಇನ್ಫರ್ಮ್ಯಾಟಿಕ್ಸ್ ಮತ್ತು ಅನ್ವಯಿಕ ಜೈವಿಕ ತಂತ್ರಜ್ಞಾನದ ನಿರ್ದೇಶಕ ಪ್ರೊ.ಹೆಚ್.ಎಸ್.ಸುಬ್ರಮಣ್ಯ, 'ಪ್ರತಿ ಜೀವಕ ಔಷಧ ಆವಿಷ್ಕಾರದ ಹಿಂದಿನ, ಪ್ರಸ್ತುತ ಮತ್ತು ಭವಿಷ್ಯ' ವಿಷಯದ ಮೇಲೆ ಉಪನ್ಯಾಸ ನೀಡಲಿದ್ದಾರೆ.

ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಮೈಸೂರು, ಫೆ.25– ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದಲ್ಲಿ 2023–24ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಅರ್ಜಿಗಳನ್ನು ಸಲ್ಲಿಸಲು ಫೆ.29ರವರೆಗೆ ಅವಧಿ ವಿಸ್ತರಿಸಲಾಗಿದೆ.

2023–24ನೇ ಸಾಲಿಗೆ ಪೋಷಕರ ವಾರ್ಷಿಕ ವರಮಾನ 2.5 ಲಕ್ಷದೊಳಗಿರುವ ಮೈಸೂರು ತಾಲೂಕಿನ ಮೆಟ್ರಿಕ್ ನಂತರದ ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ನಿಗದಿತ ಸಮಯದೊಳಗೆ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ www.ssp.postmatric.karnataka.gov.in ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

ವಿದ್ಯಾರ್ಥಿಗಳು ಬ್ಯಾಂಕಿಗೆ ಭೇಟಿ ನೀಡಿ, ಅವರ ಆಧಾರ್ ಸಂಖ್ಯೆಯನ್ನು ಎನ್‌ಪಿಸಿಐ (ನ್ಯಾಷನಲ್ ಪೇಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ)ರಲ್ಲಿ ಬ್ಯಾಂಕ್ ಖಾತೆಗೆ ಆಧಾರ್ ಸೀಡಿಂಗ್ ಮಾಡಿಸುವುದು ಕಡ್ಡಾಯವಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೈಸೂರು ತಾಲೂಕಿನ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಗ್ರೇಡ್–1ರವರ ದೂ.ಸಂ:0821–2520910 ಅನ್ನು ಸಂಪರ್ಕಿಸಬಹುದು.

ಅತಿ ದೊಡ್ಡ ಧಾನ್ಯ ಸಂಗ್ರಹಾಗಾರ ಯೋಜನೆಗೆ ಪ್ರಧಾನಿ ಚಾಲನೆ





ಸಹಕಾರಿ ಕ್ಷೇತ್ರದಡಿ ವಿಶ್ವದ ಅತಿ ದೊಡ್ಡ ಧಾನ್ಯ ಸಂಗ್ರಹಾಗಾರಗಳ (ಉಗ್ರಾಣ) ನಿರ್ಮಾಣ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದರು.

ಹೊಸ ದಿಲ್ಲಿ: ಸಹಕಾರಿ ಕ್ಷೇತ್ರದಡಿ ವಿಶ್ವದ ಅತಿ ದೊಡ್ಡ ಧಾನ್ಯ ಸಂಗ್ರಹಾಗಾರಗಳ (ಉಗ್ರಾಣ) ನಿರ್ಮಾಣ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಿದರು. ಮುಂದಿನ ಐದು ವರ್ಷದಲ್ಲಿ 1.25 ಲಕ್ಷ ಕೋಟಿ ರೂ. ವೆಚ್ಚದಲ್ಲಿ 700 ಲಕ್ಷ ಟನ್ ಸಂಗ್ರಹ ಸಾಮರ್ಥ್ಯದ ಗೋದಾಮುಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆ.

11 ರಾಜ್ಯಗಳಲ್ಲಿ 11 ಪ್ರಾಥಮಿಕ ಕೃಷಿ ಪತ್ತಿನ ಸಾಲ ಸಂಘಗಳ ವತಿಯಿಂದ ನಿರ್ಮಿಸಲಾದ 11 ಗೋದಾಮುಗಳನ್ನು ಮೋದಿ ಲೋಕಾರ್ಪಣೆ ಮಾಡಿದರು. ದೇಶದ ರೈತರಿಗಾಗಿ 700 ಲಕ್ಷ ಟನ್ ಸಾಮರ್ಥ್ಯದ ದವಸ ಧಾನ್ಯ ಸಂಗ್ರಹಾಗಾರ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದೆ. ಸರಕಾರ ಯೋಜನೆಗೆ 1.25 ಲಕ್ಷ ರೂ. ಹಣ ವಿನಿಯೋಗಿಸಲಿದ್ದು, ದೇಶಾದ್ಯಂತ ನೂರಾರು ಹೊಸ ಹೊಸ ಗೋದಾಮುಗಳನ್ನು ನಿರ್ಮಾಣ ಮಾಡಲಾಗುವುದು. ರೈತರು ನಮ್ಮ ಪದಾರ್ಥಗಳನ್ನು ಗೋದಾಮಿನಲ್ಲಿ ಸಂಗ್ರಹಿಸಬಹುದು. ಮಾರುಕಟ್ಟೆಯಲ್ಲಿ ಸೂಕ್ತ ಬೆಲೆ ಬಂದಾಗ ಮಾರಬಹುದು ಎಂದು ಮೋದಿ ಹೇಳಿದರು.

ಆಮದು ಕಡಿತಕ್ಕೆ ಕರೆ: ಆಹಾರ ಪದಾರ್ಥಗಳು, ಖಾದ್ಯ ತೈಲ, ಬೇಳೆ ಕಾಳು, ರಸಗೊಬ್ಬರದ ಆಮದು ಕಡಿಮೆ ಮಾಡಲು ಸಹಕಾರ ಸಂಘಗಳು ಕಾರ್ಯೋನ್ಮುಖವಾಗಬೇಕು. ಆಮದು ವಸ್ತುಗಳನ್ನು ಪಟ್ಟಿ ಮಾಡಿಕೊಂಡು, ಸ್ಥಳೀಯವಾಗಿಯೇ ಉತ್ಪಾದಿಸಲು ಕ್ರಿಯಾ ಯೋಜನೆ ರೂಪಿಸುವಂತೆ' ಪ್ರಧಾನಿ ಮೋದಿ ಕರೆ ನೀಡಿದರು. ದೇಶಾದ್ಯಂತ ಹೊಸದಾಗಿ 500 ಗೋದಾಮುಗಳನ್ನು ನಿರ್ಮಾಣ ಮಾಡುವ ಯೋಜನೆಗೆ ಮೋದಿ ಅವರು ಶಂಕುಸ್ಥಾಪನೆ ನೆರವೇರಿಸಿದರು.

ಇದೇ ವೇಳೆ 18 ಸಾವಿರ ಕೋಟಿ ರೂ. ವೆಚ್ಚದಲ್ಲಿ ಮೇಲ್ದರ್ಜೆಗೆ ಏರಿಸಲಾದ ಗಣಕೀಕೃತ ಪ್ರಾಥಮಿಕ ಕೃಷಿ ಪತ್ತಿನ ಸಾಲ ಸಂಘಗಳಿಗೆ ಚಾಲನೆ ನೀಡಿದರು.

ಸಂತ ಜೋಸೆಫರ ಕಾಲೇಜಿಗೆ ಬಾಸ್ಕೆಟ್‌ಬಾಲ್ ಚಾಂಪಿಯನ್‌ಶಿಪ್



ಮೈಸೂರು,ಫೆ.25–ಮೈಸೂರು ವಿಶ್ವವಿದ್ಯಾಲಯ ಮತ್ತು ಮಹಾಜನ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಇತ್ತೀಚೆಗೆ ನಡೆದ ಮೈಸೂರು ವಿವಿ ಅಂತರ ಕಾಲೇಜು ಚಾಮುಂಡಿ ವಲಯ ಕ್ರೀಡಾಕೂಟದಲ್ಲಿ ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಬಾಸ್ಕೆಟ್‌ಬಾಲ್ ಪಂದ್ಯಾವಳಿಯಲ್ಲಿ ಚಾಂಪಿಯನ್ ಪಟ್ಟ ಮುಡಿಗೇರಿಸಿಕೊಂಡಿದ್ದಾರೆ.

ಹಾಗೇ ಮೈಸೂರು ವಿಶ್ವವಿದ್ಯಾಲಯ ಮತ್ತು ಶೇಷಾದ್ರಿಪುರಂ ಪದವಿ ಕಾಲೇಜಿನ ಸಹಭಾಗಿತ್ವದಲ್ಲಿ ಆಯೋಜಿಸಿದ್ದ ಹಾಕಿ ಪಂದ್ಯಾವಳಿಯಲ್ಲೂ ಜಯಗಳಿಸಿ ಅಂತರ ಕಾಲೇಜುಗಳ ಅಂತರ ವಲಯ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಕೆಸರೆಯ ಎಂಐಟಿ ಕಾಲೇಜಿನಲ್ಲಿ ನಡೆದ 2023–24ನೇ ಸಾಲಿನ ಮೈಸೂರು ನಗರ ಅಂತರ ಕಾಲೇಜು ಮಟ್ಟದ ಕ್ರೀಡಾಕೂಟದ ಹ್ಯಾಂಡ್ ಬಾಲ್‌ನಲ್ಲಿ ಜಯಗಳಿಸಿ ಚಾಂಪಿಯನ್ಸ್ ಆಗಿ ಹೊರಹೊಮ್ಮಿದ್ದಾರೆ.

ಮೈಸೂರು ವಿಶ್ವವಿದ್ಯಾಲಯ ಮತ್ತು ಶೇಷಾದ್ರಿಪುರಂ ಪದವಿ ಕಾಲೇಜಿನ ಸಹಭಾಗಿತ್ವದಲ್ಲಿ ಆಯೋಜಿಸಿದ್ದ ಕರಾಟೆ ಕಿಕ್ ಬಾಕ್ಸಿಂಗ್ ಪಂದ್ಯಾವಳಿಯಲ್ಲೂ ಭಾಗವಹಿಸಿ 12 ಪದಕಗಳನ್ನು ಮುಡಿಗೇರಿಸಿಕೊಂಡು ಇಡೀ ಕ್ರೀಡಾಕೂಟದಲ್ಲೇ ಯಶಸ್ವಿ ತಂಡವಾಗಿ ಹೊರಹೊಮ್ಮಿದೆ. ಇದರಲ್ಲಿ ಕ್ರಮವಾಗಿ ಕರಾಟೆಯಲ್ಲಿ 5 ಪದಕ ಮತ್ತು ಕಿಕ್ ಬಾಕ್ಸಿಂಗ್‌ನಲ್ಲಿ 6 ಪದಕಗಳನ್ನು ಗೆದ್ದುಕೊಂಡಿದ್ದಾರೆ.

ಪದಕ ವಿಜೇತರ ಪಟ್ಟಿ

ಪ್ರೀತಂ ಎಂ.ಎಸ್.–1 ಚಿನ್ನ (ಕಿಕ್ ಬಾಕ್ಸಿಂಗ್) ಮತ್ತು 1 ಚಿನ್ನ (ಕರಾಟೆ), ಪವನ್ ಎಂಎಸ್–1 ಚಿನ್ನ (ಕಿಕ್ ಬಾಕ್ಸಿಂಗ್) ಮತ್ತು 1 ಕಂಚು (ಕರಾಟೆ), ಚೇತನ್–1 ಬೆಳ್ಳಿ ಮತ್ತು 1 ಕಂಚು (ಕರಾಟೆ), ವಿನಯ್ ಕೆ–1 ಚಿನ್ನ (ಕಿಕ್ ಬಾಕ್ಸಿಂಗ್) ನಿತಿನ್ –1 ಬೆಳ್ಳಿ (ಕಿಕ್ ಬಾಕ್ಸಿಂಗ್), ದುರ್ಗಾ ಭವಾನಿ –1 ಚಿನ್ನ (ಕಿಕ್ ಬಾಕ್ಸಿಂಗ್), ಕಾವೇರಮ್ಮ– 1 ಚಿನ್ನ ಮತ್ತು 1 ಬೆಳ್ಳಿ (ಕರಾಟೆ), ಲೇಖನ್ – 1 ಬೆಳ್ಳಿ (ಕರಾಟೆ). ವಿಜೇತ ವಿದ್ಯಾರ್ಥಿಗಳೊಂದಿಗೆ ಎಂಡಿಈಎಸ್ ಕಾರ್ಯದರ್ಶಿ ವಂ.ಗು.ವಿಜಯ್ ಕುಮಾರ್, ಆಡಳಿತಾಧಿಕಾರಿ ವಂ. ಗು. ಅವಿನಾಶ್, ಪ್ರಾಂಶುಪಾಲ ಎಚ್.ಎನ್. ಚಂದ್ರಶೇಖರ, ಉಪ ಪ್ರಾಂಶುಪಾಲರಾದ ಶಿಲ್ಪಾ ಆರ್, ದೈಹಿಕ ನಿರ್ದೇಶಕರು ಕೆ.ಎಸ್.ಹರೀಶ್‌ಕುಮಾರ್ ಇದ್ದಾರೆ.

ರಾಜಕೀಯ ಪಕ್ಷಗಳನ್ನು ಸಹ ಆರೋಪಿ ಸ್ಥಾನದಲ್ಲಿ ನಿಲ್ಲಿಸಬಹುದು

ಬೆಂಗಳೂರು: ರಾಜಕೀಯ ಪಕ್ಷವನ್ನೂ ಆರೋಪಿಯನ್ನಾಗಿ ಮಾಡಬಹುದೆಂದು ಕರ್ನಾಟಕ ಹೈಕೋರ್ಟ್ ತೀರ್ಪು ನೀಡಿರುವುದರಿಂದ ಬಿಜೆಪಿ ವಿರುದ್ಧ ಮಾನನಷ್ಟ ಮೊಕದ್ದಮೆ ವಿಚಾರಣೆ ಮುಂದುವರೆಯಲಿದೆ. ಬಿಜೆಪಿಯ ವಾದವನ್ನು ತಳ್ಳಿಹಾಕಿದ ಹೈಕೋರ್ಟ್, ಒಬ್ಬ ವ್ಯಕ್ತಿ ಮಾತ್ರವಲ್ಲ, ರಾಜಕೀಯ ಪಕ್ಷಗಳಂತಹ ಘಟಕಗಳು ಸೇರಿದಂತೆ ವ್ಯಕ್ತಿಗಳ ಸಂಘಗಳ ವಿರುದ್ಧವೂ ಕ್ರಿಮಿನಲ್ ಮಾನನಷ್ಟ ಪ್ರಕರಣಗಳಲ್ಲಿ ಆರೋಪಿಯೆಂದು ನಿರ್ಧಾರಕ್ಕೆ ಬರಬಹುದು ಎಂದು ಹೇಳಿದೆ.

ಐಪಿಸಿ ಸೆಕ್ಷನ್ 499 ಮತ್ತು 500 ಸೆಕ್ಷನ್‌ಗಳಲ್ಲಿ 'ಯಾರು' ಎಂಬ ಪದವು ಸೂಚ್ಯವಾಗಿ ವ್ಯಕ್ತಿಗಳ ಸಂಘವನ್ನು ಒಳಗೊಂಡಿರುತ್ತದೆ. ಇದರಲ್ಲಿ ಅರ್ಜಿದಾರರಂತೆಯೇ ಸಂಘಟಿತರಾಗಿದ್ದರೂ ಅಥವಾ ಇಲ್ಲದಿದ್ದರೂ ಮತ್ತು ಅಂತಹ ಘಟಕಗಳನ್ನು ಕ್ರಿಮಿನಲ್ ಪ್ರಕ್ರಿಯೆಗಳಲ್ಲಿ ಆರೋಪಿಗಳೆಂದು ಹೇಳಬಹುದು ಎಂದು ನ್ಯಾಯಮೂರ್ತಿ ಕೃಷ್ಣ ಎಸ್ ದೀಕ್ಷಿತ್ ಅವರು, ಕಾಂಗ್ರೆಸ್ ಶಾಸಕ ರಿಜ್ವಾನ್ ಅರ್ಷದ್ ದಾಖಲಿಸಿರುವ ಮಾನನಷ್ಟ ಮೊಕದ್ದಮೆಯನ್ನು ಪ್ರಶ್ನಿಸಿ ಬಿಜೆಪಿಯ ಅಂದಿನ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದರು.



2019ರಲ್ಲಿ ಬಿಜೆಪಿ ತನ್ನ ವಿರುದ್ಧ ಮಾಡಿದ ಅವಹೇಳನಕಾರಿ ಟ್ವೀಟ್‌ನ್ನು ಪ್ರಶ್ನಿಸಿ ಸೆಕ್ಷನ್ 499ರ ಅಡಿಯಲ್ಲಿ ರಿಜ್ವಾನ್ ಅವರು ಸಲ್ಲಿಸಿದ ಖಾಸಗಿ ದೂರಿನ ಆಧಾರದ ಮೇಲೆ ನಗರದ ಮಾಜಿ ಮತ್ತು ಹಾಲಿ ಸಂಸದರು ಮತ್ತು ಶಾಸಕರ ವಿರುದ್ಧ ಪ್ರಕರಣಗಳನ್ನು ವಿಚಾರಣೆ ಮಾಡಲು ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಬಾಕಿ ಉಳಿದಿರುವ ಪ್ರಕರಣವನ್ನು ಪ್ರಶ್ನಿಸಿ ಬಿಜೆಪಿ ನ್ಯಾಯಾಲಯದ ಮೆಟ್ಟಿಲೇರಿತ್ತು. ಬಿಜೆಪಿಯು ತಾನು ಒಂದು ರಾಜಕೀಯ ಪಕ್ಷವಾಗಿದ್ದು ವ್ಯಕ್ತಿಯಲ್ಲ, ಘಟಕಗಳು ಐಪಿಸಿಯ 499 ಮತ್ತು 500 ಸೆಕ್ಷನ್‌ಗಳಲ್ಲಿ 'ಯಾರು' ಎಂಬ ಪದಕ್ಕೆ ಹೊಂದಿಕೆಯಾಗುವುದಿಲ್ಲ. ಆದ್ದರಿಂದ, ಅಂತಹ ಪ್ರಕ್ರಿಯೆಗಳನ್ನು ನಿರ್ವಹಿಸಲಾಗುವುದಿಲ್ಲ. ಆದಾಗ್ಯೂ, ಖಾಸಗಿ ವ್ಯಕ್ತಿಗಳಿಗಿಂತ ಭಿನ್ನವಾಗಿ, ರಾಜಕಾರಣಿಗಳು ಮತ್ತು ರಾಜಕೀಯ ಪಕ್ಷಗಳು ಪ್ರಜ್ಞಾಪೂರ್ವಕವಾಗಿ ಸಾರ್ವಜನಿಕರಿಂದ ನಿಕಟ ಪರಿಶೀಲನೆಗೆ ತಮ್ಮನ್ನು ಒಡ್ಡಿಕೊಳ್ಳುತ್ತಿರುತ್ತಾರೆ. ಆದ್ದರಿಂದ ಅವರು ಹೆಚ್ಚಿನ ಮಟ್ಟದ ಸಹಿಷ್ಣುತೆಯನ್ನು ಪ್ರದರ್ಶಿಸಬೇಕು ಎಂದು ನ್ಯಾಯಾಲಯ ಹೇಳಿದೆ.

ಪೋಷಕಾಂಶಗಳ ಬಳಕೆ ಸಾಮರ್ಥ್ಯ ಹೆಚ್ಚಿಸಲು ರಸಾವರಿ ತಂತ್ರಜ್ಞಾನ ಅಳವಡಿಕೆ ಅವಶ್ಯ

ಕೃಷಿ ವಿಜ್ಞಾನಿ ಡಾ. ರಾಜಣ್ಣ ರೈತರಿಗೆ ಸಲಹೆ

ಮೈಸೂರು,ಫೆ.25– ಪೋಷಕಾಂಶಗಳ ಬಳಕೆ ಸಾಮರ್ಥ್ಯ ಹೆಚ್ಚಿಸಲು ರಸಾವರಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕು ಆಗ ರೈತರಿಗೆ ಹೆಚ್ಚಿನ ಇಳುವರಿ ಪಡೆಯಲು ಸಹಕಾರಿಯಾಗುತ್ತದೆ ಎಂದು ಸುತ್ತೂರು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ.ರಾಜಣ್ಣ ರೈತರಿಗೆ ಸಲಹೆ ನೀಡಿದರು.



ಏಚಗಳ್ಳಿ ಗ್ರಾಮದಲ್ಲಿ 'ತೋಟಗಾರಿಕೆ ಮತ್ತು ಕೃಷಿ ಬೆಳೆಗಳಲ್ಲಿ ಸೂಕ್ಷ್ಮ ನೀರಾವರಿ ಮತ್ತು ರಸಾವರಿ ತಾಂತ್ರಿಕತೆಗಳ ಅಳವಡಿಕೆ' ವಿಷಯ ಕುರಿತು ಕಾರ್ಯಾಗಾರ ನಡೆಯಿತು.

ನಾಗನಹಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ವತಿಯಿಂದ ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ನಂಜನಗೂಡು ತಾಲೂಕಿನ ಚಿಕ್ಕಯ್ಯನಛತ್ರ ಹೋಬಳಿಯ ಏಚಗಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ 'ತೋಟಗಾರಿಕೆ ಮತ್ತು ಕೃಷಿ ಬೆಳೆಗಳಲ್ಲಿ ಸೂಕ್ಷ್ಮ ನೀರಾವರಿ ಮತ್ತು ರಸಾವರಿ ತಾಂತ್ರಿಕತೆಗಳ ಅಳವಡಿಕೆ' ವಿಷಯದ ಮೇಲಿನ ಒಂದು ದಿನದ ಹೊರಾಂಗಣ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸೂಕ್ಷ್ಮ ನೀರಾವರಿ ಮತ್ತು ಹನಿನೀರಾವರಿ ಘಟಕಗಳನ್ನು ಅಳವಡಿಸಿ ಬಹುಬೆಳೆ ಪದ್ಧತಿಯನ್ನು ರೈತರು ಅನುಸರಿಸಿದರೆ ಆದಾಯವನ್ನು ಅಧಿಕಗೊಳಿಸಬಹುದು ಎಂದರು.

ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಾಯಕ ಕೃಷಿ ನಿರ್ದೇಶಕಿ ಮಧುಲತಾ ಹೆಚ್.ಬಿ. ಮಾತನಾಡಿ, ಹೆಚ್ಚಿನ ರೈತರಿಗೆ ಮಣ್ಣು ಮತ್ತು ನೀರಿನ ಸಂರಕ್ಷಣೆಗೆ ಬಗ್ಗೆ ಅರಿವು ಮೂಡಿಸುವುದು ಹಾಗೂ ಹನಿ ಅಥವಾ ತುಂತುರು ನೀರಾವರಿ ತಾಂತ್ರಿಕತೆಗಳ ಅಳವಡಿಕೆ ಮತ್ತು ನಿರ್ವಹಣೆಯ ಬಗ್ಗೆ ಮನವರಿಕೆ ಮಾಡುವುದರ ಮೂಲಕ ಬೇಸಾಯಕ ಖರ್ಚು ಮತ್ತು ಬೆಳೆ ವೈಫಲ್ಯಗಳನ್ನು ಕಡಿಮೆ ಮಾಡುವುದು ಈ ತರಬೇತಿಯ ಮುಖ್ಯ ಉದ್ದೇಶ ಎಂದರು.


ನಾಗನಹಳ್ಳಿ ವಿಸ್ತರಣಾ ಶಿಕ್ಷಣ ಘಟಕದ ಸಹಾಯಕ ಪ್ರಾಧ್ಯಾಪಕ ಡಾ.ರಾಹುಲ್ ದಾಸ್ ಮಾತನಾಡಿ, ರೈತರು ಹನಿ ನೀರಾವರಿ ಘಟಕ ಅಳವಡಿಸುವ ಮುನ್ನ ವಹಿಸಬೇಕಾದ ಮುನ್ನೆಚ್ಚರಿಕಾ ಕ್ರಮಗಳು, ಮಣ್ಣು ಮತ್ತು ನೀರು ಪರೀಕ್ಷೆಗೆ ಮಾದರಿ ಸಂಗ್ರಹಣಾ ವಿಧಾನಗಳು ಹಾಗೂ ರಸಾವರಿ ನೀಡುವ ವಿಧಾನಗಳು, ರಸಗೊಬ್ಬರದ ಪ್ರಮಾಣಗಳು, ಆಮ್ಲದ ಉಪಚಾರದ ಬಗ್ಗೆ ಮಾಹಿತಿ ನೀಡಿದರು.

ನಂಜನಗೂಡು ತಾಲೂಕಿನ ಸಹಾಯಕ ಕೃಷಿ ನಿರ್ದೇಶಕ ರವಿ ಮಾತನಾಡಿ, ಸೂಕ್ಷ್ಮ ನೀರಾವರಿ ಹಾಗೂ ಹನಿ ನೀರಾವರಿ ಘಟಕಗಳನ್ನು ಕೃಷಿ ಬೆಳೆಗಳಾದ ಹತ್ತಿ ಮತ್ತು ತೊಗರಿ ಬೆಳೆಯಲ್ಲಿ ಅಳವಡಿಸುವುದರಿಂದ ಮಿತನೀರಿನ ಬಳಕೆಯಿಂದ ಉತ್ತಮ ಇಳುವರಿ ಪಡೆಯಲು ಸಾಧ್ಯ ಎಂದರು.

ನಂಜನಗೂಡು ತಾಲೂಕಿನ ಸಹಾಯಕ ತೋಟಗಾರಿಕಾ ಅಧಿಕಾರಿ ಸತೀಶ್ ಮಾತನಾಡಿ, ಹನಿ ನೀರಾವರಿ ಅಳವಡಿಕೆ ಹಾಗೂ ತೋಟಗಾರಿಕಾ ಇಲಾಖೆಯಿಂದ ದೊರೆಯುವ ಸವಲತ್ತುಗಳ ಬಗ್ಗೆ ಮಾಹಿತಿ ನೀಡಿದರು.

ತರಬೇತಿ ಸಂಯೋಜಕಿ ಮತ್ತು ಕೃಷಿ ಅಧಿಕಾರಿ ಮಂಜಳ, ಸ್ಥಳೀಯರಾದ ವೈ.ಕೆ. ಮಾದಪ್ಪ, ತಮ್ಮಣ್ಣ, ಮಲ್ಲಿಕಾರ್ಜುನಸ್ವಾಮಿ ಹಾಗೂ ರೈತರು, ರೈತ ಮಹಿಳೆಯರು ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.2.2024 ಸೋಮವಾರ, ಮಳೆ ನಕ್ಷತ್ರ: ಶತಭಿಷ 20.2.2024ರಿಂದ 03.03.2024 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಉತ್ತರಾ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ–ಡಾ.ಕೆ.ಸಿ.ಶಿವಪ್ಪ, 6.15–ಗೀತಾರಾಧನ 6.35. "ಅಂಚೆ ಅಂಕನ" ಆಕಾಶವಾಣಿ ಅಂಕಣ ಪ್ರಾಯೋಜಿತ ಬಾನುಲಿ ಸರಣಿ 6.40–ಪದ ಸಂಸ್ಕೃತಿ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, 6.50–ರೈತರಿಗೆ ಸಲಹೆ, 7.15–ಭಾವಗೀತೆಗಳು – ಅಜಯ್ ವಾರಿಯರ್, 9.05–ನೆನಪಿನಂಗಳ–"ವಾಲ್ಮೀಕಿ ರಾಮಾಯಣಕ್ಕೆ ತಿರುವು ಕೊಟ್ಟ ಪಾತ್ರ ಹನುಮಾನ್", ಪು.ತಿ.ನರಸಿಂಹಾಚಾರ್ ಮಾಡಿದ್ದ ಭಾಷಣ 2) ಪು.ತಿ.ನರಸಿಂಹಾಚಾರ್ ಅವರಿಂದ ಸ್ವರಚಿತ ಕವನ ವಾಚನ, 10–ಶ್ರೀರಾಮ್ ಭಟ್ ಹಾಡುಗಾರಿಕೆ, 12.30–ದೇವರನಾಮ, 12.45 ನಮ್ಮ ಆರೋಗ್ಯ ಸೈನಸಿಟಿಸ್ ಕಾರಣಗಳು ಮತ್ತು ಚಿಕಿತ್ಸೆ ಕುರಿತು ಡಾ.ಹರೀಂದ್ರ ಎಂ.ಎನ್. ಅವರೊಂದಿಗೆ ಮಾತುಕತೆ, 1.20–ಭಾವಗೀತೆಗಳು–ಸಿ.ಸಿಂಚನಾ, 3.00 ಟಿ.ಜಿ.ತ್ಯಾಗರಾಜನ್ ವಯೊಲಿನ್ ವಾದನ 4–ಮಹಿಳಾರಂಗ ಚರ್ಚೆ –"ವಿದ್ಯಾವಂತ ಗ್ರಾಮೀಣ ಯುವತಿಯರಿಗೆ ಇರುವ ಉದ್ಯೋಗ ಸಮಸ್ಯೆಗಳು ಭಾಗವಹಿಸುವವರು: ಚೈತ್ರ ಚೌಹಾಣ್, ನಿಶಿತಾ ಜಿ.ಡಿ. 4.45 ಹಿಂದಿ ಪಾಠ ಡಾ.ಮಧುಬಾಲಾ ಅಗರ್‌ವಾಲ್, 6.00'ಅಂಚೆ–ಅಂಕನ' ಆಕಾಶವಾಣಿ ಅಂಕಣ" ಪ್ರಾಯೋಜಿತ ಬಾನುಲಿ ಸರಣಿ, 6.50 ಕೃಷಿರಂಗ–'ಹಣ್ಣು ಹೊನ್ನು' ತೋಟಗಾರಿಕಾ ಬೆಳೆಗಳಲ್ಲಿ ಅಂಗಾಂಶ ಕೃಷಿ ಕುರಿತು ವಿಜಯೇಂದ್ರ ಕುಮಾ ಅವರೊಂದಿಗೆ ಸಂದರ್ಶನ 9.30 ಮತ್ತೆ ಕೇಳಿ 'ಹಾದಿಯಲ್ಲಿ ಕಂಡ ಮುಖ' "ಆಟೋ ರಂಗ ಸ್ವಾಮಿ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಅಬ್ದುಲ್ ರಶೀದ್ 10.30 ಸವಿನೆನಪು

- **ಧಾರ್ಮಿಕ ದತ್ತಿ ಇಲಾಖೆ, ಕರ್ನಾಟಕ ಸರ್ಕಾರ:** ಶ್ರೀ ತ್ರಿಣೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ಬೆಳಗ್ಗೆಯಿಂದ ಮಹಾಭಿಷೇಕ, ಸ್ಥಳ: ಮೈಸೂರು ಅರಮನೆ ಕೋಟೆ ಆವರಣದಲ್ಲಿರುವ ಶ್ರೀ ತ್ರಿಣೇಶ್ವರ ಸ್ವಾಮಿ ದೇವಸ್ಥಾನ.
- **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.
- **ಧಾರ್ಮಿಕ ದತ್ತಿ ಇಲಾಖೆ, ಕರ್ನಾಟಕ ಸರ್ಕಾರ:** ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವ–2024, ದ್ವಿತೀಯ ಉತ್ತರ ನಕ್ಷತ್ರ ಶ್ರೀಯವರಿಗೆ ಏಕದಶವಾರ ರುದ್ರಾಭಿಷೇಕ, ಸಹಸ್ರನಾಮಾಚರಣೆ, ವಿಶೇಷ ಪೂಜೆಗಳು, ಕದಲಿ ಅಲಂಕಾರ, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ಉತ್ತನಹಳ್ಳಿ, ಬೆಳಗ್ಗೆಯಿಂದ.
- **ಧಾರ್ಮಿಕ ದತ್ತಿ ಇಲಾಖೆ:** ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವ, ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರಿಗೆ ಏಕದಶವಾರ ರುದ್ರಾಭಿಷೇಕ, ಸುವರ್ಣಾಲಂಕಾರ, ಸಹಸ್ರನಾಮಾರ್ಚನೆ, ನಿವೇದನೆ, ಮಹಾಮಂಗಳಾರತಿ, ರಾಜೋಪಚಾರ, ರಾಷ್ಟ್ರಾಶೀರ್ವಾದ, ತೀರ್ಥಪ್ರಸಾದ ವಿನಿಯೋಗ, ಮ. 12.30ಕ್ಕೆ ಪ್ರಸಾದ ವಿನಿಯೋಗ, ಪ್ರದೋಷ ಕಾಲದ ಪೂಜೆ, ತ್ರಿಶತಿ ನಾಮಾರ್ಚನೆ, ರಾತ್ರಿ 9.30ಕ್ಕೆ ಅಮ್ಮನವರ ಕನ್ಯಾಕನ್ನಡಿ ಉತ್ಸವ ಪುಣ್ಯಾಹ ಮಂಟಪೋತ್ಸವ, ಸ್ಥಳ: ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ದೇವಸ್ಥಾನ, ಸರ್ಕಾರಿ ಉತ್ತನಹಳ್ಳಿ.
- **ಶ್ರೀ ಎಲ್ಲಮ್ಮಾಂಬ ಚುದ್ರುಪ್ಪಾಂಬ ಧರ್ಮ ಸಂಸ್ಥೆ ಟ್ರಸ್ಟ್:** 'ಏಳು ಕೊಳ್ಳದ ರೇಣುಕಾ ಎಲ್ಲಮ್ಮ ನಿಮ್ಮ ಪಾದಕ್ಕೆ ಉದೋ ಉದೋ' 77ನೇ ಜಾತ್ರಾ ಮಹೋತ್ಸವ, ರಾತ್ರಿ 7 ಗಂಟೆಗೆ ಶ್ರೀ ದೇವಿಯವರ ಉಯ್ಯಾಲೆಯಿಂದ ಇಳಿಸಿ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ಮಂಡಿಮೊಹಲ್ಲಾ.
- **ಶ್ರೀ ಚಿಕ್ಕಲಿಂಗೇಶ್ವರ ಸ್ವಾಮಿ ದೇವಸ್ಥಾನ:** ಶ್ರೀ ಮದ್ರಾಜಯೋಗಿ ಶ್ರೀ ಶ್ರೀ ಶ್ರೀ ಚಿಕ್ಕಲಿಂಗಣ್ಣ ಸ್ವಾಮಿಗಳವರ 87ನೇ ವರ್ಷದ ಆರಾಧನಾ ಮಹೋತ್ಸವ, ಬೆಳಗ್ಗೆ 7.30ರಿಂದ ಶ್ರೀ ಚಿಕ್ಕಲಿಂಗೇಶ್ವರ ಸ್ವಾಮಿಯವರಿಗೆ ಏಕವಾರ ರುದ್ರಾಭಿಷೇಕ, ಶ್ರೀ ಸಹಜಾನಂದ ಭಾರತಿ ಸ್ವಾಮಿ ವಿರಚಿತ ಶ್ರೀ ಗುರುಭಕ್ತಿ ಸಾರ ಕಾವ್ಯ ವಾಚನ, ಮಹಾಮಂಗಳವಾರತಿ, ಪ್ರಸಾದ ವಿನಿಯೋಗ, ಸ್ಥಳ: ಉಪ್ಪಿನಕೇರಿ, ಮಂಡಿಮೊಹಲ್ಲಾ.
- **ಶಾರದಾ ವಿಲಾಸ್ ಕಾಲೇಜ್ ಆಫ್ ಫಾರ್ಮಸಿ:** ಸಂಶೋಧನಾ ವಿಧಾನ ಮತ್ತು ಅಂಕಿ ಅಂಶಗಳ ಕುರಿತು ಕಾರ್ಯಾಗಾರ, ಮುಖ್ಯ ಅತಿಥಿಗಳು: ಶಾರದಾ ವಿಲಾಸ್ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ ಕಾರ್ಯದರ್ಶಿ ಎನ್.ಚಂದ್ರಶೇಖರ್, ಸಿಎಫ್‌ಟಿಆರ್‌ಐ ಪ್ರಧಾನ ವಿಜ್ಞಾನಿ ಡಾ.ಹರೀಶ್ ಪ್ರಶಾಂತ್, ಸ್ಥಳ: ಪ್ರೊ.ಚಿನ್ನಸ್ವಾಮಿ ಶೆಟ್ಟಿ ಕಾನ್ಫರೆನ್ಸ್ ಹಾಲ್, ಕಾಲೇಜು ಆವರಣ, ಬೆಳಗ್ಗೆ 10ರಿಂದ.
- **ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರ :** ಪದ್ಮಭೂಷಣ ಶ್ರೀಮತಿ ರುಕ್ಮಿಣಿ ದೇವಿ ಅರುಂಡಳೆ ಅವರ 120ನೇ ಜಯಂತಿ, ಕಲೆ ಮನೆ ಮಹೋತ್ಸವ–2024 ಸ್ಥಳ: #262, 1ನೇ ಕ್ರಾಸ್, ಕಲೆ ಮನೆ ಸಭಾಂಗಣ, ಎಂ.ಜಿ.ಕೊಪ್ಪಲು, ಹೆಬ್ಬಾಳು 2ನೇ ಹಂತ, ಮಧ್ಯಾಹ್ನ 2.30ಕ್ಕೆ.

ಬಂಡೀಪುರ ಅರಣ್ಯದಲ್ಲಿ ವನ್ಯಜೀವಿಗಳಿಗೆ ವರವಾಯ್ತು ಸೋಲಾರ್ ಬೋರ್‌ವೆಲ್, ನೆರವಾಯ್ತು ಮಂಗಲ ಡ್ಯಾಂ



ಕೆರೆಗೆ ನೀರುಣಿಸಲು ಸೋಲಾರ್ ಬೋರ್‌ವೆಲ್ ಅಳವಡಿಸಿರುವುದು.




ಬಂಡೀಪುರ ಅರಣ್ಯದ ನಡುವೆ ಇರುವ ಮಂಗಲ ಡ್ಯಾಂನ ವಿಹಂಗಮ ನೋಟ.

ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು, ಫೆ.25– ಮಳೆ ಕೊರತೆ ಹಾಗೂ ಬರಗಾಲದಿಂದಾಗಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕೆರೆಗಳಲ್ಲಿ ನೀರಿನ ಪ್ರಮಾಣ ಗಣನೀಯ ಪ್ರಮಾಣದಲ್ಲಿ ಕುಸಿತ ಕಂಡಿದ್ದು, ವನ್ಯಜೀವಿಗಳ ನೆರವಿಗೆ 57 ಸೋಲಾರ್ ಬೋರ್‌ವೆಲ್ ಹಾಗೂ ಅರಣ್ಯದೊಳಗಿರುವ ಮಂಗಲ ಡ್ಯಾಂ ನೆರವಿಗೆ ಬಂದಿದೆ.

ಕಳೆದ ಎರಡು ವರ್ಷದಿಂದ ಹಳೆ ಮೈಸೂರು ಭಾಗದಲ್ಲಿ ವಾಡಿಕೆ ಮಳೆಯಾಗದ ಹಿನ್ನೆಲೆಯಲ್ಲಿ ಈ ವರ್ಷ ಬರಗಾಲದ ಛಾಯೆ ತೀವ್ರಗೊಂಡಿದ್ದು, ಅದರ ಪ್ರಭಾವ ವನ್ಯಜೀವಿಗಳ ಮೇಲೂ ಬೀರುವ ಹಂತ ತಲುಪಿಸಿದೆ. ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಯ ವ್ಯಾಪ್ತಿಗೆ ಒಳಪಡುವ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ವನ್ಯಜೀವಿಗಳಿಗೆ ಕುಡಿಯುವ ನೀರಿನ ಹಾಹಾಕಾರ ಉಂಟಾಗುವ ಸಾಧ್ಯತೆ ಹೆಚ್ಚಾಗಿದೆ. ಈ ನಿಟ್ಟಿನಲ್ಲಿ ಸೋಲಾರ್ ಬೋರ್‌ವೆಲ್‌ಗಳು ಹಾಗೂ ಕಳೆದ ಮೂರು ವರ್ಷದಿಂದ ನೀರನ್ನು ಕಾಯ್ದುಕೊಂಡಿರುವ ಮಂಗಲ ಡ್ಯಾಂ ವನ್ಯಜೀವಿಗಳಿಗೆ ವರದಾನವಾಗಿ ಪರಿಣಮಿಸಿದೆ.

> “ಕೆಟ್ಟಿದ್ದ 20 ಸೋಲಾರ್ ಬೋರ್‌ವೆಲ್‌ಗಳಲ್ಲಿ ಫೆ.24ರವರೆಗೆ 15 ಬೋರ್‌ವೆಲ್‌ಗಳನ್ನು ದುರಸ್ತಿ ಮಾಡಿ ಕೆರೆಗಳಿಗೆ ನೀರುಣಿಸುವ ಪ್ರಕ್ರಿಯೆ ಆರಂಭಿಸಲಾಗಿದೆ. ಉಳಿದ 5 ಬೋರ್‌ವೆಲ್‌ಗಳನ್ನು ದುರಸ್ತಿ ಮಾಡುವ ಪ್ರಕ್ರಿಯೆ ನಡೆಯುತ್ತಿದ್ದು, ಶೀಘ್ರವೇ ಎಲ್ಲಾ 57 ಸೋಲಾರ್ ಬೋರ್‌ವೆಲ್‌ಗಳು ಕೆರೆಗಳಿಗೆ ನೀರು ಸರಬರಾಜು ಮಾಡುವ ಕಾರ್ಯ ಆರಂಭಿಸಲಿದೆ. ಬಂಡೀಪುರ ಅರಣ್ಯದಲ್ಲಿರುವ ಹಲವು ಕೆರೆಗಳಲ್ಲಿ ಇನ್ನೂ ನೀರು ಇರುವುದರಿಂದ ಈ ಬಾರಿ ಪ್ರಾಣಿಗಳಿಗೆ ನೀರಿನ ಕೊರತೆ ಉಂಟಾಗುವುದಿಲ್ಲ ಎಂಬ ಭಾವನೆ ನಮ್ಮಲ್ಲಿದೆ. ಮಂಗಲ ಡ್ಯಾಂ, ನುಗು ಹಾಗೂ ಕಬಿನಿ ಡ್ಯಾಂನ ಹಿನ್ನೀರಿನ ಪ್ರದೇಶವನ್ನು ಆನೆ ಸೇರಿದಂತೆ ಇತರ ಪ್ರಾಣಿಗಳು ಅವಲಂಬಿಸಿರುವುದರಿಂದ ನೀರಿನ ಕೊರತೆ ಉಂಟಾಗುವುದಿಲ್ಲ.
>
> 
>
> –ಡಾ.ಪಿ.ರಮೇಶ್‌ಕುಮಾರ್, ನಿರ್ದೇಶಕ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ

1036 ಚ.ಕಿ.ಮೀ. ವ್ಯಾಪ್ತಿಯ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶವನ್ನು 13 ವಲಯಗಳಾಗಿ ವಿಂಗಡಿಸಲಾಗಿದ್ದು, ಈಗಾಗಲೇ ವಿವಿಧ ವಲಯಗಳಲ್ಲಿ ವನ್ಯಜೀವಿಗಳಿಗೆ ಕುಡಿಯಲು ನೀರು ಒದಗಿಸುವ ಕೆರೆಗಳನ್ನು ಗುರುತಿಸಿ 57 ಕೆರೆಗಳಿಗೆ ಕೆಲ ವರ್ಷದ ಹಿಂದೆ ಬೋರ್‌ವೆಲ್ ಕೊರೆಸಿ ಸೋಲಾರ್ ಶಕ್ತಿಯಿಂದ ಚಾಲನೆಗೊಳ್ಳುವ ಮೋಟಾರ್ ಅಳವಡಿಸಲಾಗಿತ್ತು. 2022ರವರೆಗೆ ನಿಗದಿತ ಪ್ರಮಾಣದಲ್ಲಿ ಅರಣ್ಯ ಭಾಗದಲ್ಲಿ ಮಳೆಯಾಗಿದ್ದರಿಂದ ಬಂಡೀಪುರ ಅಭಯಾರಣ್ಯದಲ್ಲಿ ಎಲ್ಲಾ ಕೆರೆಗಳು ತುಂಬಿದ್ದವು. ಕೆರೆಗಳು ಕೋಡಿ ಬಿದ್ದ ಪರಿಣಾಮ ಬಂಡೀಪುರ ಅರಣ್ಯದ ನಡುವೆ ಇರುವ ಮಂಗಲ ಡ್ಯಾಂಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಬಂದಿತ್ತು. ಈ ನಡುವೆ ಸೋಲಾರ್ ಬೋರ್‌ವೆಲ್‌ಗಳು ಕಾರ್ಯ ನಿರ್ವಹಣೆ ಅವಶ್ಯಕತೆ ಕ್ಷೀಣಿಸಿತ್ತು.

ಆದರೆ ಈ ಬಾರಿ ಬರಗಾಲದ ಹಿನ್ನೆಲೆಯಲ್ಲಿ ಕುಡಿಯುವ ನೀರಿನ ಕೊರತೆ ಉಲ್ಬಣವಾಗುವ ಎಲ್ಲಾ ಲಕ್ಷಣಗಳೂ ಕಂಡುಬಂದಿವೆ. ತಮಿಳುನಾಡಿನ ಊಟಿ, ಗೂಡಲೂರು, ಮಧುಮಲೈ ಅರಣ್ಯ ಹಾಗೂ ಬಂಡೀಪುರ ವ್ಯಾಪ್ತಿಯಲ್ಲಿ ಫೆಬ್ರವರಿ ತಿಂಗಳ ಎರಡನೇ ವಾರದಲ್ಲಿ ವಾಡಿಕೆ ಮಳೆ ಬೀಳಬೇಕಾಗಿತ್ತು. ಆದರೆ ಈ ಬಾರಿ ಫೆಬ್ರವರಿ ತಿಂಗಳ ವಾಡಿಕೆ ಮಳೆ ಬಂದಿಲ್ಲದ ಕಾರಣ ಸಮಸ್ಯೆ ಬಿಗಡಾಯಿಸುವ ಹಂತಕ್ಕೆ ತಲುಪಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸೋಲಾರ್ ಬೋರ್‌ವೆಲ್‌ಗಳು ಪ್ರಾಣಿಗಳ ಹಿತ ಕಾಯುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿವೆ.

57 ಕೆರೆಗಳು: ಬಂಡೀಪುರ ಅರಣ್ಯದಲ್ಲಿ ಪ್ರಾಣಿಗಳು ಹೆಚ್ಚು ಅವಲಂಬಿಸಿರುವ 57 ಕೆರೆಗಳಿಗೆ ಸೋಲಾರ್ ಬೋರ್‌ವೆಲ್ ಅಳವಡಿಸಲಾಗಿತ್ತು. ಅವುಗಳಲ್ಲಿ ಈ ಬಾರಿ 20 ಸೋಲಾರ್ ಬೋರ್‌ವೆಲ್‌ಗಳು ಕೆಟ್ಟಿದ್ದವು. ಇದರಿಂದ ಕೆರೆಗಳಿಗೆ ನೀರುಣಿಸಲು ಸಾಧ್ಯವಾಗದೇ ಸಮಸ್ಯೆ ಉಲ್ಬಣವಾಗುವುದನ್ನು ಗಮನಿಸಿದ ಅಧಿಕಾರಿಗಳು ಕೆಟ್ಟಿದ್ದ ಬೋರ್‌ವೆಲ್‌ಗಳನ್ನು ದುರಸ್ತಿಪಡಿಸಲು ಕ್ರಮ ಕೈಗೊಂಡಿದ್ದಾರೆ. 15 ಬೋರ್‌ವೆಲ್‌ಗಳನ್ನು ದುರಸ್ತಿ ಮಾಡಲಾಗಿದ್ದು, ಕೆರೆಗೆ ನೀರುಣಿಸುವ ಪ್ರಕ್ರಿಯೆ ಪುನರಾರಂಭಿಸಲಾಗಿದೆ. ಉಳಿದ 5 ಬೋರ್‌ವೆಲ್‌ಗಳಲ್ಲಿ ಇನ್ನೆರಡು ದಿನದಲ್ಲಿ ದುರಸ್ತಿ ಮಾಡಲಾಗುತ್ತಿದೆ. ಮಾರ್ಚ್ ಆರಂಭದ ವೇಳೆಗೆ ಎಲ್ಲಾ ಸೋಲಾರ್ ಬೋರ್‌ವೆಲ್‌ಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ ಮಾಡಲಿದ್ದು, ಬೇಸಿಗೆಯಲ್ಲಿ ಪ್ರಾಣಿಗಳಿಗೆ ನೀರಿನ ಕೊರತೆ ನೀಗಿಸುವಲ್ಲಿ ಸಹಕಾರಿಯಾಗಲಿದೆ.

ಮಂಗಲ ಡ್ಯಾಂ: ಅರಣ್ಯ ಪ್ರದೇಶದಲ್ಲಿರುವ ಮಂಗಲ ಡ್ಯಾಂನಲ್ಲಿ ನೀರಿನ ಸಂಗ್ರಹ ಹೆಚ್ಚಾಗಿರುವುದರಿಂದ ಆನೆ ಸೇರಿದಂತೆ ಪ್ರಾಣಿಗಳಿಗೆ ನೆರವಾಗಿದೆ. ಬೇಸಿಗೆಯಲ್ಲಿ ಆನೆಗಳ ಹಿಂಡು ನುಗು ಹಾಗೂ ಕಬಿನಿ ಹಿನ್ನೀರಿನತ್ತ ವಲಸೆ ಹೋಗುವುದು ಸಂಪ್ರದಾಯ. ಆದರೆ ಚಿಕ್ಕ ಚಿಕ್ಕ ಮರಿಗಳನ್ನು ಹೊಂದಿರುವ ಆನೆಗಳು ಅಷ್ಟು ದೂರ ಮರಿಗಳನ್ನು ಕರೆದುಕೊಂಡು ಹೋಗಲು ಸಾಧ್ಯವಾಗುವುದಿಲ್ಲ. ಬೇಸಿಗೆಯ ಬೇಗೆಯಲ್ಲಿ ಹೆಚ್ಚು ದೂರ ಮರಿಗಳು ಕ್ರಮಿಸಿದರೆ ಅವುಗಳು ದೇಹದಲ್ಲಿ ನೀರಿನ ಅಂಶದ ಕೊರತೆ ಉಂಟಾಗಿ ಅನಾರೋಗ್ಯಕ್ಕೆ ತುತ್ತಾಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ನೀರು ಇರುವ ಕೆರೆಗಳ ಸುತ್ತಮುತ್ತಲಿನಲ್ಲೇ ಮರಿಗಳೊಂದಿಗೆ ವಾಸಿಸುತ್ತವೆ. ಈ ಹಿನ್ನೆಲೆಯಲ್ಲಿ ಮಂಗಲ ಡ್ಯಾಂ ಆನೆ ಸೇರಿದಂತೆ ಸಸ್ಯಾಹಾರಿ ಪ್ರಾಣಿಗಳಿಗೆ ವರದಾನವಾಗಿ ಪರಿಣಮಿಸಿದೆ. ಈ ಡ್ಯಾಂ 30 ವರ್ಷದ ನಂತರ ನೀರಿನಿಂದ ಕಂಗೊಳಿಸುತ್ತಿದ್ದು, ಆನೆಗಳು ಡ್ಯಾಂನತ್ತ ಆಕರ್ಷಿಸುತ್ತಿವೆ.

ಅರಣ್ಯ ಹಕ್ಕು ಅರ್ಹತಾ ಮಿತಿ 25 ವರ್ಷಕ್ಕಿಳಿಸುವಂತೆ ಕೇಂದ್ರಕ್ಕೆ ಶಿಫಾರಸು

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್



ಶಿವಮೊಗ್ಗ: ಪಾರಂಪರಿಕ ಅರಣ್ಯ ಹಕ್ಕು ಯೋಜನೆಯಲ್ಲಿ ಮೂರು ತಲೆಮಾರುಗಳ ಸಾಗುವಳಿ ಮಿತಿಯನ್ನು ಒಂದು ತಲೆಮಾರಿಗೆ ಅಂದರೆ 25 ವರ್ಷಕ್ಕೆ ಇಳಿಸುವಂತೆ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಪಾರಂಪರಿಕ ಅರಣ್ಯ ಹಕ್ಕು ಯೋಜನೆಯಲ್ಲಿ ಮೂರು ತಲೆಮಾರುಗಳ ಸಾಗುವಳಿ ಮಿತಿಯಲ್ಲಿ ರೈತರಿಗೆ ನ್ಯಾಯ ಸಿಗುತ್ತಿಲ್ಲ. ಹೀಗಾಗಿ ಅದನ್ನು 25 ವರ್ಷಕ್ಕೆ ಇಳಿಸುವಂತೆ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡುವ ಸಂಬಂಧ ಶೀಘ್ರದಲ್ಲೆ ರಾಜ್ಯ ಸರಕಾರ ತೀರ್ಮಾನ ಕೈಗೊಳ್ಳಲಿದೆ. ಶರಾವತಿ ಮುಳುಗಡೆ ಸಂತ್ರಸ್ತರ ರಕ್ಷಣೆಗೆ ನಮ್ಮ ಸರಕಾರ ಬದ್ಧವಾಗಿದೆ. ನಮ್ಮ ಸರಕಾರದ ಅವಧಿಯಲ್ಲಿ ಯಾವುದೇ ರೈತರನ್ನು ಒಕ್ಕಲೆಬ್ಬಿಸಲು ಅವಕಾಶ ನೀಡುವುದಿಲ್ಲ. ಜಿಲ್ಲೆಯಲ್ಲಿ ಯಾವುದೇ ಕಾರಣಕ್ಕೆ ರೈತರನ್ನು ಒಕ್ಕಲೆಬ್ಬಿಸುವಂತಿಲ್ಲ ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಬಿಜೆಪಿಯವರು ಮೂರು ವರ್ಷ ಅಧಿಕಾರದಲ್ಲಿದ್ದು ನಾಡಿನ ಬಡಜನರ ಬದುಕು ಕಟ್ಟಿಕೊಡುವ ಪ್ರಯತ್ನ ಮಾಡಲಿಲ್ಲ. ವಚನಕಾರ ಅಲ್ಲಮ ಪ್ರಭು ಹೇಳುವಂತೆ ಕೊಟ್ಟ ಕುದುರೆ ಏರದವನು ವೀರನೂ ಅಲ್ಲ, ಧೀರನೂ ಅಲ್ಲ. ಈಗ ಕಾಂಗ್ರೆಸ್ ಸರಕಾರದ ಅವಧಿಯಲ್ಲಿ ಜನರ ಬದುಕು ಮತ್ತು ಭದ್ರತೆಗಾಗಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ ಬಳಿಕ 'ಹರಿತೀನಿ, ಹರಿತೀನಿ ಅಂತಿದ್ದಾರೆ. ಅದೇನು ಹರಿತೀರ್ರಿ ನೀವು' ಎಂದು ಹೀಗಳೆದರು.

ಬಿಜೆಪಿ ಶಾಸಕ ಆರಗ ಜ್ಞಾನೇಂದ್ರ ಅವರು ಗ್ಯಾರಂಟಿ ಯೋಜನೆಗಳನ್ನು 420 ಎಂದು ಜರಿದಿದ್ದಾರೆ. ಜ್ಞಾನೇಂದ್ರ, ನಿನಗೆ ಜ್ಞಾನ ಇದೆಯೇನಪ್ಪ, ನಿನಗೆ ಅರ್ಧಜ್ಞಾನ ಇರಬಹುದು ಎಂದು ಏಕವಚನದಲ್ಲಿ ಟೀಕಿಸಿದ ಡಿಕೆಶಿ, ಗ್ಯಾರಂಟಿ ಯೋಜನೆಗಳ ಫಲಾನುಭವಿಗಳನ್ನೂ ನೀವು ಹಾಗೇ ಕರೆಯುತ್ತೀರಾ. ಬಿಜೆಪಿಯವರಿಗೆ ತಾಕತ್ತು ಇದ್ದರೆ 420 ಯೋಜನೆಗಳನ್ನು ವಾಪಸು ಮಾಡಿ ಎಂದು ಕರೆ ಕೊಡಿ ಎಂದು ಸವಾಲೆಸೆದರು.

ಬಡವರ ಜನ್‌ಧನ್ ಖಾತೆಗೂ ಹ್ಯಾಕರ್ಸ್ ಕನ್ನ

ಬೆಂಗಳೂರು ವಿವಿ ಸಂಶೋಧನೆಯಲ್ಲಿ ಪತ್ತೆ



ಬೆಂಗಳೂರು: ಸೈಬರ್ ವಂಚಕರು ಬಡವರ ಜನ್‌ಧನ್ ಖಾತೆಯಿಂದಲೂ ಹಣ ಲಪಟಾಯಿಸುತ್ತಿರುವುದು ಬೆಳಕಿಗೆ ಬಂದಿದೆ. ತಂತ್ರಜ್ಞಾನ ಬಳಕೆ ಮಾಡಿಕೊಂಡು ಈ ಸೈಬರ್ ವಂಚನೆ ನಿಯಂತ್ರಿಸುವ ಅಗತ್ಯವಿದೆ ಎಂದು ತಜ್ಞರ ತಂಡವು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿದೆ.

ಸೈಬರ್ ವಂಚನೆ ತಡೆಗೆ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕೆಂದು ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ತಂಡವು ಶಿಫಾರಸು ಮಾಡಿದೆ. ಜತೆಗೆ 'ಪಿಎಂ ಜನ್‌ಧನ್ ಯೋಜನೆಯ ಪರಿಣಾಮ ಮತ್ತು ಫಲ'ದ ಕುರಿತಂತೆ ಸಂಶೋಧನೆ ನಡೆಸಿ ಕೇಂದ್ರ ಸರಕಾರಕ್ಕೆ ವರದಿ ಸಲ್ಲಿಸಿದೆ.

ಬೆಂಗಳೂರು ವಿಶ್ವವಿದ್ಯಾಲಯದ ನಾಲ್ಕು ಪ್ರಾಧ್ಯಾಪಕರನ್ನೊಳಗೊಂಡ ತಂಡವು ಪಿಎಂ ಜನ್‌ಧನ್ ಯೋಜನೆ ಕುರಿತು ಕಳೆದ ಆರು ತಿಂಗಳಿಂದ ಸುದೀರ್ಘ ಸಮೀಕ್ಷೆ ನಡೆಸಿ ವರದಿ ಸಿದ್ಧಪಡಿಸಿದೆ. ಭಾರತೀಯ ಸಾಮಾಜಿಕ ವಿಜ್ಞಾನ ಸಂಶೋಧನಾ ಪರಿಷತ್ (ಐಸಿಎಸ್ಎಸ್‌ಆರ್) ಸಂಸ್ಥೆಯು ಇದಕ್ಕಾಗಿ ಅನುದಾನ ಒದಗಿಸಿತ್ತು.

ತಂಡವು ಕರ್ನಾಟಕ, ರಾಜಸ್ಥಾನ ಮತ್ತು ಪಶ್ಚಿಮಬಂಗಾಳಗಳಲ್ಲಿ ಮಾದರಿ ಸಮೀಕ್ಷೆ ಮೂಲಕ ಆರ್ಥಿಕ, ಸಾಮಾಜಿಕ ನೆಲೆಗಟ್ಟಿನಲ್ಲಿ ಜನ್‌ಧನ್ ಯೋಜನೆ ಪರಿಣಾಮ ಮತ್ತು ಕಡು ಬಡವ ಸಮುದಾಯಗಳಿಗೆ ಯೋಜನೆ ಲಾಭ ತಲುಪಿದೆಯೇ? ಎಂಬ ವಿಷಯದ ಬಗ್ಗೆ ಸಂಶೋಧನೆ ನಡೆಸಿದೆ.

ಹ್ಯಾಕರ್‌ಗಳು ಜನ್‌ಧನ್ ಖಾತೆಯಿಂದಲೂ ಹಣ ದೋಚಿರುವ ಬಗ್ಗೆ ವಂಚನೆಗೀಡಾದವರು ಸಮೀಕ್ಷೆ ವೇಳೆ ತಿಳಿಸಿದ್ದಾರೆ. ಇದರ ನಿಯಂತ್ರಣಕ್ಕೆ ತಂತ್ರಜ್ಞಾನ ಬಳಕೆ ಅಗತ್ಯವಿದೆ ಎಂದು ಸಂಶೋಧನಾ ತಂಡವು ತನ್ನ ವರದಿಯಲ್ಲಿ ಶಿಫಾರಸು ಮಾಡಿದೆ.


ದೇಶದ ಸಮಸ್ತ ನಾಗರಿಕರಿಗೂ ಬ್ಯಾಂಕಿಂಗ್ ಸೌಲಭ್ಯ ಒದಗಿಸುವ ದೃಷ್ಟಿಯಿಂದ ಪ್ರಧಾನಿ ನರೇಂದ್ರ ಮೋದಿ 2014ರಲ್ಲಿ ಪಿಎಂ ಜನ್‌ಧನ್ ಯೋಜನೆ ಜಾರಿಗೆ ತರಲಾಯಿತು. ಸಮೀಕ್ಷೆಯ ಪ್ರಕಾರ 52 ಕೋಟಿ ಜನರು ಜನ್‌ಧನ್ ಖಾತೆಯನ್ನು ಹೊಂದಿದ್ದಾರೆ. ದೇಶದಲ್ಲಿ ಶೇ.98ರಷ್ಟು ನಾಗರಿಕರು ಬ್ಯಾಂಕಿಂಗ್ ವ್ಯವಸ್ಥೆಗೆ ಒಳಪಟ್ಟಿದ್ದಾರೆ. ಸರಕಾರದ ಕೆಲ ಸಬ್ಸಿಡಿ, ಬೆಳೆ ನಾಶದ ಪರಿಹಾರ ಸೇರಿದಂತೆ ಹಲವು ಯೋಜನೆಯ ಹಣ ಡಿಬಿಟಿ ಮೂಲಕ ನೇರವಾಗಿ ಫಲಾನುಭವಿಗಳ ಖಾತೆಗೆ ತಲುಪಿದೆ ಎಂಬುದನ್ನು ವರದಿಯಲ್ಲಿ ತಿಳಿಸಲಾಗಿದೆ.

ಅಸ್ಸಾಂ: ಮುಸ್ಲಿಂ ವಿವಾಹ ಕಾಯ್ದೆ ರದ್ದು, ಶೀಘ್ರವೇ ಯುಸಿಸಿ ಜಾರಿ!

ಗುವಾಹಟಿ: ಅಸ್ಸಾಂ ಸರ್ಕಾರ ಮುಸ್ಲಿಂ ವಿವಾಹ ಕಾಯ್ದೆಯನ್ನು ರದ್ದುಗೊಳಿಸಿದ್ದು, ಶೀಘ್ರವೇ ಸಮಾನ ನಾಗರಿಕ ಸಂಹಿತೆ (ಯುಸಿಸಿ) ಜಾರಿಯಾಗಲಿದೆ ಎಂಬ ಮಾಹಿತಿ ಲಭ್ಯವಾಗಿದೆ. ಮುಸ್ಲಿಂ ವಿವಾಹ ಹಾಗೂ ವಿಚ್ಛೇದನ ನೋಂದಣಿ ಕಾಯ್ದೆ, 1935 ಅನ್ನು ರದ್ದುಗೊಳಿಸಲಾಗಿದೆ.

ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ, ಈಗಾಗಲೇ ನಾವು ಯುಸಿಸಿಯತ್ತ ಗಮನ ಹರಿಸುತ್ತಿದ್ದೇವೆ ಎಂದು ಹೇಳಿದ್ದಾರೆ. ಹಾಗಾಗಿ ಇಂದು ನಾವು ಬಹಳ ಮಹತ್ವದ ನಿರ್ಧಾರ ತೆಗೆದುಕೊಂಡಿದ್ದೇವೆ. ಅಸ್ಸಾಂ ಮುಸ್ಲಿಂ ಮದುವೆ ಮತ್ತು ವಿಚ್ಛೇದನ ನೋಂದಣಿ ಕಾಯಿದೆ, 1935 ಅನ್ನು ಕ್ಯಾಬಿನೆಟ್ ರದ್ದುಗೊಳಿಸಿದೆ. ಈ ಕಾಯ್ದೆಯಡಿ ಈಗ ಮುಸ್ಲಿಂ ವಿವಾಹ ಮತ್ತು ವಿಚ್ಛೇದನದ ನೋಂದಣಿ ಇರುವುದಿಲ್ಲ. ನಾವು ವಿಶೇಷ ವಿವಾಹ ಕಾಯ್ದೆಯನ್ನು ಹೊಂದಿದ್ದೇವೆ ಮತ್ತು ಎಲ್ಲಾ ವಿವಾಹಗಳನ್ನು ಅದರ ಅಡಿಯಲ್ಲಿ ನೋಂದಾಯಿಸಬೇಕೆಂದು ನಾವು ಬಯಸುತ್ತೇವೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

ಅರ್ಥವಿದೆಯೆ ವಿದಾಯಕ್ಕೆ ಕವನ ಸಂಕಲನ ಬಿಡುಗಡೆ



ಡಾ.ಸಂತೋಷ್ ಚೊಕ್ಕಾಡಿಯವರ 'ಅರ್ಥವಿದೆಯೆ ವಿದಾಯಕ್ಕೆ' ಕೃತಿಯನ್ನು ಬಾಲಸುಬ್ರಮಣ್ಯ ಕಂಜರ್ಪಣೆ ಬಿಡುಗಡೆ ಮಾಡಿದರು.

ಮೈಸೂರು, ಫೆ.25–ಶಾಲಾ ಶಿಕ್ಷಣ (ಪದವಿ ಪೂರ್ವ) ಇಲಾಖೆ ಮೈಸೂರು ಜಿಲ್ಲಾ ಪದವಿ ಪೂರ್ವ ಕಾಲೇಜು ಕನ್ನಡ ಉಪನ್ಯಾಸಕರ ವೇದಿಕೆ ವತಿಯಿಂದ ನಂಜುಮಳಿಗೆ ಬಳಿಯಿರುವ ಗೋಪಾಲ ಸ್ವಾಮಿ ಶಿಶು ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಕವಿ ಡಾ.ಸಂತೋಷ್ ಚೊಕ್ಕಾಡಿ ಅವರ "ಅರ್ಥವಿದೆಯೆ ವಿದಾಯಕ್ಕೆ" ಕವನ ಸಂಕಲನ ಬಿಡುಗಡೆ ಮಾಡಲಾಯಿತು.

ಕೃತಿ ಬಿಡುಗಡೆ ಮಾಡಿದ ಕವಿ ಬಾಲಸುಬ್ರಮಣ್ಯ ಕಂಜರ್ಪಣೆ ಮಾತನಾಡಿ, ಕವಿಯಾದವನಿಗೆ ಸಹೃದಯರ ಮನಸ್ಸನ್ನು ಗೆಲ್ಲುವ ಶಕ್ತಿಯಿರಬೇಕು. ಹಳೆಯ ತಲೆಮಾರಿನ ಸಾಹಿತಿಗಳನ್ನು ನೆನಪಿಸಿಕೊಳ್ಳಬೇಕು. ಹಿಂದೆ ಪಂಪ, ಜನ್ನ, ರನ್ನ ಅವರುಗಳು ಯಾವುದೇ ವೃತ್ತಿಯನ್ನು ಅವಲಂಬಿಸಿರಲಿಲ್ಲ. ಅವರ ಜೀವನದ ಅನುಭವ ಹಾಗೂ ನಿತ್ಯದ ಬದುಕಿನ ಒಡನಾಟವನ್ನೇ ಸಾಹಿತ್ಯವನ್ನಾಗಿಸಿದರು. ಕಲಿಯುವುದಕ್ಕೆ ವಯಸ್ಸು ಮುಖ್ಯವಲ್ಲ. ಶ್ರದ್ಧೆ ಮತ್ತು ತಾಳ್ಮೆ ಆಸಕ್ತಿ ಇದ್ದಲ್ಲಿ ಬರವಣಿಗೆಯನ್ನು ಮುಂದುವರಿಸಬಹುದು. ಇತ್ತೀಚಿನ ದಿನಗಳಲ್ಲಿ ಬರೆಯುವವರ ಸಂಖ್ಯೆ ಜಾಸ್ತಿಯಾಗಿದೆ. ಆದರೆ ಓದುವವರ ಸಂಖ್ಯೆ ದಿನದಿಂದ ದಿನಕ್ಕೆ ಕ್ಷೀಣಿಸುತ್ತಿದೆ. ಇದು ಬೇಸರದ ಸಂಗತಿ ಎಂದು ವಿಷಾದ ವ್ಯಕ್ತಪಡಿಸಿ, ವಿದ್ಯಾರ್ಥಿಗಳನ್ನು ತಯಾರು ಮಾಡುವ ಹೊಣೆಗಾರಿಕೆ ಬೋಧಕರ ಮೇಲಿದೆ. ಆದ್ದರಿಂದ ಶಿಕ್ಷಕ ವರ್ಗ ಸದಾ ಕ್ರಿಯಾಶೀಲರಾಗಿ ಓದಿನಲ್ಲಿ ತೊಡಗಬೇಕೆಂದರು.

ಅರ್ಥವಿದೆಯೆ ವಿದಾಯಕ್ಕೆ ಪುಸ್ತಕ ಕುರಿತು ಮಹಾರಾಜ ಕಾಲೇಜಿನ ಪ್ರಾಧ್ಯಾಪಕಿ ಡಾ.ವಿಜಯಲಕ್ಷ್ಮಿ ಮಾತನಾಡಿ, ಸಂತೋಷ್ ಚೊಕ್ಕಾಡಿರವರ ಕವಿತೆಗಳಲ್ಲಿ ಪ್ರಕೃತಿಯನ್ನು ಗಾಢವಾಗಿ ಪ್ರೀತಿಸಿದ ಅನುಭವವನ್ನು ಕಾಣಬಹುದು ಜೊತೆಗೆ ಬುದ್ಧನ ನಗು, ಮಾತು, ಧ್ಯಾನದ ಸ್ಥಿತಿಗಳನ್ನು ಕವನದಲ್ಲಿ ವಾಸ್ತವ ಪ್ರಪಂಚಕ್ಕೆ ಹತ್ತಿರವಾಗುವಂತೆ ಸರಳ ವಾಕ್ಯಗಳಲ್ಲಿ ಭಾವಸಂವೇದನೆಯೊಂದಿಗೆ ವ್ಯಕ್ತಪಡಿಸಿದ್ದಾರೆಂದು ಅಭಿಪ್ರಾಯಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ವಿಮರ್ಶಕ ವಿಕ್ರಂ ಚದುರಂಗ ಮಾತನಾಡಿದರು. ವೇದಿಕೆಯಲ್ಲಿ ಗೋಪಾಲಸ್ವಾಮಿ ಶಿಕ್ಷಣ ಸಂಸ್ಥೆಯ ಕರೆಸ್ಪಾಂಡೆಂಟ್ ಎನ್.ಆರ್. ಮಂಜುನಾಥ್, ಕವಿ ಡಾ.ಸಂತೋಷ್ ಚೊಕ್ಕಾಡಿ, ಕನ್ನಡ ಉಪನ್ಯಾಸಕರ ವೇದಿಕೆ ಅಧ್ಯಕ್ಷ ಡಾ.ನೀ.ಗೂ.ರಮೇಶ್, ಪ್ರಾಂಶುಪಾಲ ಬಾಲಸುಬ್ರಮಣ್ಯಂ, ಡಾ.ಚಿಕ್ಕಮಾದು, ಕೆಂಪಯ್ಯ, ವಿಮರ್ಶಕ ರೇಣುಕಾರಾಧ್ಯ, ಡಾ.ಮಾಲತಿ, ಮಹೇಶ್ ಉಪಸ್ಥಿತರಿದ್ದರು.

ಅನುದಾನ ತಾರತಮ್ಯ: ಕಾಂಗ್ರೆಸ್ ಚುನಾವಣಾ ಗಿಮಿಕ್



ಹುಬ್ಬಳ್ಳಿ, ಫೆ.25– ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ರಾಜ್ಯದ ಕಾಂಗ್ರೆಸ್ ಸರ್ಕಾರ ಅನುದಾನ ತಾರತಮ್ಯದ ಹೆಸರಿನಲ್ಲಿ ಸುಳ್ಳು ಹೇಳುತ್ತಿದೆ. ಕೇಂದ್ರದಲ್ಲಿ ಯುಪಿಎ ಸರ್ಕಾರ ಇದ್ದಿದ್ದರೆ ಸಿದ್ದರಾಮಯ್ಯ ಅನುದಾನ ತಾರತಮ್ಯದ ಬಗ್ಗೆ ಮಾತನಾಡುತ್ತಿರಲಿಲ್ಲ ಎಂದು ಬಿಜೆಪಿ ಮುಖಂಡ ಜಗದೀಶ ಶೆಟ್ಟರ್ ಟೀಕಿಸಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೋದಿ ಅತ್ಯಂತ ಜನಪ್ರಿಯ ನಾಯಕರಾಗಿದ್ದು, 10 ವರ್ಷ ಉತ್ತಮ ಆಡಳಿತ ನೀಡಿದ್ದನ್ನು ಇವರಿಗೆ ಸಹಿಸಲಾಗುತ್ತಿಲ್ಲ, ಹೀಗಾಗಿಯೇ ಅಧಿಕಾರಕ್ಕೆ ಬಂದು ಇಷ್ಟು ಸಮಯವಾದ ನಂತರ ಈಗ ಆರೋಪ ಮಾಡುತ್ತಿದ್ದಾರೆ ಎಂದು ದೂರಿದರು.

ಅನುದಾನ ನೀಡಿಕೆ ಬಗ್ಗೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸ್ಪಷ್ಟನೆ ನೀಡಿದ್ದಾರೆ. ನೀತಿ ಆಯೋಗದಲ್ಲಿ ರಾಜ್ಯದ ಹಣಕಾಸು ಮಂತ್ರಿ ಇರುವುದರಿಂದ ಅಲ್ಲಿ ಪ್ರಶ್ನಿಸಲಿ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಕಾಂಗ್ರೆಸ್ ಸಂಸದರು ಲೋಕಸಭೆಯಲ್ಲಿ ಧ್ವನಿ ಎತ್ತಲಿಲ್ಲ. ಕಾನೂನು ಪ್ರಕಾರ ಹೋರಾಡುವುದು ಬಿಟ್ಟು ಕೇಂದ್ರದ ವಿರುದ್ಧ ಎರಡು ನಿರ್ಣಯ ಕೈಗೊಂಡಿದ್ದು ಪ್ರಜಾತಂತ್ರ ವ್ಯವಸ್ಥೆಗೆ ಕೊಡಲಿ ಏಟು ಬಿದ್ದಂತಾಗಿದೆ ಎಂದು ಜಗದೀಶ್ ಶೆಟ್ಟರ್ ಹೇಳಿದರು.

ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರು ಇದ್ದಾಗ ಕಾಂಗ್ರೆಸ್ ಪರಿಸ್ಥಿತಿ ಏನಿತ್ತು ಎಂಬುದನ್ನು ಸಿದ್ದರಾಮಯ್ಯ ತಿಳಿದುಕೊಳ್ಳಬೇಕು. ಆಗ, ಕಾಂಗ್ರೆಸ್‌ನಲ್ಲಿ ಇದ್ದದ್ದು ಒಬ್ಬರೇ ಗಂಡಸು, ಅದು ಇಂದಿರಾ ಎಂಬ ಜೋಕ್ ಇತ್ತು. ದೇಶದಲ್ಲಿ ಸಿದ್ದರಾಮಯ್ಯ ಅವರದ್ದೇ ಕೊನೆಯ ಕಾಂಗ್ರೆಸ್ ಸರ್ಕಾರ. ಮುಂದೆ ಕಾಂಗ್ರೆಸ್ ಸರ್ಕಾರ ಬರಲ್ಲ ಎಂದು ಶೆಟ್ಟರ್ ಹೇಳಿದರು.

ಪಿಹೆಚ್.ಡಿ ಪದವೀಧರರು

ಎನ್.ನಾಗೇಂದ್ರ



ಮೈಸೂರು,ಫೆ.25–ಡಾ.ಎನ್.ನಾಗರಾಜು ಅವರ ಮಾರ್ಗದರ್ಶನದಲ್ಲಿ ಎನ್.ನಾಗೇಂದ್ರ ಅವರು ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಬಸವರಾಜು



ಡಾ.ಡಿ.ನಾಗರಾಜು ಗುರು ಅವರ ಮಾರ್ಗದರ್ಶನದಲ್ಲಿ ಬಸವರಾಜು ಅವರು ಭೂ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವ ವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮಂಜುನಾಥ



ಡಾ.ಜಿ.ಎಸ್. ಪ್ರೇಮಕುಮಾರ ಅವರ ಮಾರ್ಗದರ್ಶನದಲ್ಲಿ ಎಂ.ಸಿ. ಮಂಜುನಾಥ ಅವರು ಅರ್ಥಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವ ವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ಪ್ರಕಟಣೆ ತಿಳಿಸಿದೆ.

ಮಕ್ಕಳು ಕ್ರೀಡೆಯಲ್ಲಿ ಪಾಲ್ಗೊಳ್ಳಲು ಪೋಷಕರು ಪ್ರೋತ್ಸಾಹಿಸಬೇಕು

ರಾಷ್ಟ್ರೀಯ ಕ್ರೀಡಾ ತರಬೇತುದಾರ ಎಂ.ಎನ್.ವಿಕ್ರಮ್ ಅಭಿಮತ



ಎಂಎಂಕೆ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾವಿದ್ಯಾಲಯದ ವಾರ್ಷಿಕ ಕ್ರೀಡಾಕೂಟ ಉದ್ಘಾಟಿಸಿ ಎಂ.ಎನ್.ವಿಕ್ರಂ ಮಾತನಾಡಿದರು.

ಮೈಸೂರು,ಫೆ.25–ಯುವ ಜನಾಂಗವು ದೃಢಕಾಯ ಶರೀರ ಮತ್ತು ಆರೋಗ್ಯಪೂರ್ಣವಾದ ಜೀವನ ನಿರ್ವಹಿಸಲು ದಿನವೂ ಕ್ರೀಡಾ ಚಟುವಟಿಕೆಗಳಲ್ಲಿ ತೊಡಗುವುದು ಅತ್ಯಗತ್ಯವೆಂದು ಎ.ಎಂ.ಎಸ್ ಸಂಸ್ಥೆಯ ಸಂಸ್ಥಾಪಕ ಹಾಗೂ ರಾಷ್ಟ್ರೀಯ ಕ್ರೀಡಾ ತರಬೇತುದಾರ ಎಂ.ಎನ್.ವಿಕ್ರಮ್ ಕರೆ ನೀಡಿದರು.

ನಗರದ ಎಂಎಂಕೆ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾವಿದ್ಯಾಲಯದ ವಾರ್ಷಿಕ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದ ಅವರು, ಕ್ರೀಡೆಯು ಗೌರವದ ಜೊತೆಗೆ ನಿತ್ಯವೂ ದೈಹಿಕ ಮತ್ತು ಮಾನಸಿಕ ದೃಢತೆಯನ್ನು ನೀಡುತ್ತದೆ. ಕ್ರೀಡಾ ಚಟುವಟಿಕೆಗಳಲ್ಲಿ ಇಂದಿನ ಯುವ ಜನಾಂಗ ತೊಡಗಿಸಿಕೊಂಡು ಉತ್ತಮ ತರಬೇತಿ ಮತ್ತು ಪರಿಶ್ರಮದ ಮೂಲಕ ಪ್ರಯತ್ನಿಸಿದರೆ ಕಾಲೇಜು ರಾಜ್ಯ ಮತ್ತು ದೇಶಕ್ಕೆ ಕೀರ್ತಿ ತರಬಹುದು. ಇದರಿಂದ ಯಶಸ್ಸು, ಸ್ಥಾನಮಾನ, ಹಣ ಗೌರವವನ್ನು ಗಳಿಸಬಹುದಾಗಿದೆ. ಆದ್ದರಿಂದ ಕ್ರೀಡೆಗೆ ಆದ್ಯತೆ ನೀಡಿ ಪೋಷಕರು ತಮ್ಮ ಮಕ್ಕಳಿಗೆ ಕ್ರೀಡೆಯಲ್ಲಿ ಭಾಗವಹಿಸಲು ಪ್ರೇರಣೆ ನೀಡಬೇಕು ಎಂದರು.

ಕಾಲೇಜಿನ ಪ್ರಾಂಶುಪಾಲ ಪ್ರೊ.ಸಾಯಿನಾಥ್ ಮಲ್ಲಿಗೆಮಾಡು ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ನಮ್ಮ ಕಾಲೇಜಿನ ವಿದ್ಯಾರ್ಥಿನಿಯರು ವಿಶ್ವವಿದ್ಯಾನಿಲಯ, ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕ್ರೀಡೆ ಮತ್ತು ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸುತ್ತಿದ್ದಾರೆ. ಪ್ರತಿಯೊಬ್ಬರು ಕ್ರೀಡೆಯ ಮೂಲಕ ಉತ್ತಮ ಆರೋಗ್ಯ ಪಡೆಯಲು ಸಹಾಯವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿ ಪೋಷಕ ಸಂಘದ ಅಧ್ಯಕ್ಷ ರಾಜೇಶ್, ಸದಸ್ಯ ಪರಮೇಶ್, ಕಾಲೇಜು ಐಕ್ಯೂಎಸಿ ಘಟಕದ ಸಂಚಾಲಕ ಪ್ರೊ.ಕೆ.ಎಸ್.ಸುಕೃತ, ಉಪಪ್ರಾಂಶುಪಾಲರಾದ ಪ್ರೊ.ಎನ್.ಭಾರತಿ, ವಿದ್ಯಾರ್ಥಿನಿ ಕ್ಷೇಮಪಾಲನಾಧಿಕಾರಿ ಪ್ರೊ.ಜ್ಯೋತಿಲಕ್ಷ್ಮಿ, ಕಾವಾ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕಿ ಮಾಲತಿ, ಅಧ್ಯಾಪಕ ಮತ್ತು ಅಧ್ಯಾಪಕೇತರ ವೃಂದದವರು ಉಪಸ್ಥಿತರಿದ್ದರು. ಕಾಲೇಜಿನ ಎಲ್ಲಾ ವಿಭಾಗದ ವಿದ್ಯಾರ್ಥಿನಿಯರು ಆಕರ್ಷಕ ಪಥಸಂಚಲನ ಮಾಡಿ ಕ್ರೀಡಾಜ್ಯೋತಿಯನ್ನು ಸ್ವಾಗತಿಸಿದರು. ಕ್ರೀಡಾಕೂಟದ ಅಂಗವಾಗಿ 100, 400, 800, 1500 ಓಟದ ಸ್ಪರ್ಧೆ ಮತ್ತು ಎತ್ತರ ಜಿಗಿತ, ಉದ್ದ ಜಿಗಿತ, ಜಾವಲಿನ್ ಥ್ರೋ, ಗುಂಡು ಎಸೆತ, ರಿಲೆ ಮತ್ತು ಇತರ ಸ್ಪರ್ಧೆಗಳನ್ನು ಆಯೋಜಿಸಿ, ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಬಂಡೀಪುರ ಅಭಯಾರಣ್ಯದಲ್ಲಿ ಹೆಚ್ಚಿದ ಕಾಡ್ಗಿಚ್ಚು ಭೀತಿ

ಕೇಂದ್ರದ ನೀತಿಯಿಂದ ಅಗ್ನಿಶಾಮಕ ವಾಹನಗಳ ಕೊರತೆ, ಬೆಂಕಿ ಹೊತ್ತಿಕೊಂಡರೆ ದೇವರೇ ಗತಿ!



ಮೈಸೂರು, ಫೆ.25– ಚಾಮರಾಜನಗರ, ಗುಂಡ್ಲುಪೇಟೆ ತಾಲೂಕಿನಲ್ಲಿ ಬಂಡೀಪುರ ಅಭಯಾರಣ್ಯದಲ್ಲಿ ಬೇಸಿಗೆ ಬರುತ್ತಿದ್ದಂತೆಯೇ ಕಾಡ್ಗಿಚ್ಚಿನ ಭೀತಿ ಶುರುವಾಗುತ್ತದೆ. ಆದರೆ, ಅಗ್ನಿ ಅನಾಹುತಗಳನ್ನು ತಡೆಯಬೇಕಾದ ಅಧಿಕಾರಿಗಳು ಮಾತ್ರ ಕಾಡ್ಗಿಚ್ಚು ವೇಳೆ ಕೈಕಟ್ಟಿ ಕೂರಬೇಕಾದ ಪರಿಸ್ಥಿತಿಯಲ್ಲಿದ್ದಾರೆ.

ಅಗ್ನಿ ಅನಾಹುತಗಳನ್ನು ತಡೆಯಲು ಅಧಿಕಾರಿಗಳಿಗೆ ಅಗ್ನಿಶಾಮಕ ವಾಹನಗಳ ಕೊರತೆ ಎದುರಾಗಿದೆ. ಈ ಸಮಸ್ಯೆಗೆ ಕೇಂದ್ರದ ನೀತಿಗಳು ಕಾರಣವಾಗಿವೆ ಎಂದು ಹೇಳಲಾಗುತ್ತಿದೆ. ಬೇಸಿಗೆ ಬರುತ್ತಿದ್ದಂತೆ ಈ ಪ್ರದೇಶಗಳಲ್ಲಿ ಕಾಡ್ಗಿಚ್ಚು ಕಾಣಿಸಿಕೊಳ್ಳುವುದು ಸಾಮಾನ್ಯ. ಹೀಗಾಗಿ ಈ ಸಂದರ್ಭದಲ್ಲಿ ಅರಣ್ಯ ರಕ್ಷಣೆಗಾಗಿ ಅಗ್ನಿಶಾಮಕ ಇಲಾಖೆಯು ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸಿಬ್ಬಂದಿಗಳ ಜೊತೆಗೆ 37 ಅಗ್ನಿಶಾಮಕ ವಾಹನಗಳನ್ನು ನಿಯೋಜಿಸುತ್ತದೆ. ಆದರೆ ಈ ವರ್ಷ ವಾಹನಗಳ ಕೊರತೆ ಎದುರಾಗಿದೆ. ಇದಕ್ಕೆ ಕಾರಣ ಕೇಂದ್ರ ಸರ್ಕಾರ 15 ವರ್ಷ ಮೇಲ್ಪಟ್ಟ ಸರ್ಕಾರಿ ವಾಹನಗಳ ನೋಂದಣಿ ರದ್ದುಪಡಿಸಬೇಕೆಂಬ ನಿಯಮ.

ಹಳೆಯ ವಾಹನಗಳು ಸುಸ್ಥಿತಿಯಲ್ಲಿದ್ದರೂ ಆರ್‌ಟಿಒಗಳಿಂದ ಫಿಟ್‌ನೆಸ್ ಪ್ರಮಾಣ ಪತ್ರ ಸಿಗುತ್ತಿಲ್ಲ. ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಗಳ ಅಗ್ನಿಶಾಮಕ ಠಾಣೆಗಳು ಪ್ರತಿ ಅಗ್ನಿಶಾಮಕ ಠಾಣೆಗೆ ಕೇವಲ ಒಂದು ವಾಹನ ಮಾತ್ರ ನೀಡುತ್ತವೆ. ಅಗ್ನಿಶಾಮಕ ವಾಹನಗಳಿಗೆ ನಿಯಮದಲ್ಲಿ ವಿನಾಯಿತಿ ನೀಡುವಂತೆ ಕೋರಿ ಕೇಂದ್ರಕ್ಕೆ ಸರ್ಕಾರ ಪತ್ರ ಬರೆದಿದ್ದರೂ ಯಾವುದೇ ಪ್ರತಿಕ್ರಿಯೆ ಇನ್ನು ಬಂದಿಲ್ಲ. ಈಗ ಹುಲಿ ಸಂರಕ್ಷಿತ ಪ್ರದೇಶ ಮತ್ತು ವನ್ಯಜೀವಿ ಅಭಯಾರಣ್ಯಗಳಲ್ಲಿ ಕಾಡ್ಗಿಚ್ಚಿನ ಭೀತಿ ಶುರುವಾಗಿದೆ. ಆತಂಕದ ನಡುವೆಯೂ ಅಗ್ನಿಶಾಮಕ ವಾಹನಗಳನ್ನು ನಿಯೋಜಿಸಲು ಸಾಧ್ಯವಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಮೂರು ಜಿಲ್ಲೆಗಳ 45 ಅಗ್ನಿಶಾಮಕ ವಾಹನಗಳಿಗೆ 15 ವರ್ಷಗಳು ಕಳೆದಿವೆ. ವಾಹನಗಳು ಉತ್ತಮ ಸ್ಥಿತಿಯಲ್ಲಿಯೇ ಇವೆ. ಆದರೆ, ತುರ್ತು ಪರಿಸ್ಥಿತಿಯಲ್ಲಿ ಅವುಗಳನ್ನು ಬಳಸಲು ಅವಕಾಶ ಸಿಗುತ್ತಿಲ್ಲ. ರಕ್ಷಣೆ, ಆಂತರಿಕ ಭದ್ರತೆ ಮತ್ತು ಕಾನೂನು ಮತ್ತು ಸುವ್ಯವಸ್ಥೆಯಂತಹ ವಿಶೇಷ ಉದ್ದೇಶಗಳಿಗಾಗಿ ಬಳಸುವ ವಾಹನಗಳಿಗೆ ಕೇಂದ್ರ ಸರ್ಕಾರವು ತನ್ನ ನೀತಿಯಿಂದ ವಿನಾಯಿತಿ ನೀಡಿದೆ. ಹೀಗಾಗಿ ಅಗ್ನಿಶಾಮಕ ವಾಹನಗಳಿಗೂ ಕೂಡ ವಿನಾಯಿತಿ ನೀಡಬೇಕೆಂಬುದು ನಮ್ಮ ಮನವಿಯಾಗಿದೆ. ಒಂದು ವೇಳೆ ಬೆಂಕಿ ಅವಘಡ ಸಂಭವಿಸಿದರೆ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಹರಸಾಹಸ ಪಡುವಂತಾಗಿದೆ.

ಇತ್ತೀಚೆಗೆ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಕೆ.ಪಿ. ಗುರುರಾಜ್ ಅವರು ಬಂಡೀಪುರ ಹುಲಿ ಸಂರಕ್ಷಿತ ಅರಣ್ಯದ ಅಂಚಿನಲ್ಲಿ ವಾಸಿಸುವ ಗ್ರಾಮಸ್ಥರಿಗೆ ಅಗ್ನಿಶಾಮಕ ಸಾಧನಗಳನ್ನು ಬಳಸುವ ಕುರಿತು ತರಬೇತಿ ನೀಡುವ ಕಾರ್ಯಕ್ರಮ ಹಮ್ಮಿಕೊಂಡಿದ್ದರು.

ನಕ್ಕರೆ ಅದೇ ಸ್ವರ್ಗ

ಗೀತಾ : ನಿಜಾನ ಅಕ್ಕ, ನೀವು 3ನೇ ಮದ್ವೆ ಆಗ್ತಾ ಇದ್ದಿರಂತೆ...?

ಸುನಿತಾ: ಮೊದಲನೆಯವ ದೇವರಿಗೆ ಇಷ್ಟ ಆದ, ಎರಡನೆಯವ ಪಕ್ಕದ ಮನೆಯವಳಿಗೆ ಇಷ್ಟ ಆದ, ಅದಕ್ಕೆ...

ಮೈಸೂರು ಮಿತ್ರ

ಸೋಮವಾರ, 26 ಫೆಬ್ರವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಎಷ್ಟೆ ಕಷ್ಟಗಳಿರಲಿ ನಂಬಿಕೆ ಮಾತ್ರ ಕಳೆದುಕೊಳ್ಳಬೇಡಿ; ನಿಮ್ಮ ತಾಳ್ಮೆ, ಸಹನೆ ನಿಮ್ಮ ಜೀವನಕ್ಕೆ ಒಳ್ಳೆಯ ದಾರಿ ಹುಡುಕಿಕೊಡುತ್ತದೆ. ಎಲ್ಲಾ ಕಷ್ಟಗಳೆಂಬ ಕತ್ತಲೆಯ ಹಿಂದೆ ಸುಖದ ಬೆಳಕು ಇದ್ದೆ ಇರುತ್ತದೆ. ಸಮಾಧಾನದಿಂದ ಹುಡುಕುವ ಪ್ರಯತ್ನ ಮಾಡಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕೊಟ್ಟಿದ್ದು ತನಗೆ / ಬಚ್ಚಿಟ್ಟದ್ದು ಪರರಿಗೆ

ನಿಮ್ಮ ಪತ್ರಗಳು

ಚಾಮುಂಡಿಬೆಟ್ಟ ಅಭಿವೃದ್ಧಿ ಪ್ರಾಧಿಕಾರದ ರಚನೆ ಸ್ವಾಗತ



ಮಾನ್ಯರೆ,

ಮೈಸೂರಿನ 'ಅಧಿದೇವತೆ' ಚಾಮುಂಡೇಶ್ವರಿ ನೆಲೆಸಿರುವ ಚಾಮುಂಡಿಬೆಟ್ಟಕ್ಕೆ ಬರುವ ಭಕ್ತಾದಿಗಳಿಗೆ ಹಾಗೂ ಮೈಸೂರಿನ ಪ್ರವಾಸೋದ್ಯಮದಲ್ಲಿಯೂ ಕೂಡ ಖ್ಯಾತಿಗಳಿಸಿರುವ ಚಾಮುಂಡಿ ಬೆಟ್ಟದ ಅಭಿವೃದ್ಧಿ ಪಡಿಸುವ ಸಲುವಾಗಿ ಪ್ರಾಧಿಕಾರ ರಚನೆ ಮಾಡಿರುವುದು ಸ್ವಾಗತ. ಈ ಪ್ರಾಧಿಕಾರದ ತಂಡದಲ್ಲಿ ಬೆಟ್ಟದ ತವರಿನವರೇ ಆಗಿರುವ ಮತ್ತು ತವರು ಜಿಲ್ಲೆಯ ಚಾಮುಂಡಿಬೆಟ್ಟವನ್ನು ಹುಟ್ಟಿನಿಂದ ಇಲ್ಲಿಯವರೆಗೂ ಸೂಕ್ಷ್ಮವಾಗಿ ಅರಿತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮೊದಲ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿರುವುದು ಎಲ್ಲರಿಗೂ ಸಂತೋಷ ತಂದಿದೆ ಮತ್ತು ಮೂವರು ಉಪಾಧ್ಯಕ್ಷರು ಮತ್ತು ರಾಜವಂಶಸ್ಥಕ್ಕೂ ಸ್ಥಾನ ನೀಡಿರುವುದರಿಂದ ಹಲವು ಮೂಲ ಸೌಕರ್ಯಗಳೊಂದಿಗೆ ಬೆಟ್ಟದ ಪರಿಸರ ಮತ್ತು ಬೆಟ್ಟದ ಕುಸಿತಗಳು, ಗಿಡ ಮರಗಳ ಸಂರಕ್ಷಣೆಯೊಂದಿಗೆ ಬೆಟ್ಟಕ್ಕೆ ಬರುವ ಭಕ್ತಾದಿ ಗಳಿಗೆ ಸುಭದ್ರತೆ ಒದಗಿಸುವ ಮೂಲಕ ಅಭಿವೃದ್ಧಿಪಡಿಸಬಹುದಾಗಿದೆ. ಇದ ರೊಂದಿಗೆ ಬೆಟ್ಟದಲ್ಲಿ ವಾಸಿಸುವ ಸಾರ್ವಜನಿಕರಿಗೆ ಮತ್ತು ಪ್ರಾಣಿ ಪಕ್ಷಿಗಳಿಗೆ ತೊಂದರೆಯಾಗದಂತೆ, ಬೆಟ್ಟದಲ್ಲಿ ವಾಹನ ನಿಲುಗಡೆ ವ್ಯವಸ್ಥೆಯಲ್ಲಿ ಸಾರ್ವಜನಿಕರಿಗೆ ಆಗುತ್ತಿರುವ ಅನ್ಯಾಯಗಳನ್ನು ತಪ್ಪಿಸಿ ಅಭಿವೃದ್ಧಿಗಳನ್ನು ಮಾಡುವ ಮೂಲಕ ಮೈಸೂರಿನ ಘನತೆ, ಗೌರವಗಳು ಈ ಪ್ರಾಧಿಕಾರದ ತಂಡದಿಂದ ಆಗಲಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ಕೇಂದ್ರೀಯ ವಿದ್ಯಾಲಯದ ಮುಂದೆ ಟ್ರಾಫಿಕ್ ಪೊಲೀಸ್ ನಿಯೋಜಿಸಿ

ಮಾನ್ಯರೆ,

ಮೈಸೂರಿನ ಸಿದ್ದಾರ್ಥನಗರದಲ್ಲಿ ಕೇಂದ್ರೀಯ ವಿದ್ಯಾಲಯವಿದ್ದು, ಈ ಶಾಲೆಯ ಮುಂದಿನ ರಸ್ತೆ ತುಂಬಾ ಕಿರಿದಾಗಿದೆ. ಸದಾ ವಾಹನ ಸಂಚಾರ ಅಧಿಕವಾಗಿರುತ್ತದೆ. ದಿನನಿತ್ಯ ನಗರ ಸಾರಿಗೆ ಬಸ್ಸು ಹಾಗೂ ಇನ್ನಿತರ ವಾಹನ ಸಂಚಾರದಿಂದ ಶಾಲೆಯ ಮಕ್ಕಳ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಬಿಡುವಾಗ, ಶಾಲೆ ಬಿಟ್ಟ ನಂತರ ಕರೆದೊಯ್ಯಲು ಟ್ರಾಫಿಕ್ ಕಿರಿಕಿರಿಯಿಂದ ತುಂಬಾ ತೊಂದರೆ ಉಂಟಾಗಿದೆ. ಪೋಷಕರು ತಮ್ಮ ಮಕ್ಕಳನ್ನು ಆತಂಕ, ಜೀವ ಭಯದಿಂದಲೇ ಕರೆದುಕೊಂಡು ಬರುವ ಮತ್ತು ಕರೆದುಕೊಂಡು ಹೋಗುವ ಪರಿಸ್ಥಿತಿ ಇದೆ.

ಕೆಲವೊಮ್ಮೆ ಸಣ್ಣಪುಟ್ಟ ಅಪಘಾತವಾಗಿರುವ ನಿದರ್ಶನಗಳಿವೆ. ಶಾಲೆಯ ಮುಂದೆ ಸರಹದ್ದಿನಲ್ಲಿ ಎಚ್ಚರಿಕೆಯ ಸೂಚನಾ ಫಲಕ ಇರುವುದಿಲ್ಲ. ಈ ಕೂಡಲೇ ಕೇಂದ್ರೀಯ ವಿದ್ಯಾಲಯದ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳು ಹಾಗೂ ನಗರ ಪೊಲೀಸ್ ಆಯುಕ್ತರು ಮುನ್ನೆಚ್ಚರಿಕಾ ಕ್ರಮದೊಂದಿಗೆ ವೈಜ್ಞಾನಿಕವಾಗಿ ರಸ್ತೆ ಡುಬ್ಬ ನಿರ್ಮಿಸಲಿ. ತಾತ್ಕಾಲಿಕವಾಗಿ ಸದರಿ ರಸ್ತೆಯಲ್ಲಿ ಜಿಗ್‌ಜಾಗ್ ಮಾದರಿ ಬ್ಯಾರಿಕೇಡ್ ಹಾಕಿ ವಾಹನ ದಟ್ಟಣೆ ನಿಯಂತ್ರಿಸಲು ಓರ್ವ ಪೊಲೀಸ್ ಪೇದೆ ನಿಯೋಜಿಸಿ ಪೋಷಕರು ನಿರಾತಂಕವಾಗಿ ತಮ್ಮ ಮಕ್ಕಳನ್ನು ಶಾಲೆಗೆ ಬಿಡಲು ಹಾಗೂ ಕರೆದೊಯ್ಯಲು ಅನುಕೂಲ ಮಾಡಿಕೊಡಬೇಕಾಗಿ ಮನವಿ.

–ಎಸ್.ರಾಜಗೋಪಾಲ್, ಗಾಂಧಿನಗರ, ಮೈಸೂರು.

ರೆಸಾರ್ಟ್ ರಾಜಕಾರಣ ನಿಲ್ಲಲಿ, ಪ್ರಜಾಪ್ರಭುತ್ವದ ಬೇರು ಗಟ್ಟಿಯಾಗಲಿ

ಮಾನ್ಯರೆ,

ಕರ್ನಾಟಕಕ್ಕೂ, ರೆಸಾರ್ಟ್ ರಾಜಕೀಯಕ್ಕೂ ಒಂದು ರೀತಿಯ ಅವಿನಾಭಾವ ಸಂಬಂಧವಿದೆ ಎನ್ನಬೇಕು. ಇದು ಪ್ರಾರಂಭವಾದದ್ದು, 80ರ ದಶಕದಲ್ಲಿ ಪಕ್ಕದ ಆಂಧ್ರಪ್ರದೇಶದ ಅಂದಿನ ಸರ್ಕಾರವನ್ನು ಉಳಿಸಿಕೊಳ್ಳುವ ಸಲುವಾಗಿ ಮೈಸೂರಿನ ದಾಸ್‌ಪ್ರಕಾಶ್ ಪ್ಯಾರಡೈಸ್ ಹೋಟೆಲ್‌ನಿಂದ ಪ್ರಾರಂಭವಾದ ರೆಸಾರ್ಟ್ ರಾಜಕಾರಣ ಇಂದಿನ ರಾಜ್ಯಸಭಾ ಚುನಾವಣೆವರೆಗೂ ಬಂದಿದೆ.

ರಾಜ್ಯ ವಿಧಾನಸಭೆಯಿಂದ 4 ರಾಜ್ಯಸಭಾ ಸ್ಥಾನಗಳಿಗೆ ಫೆ.27ರಂದು ಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ಆಡಳಿತ ಕಾಂಗ್ರೆಸ್ ಪಕ್ಷದಿಂದ ಮೂವರು ಮತ್ತು ಬಿಜೆಪಿಯಿಂದ ಒಬ್ಬರು ಮಾತ್ರ ಆಯ್ಕೆಯಾಗುವ ಸಾಧ್ಯತೆಗಳಿವೆ. ಆದರೆ ಶಾಸಕರನ್ನು ಖರೀದಿಸಿ ನಾನು ರಾಜ್ಯಸಭೆಗೆ ಆಯ್ಕೆಯಾಗಬಹುದು ಎಂಬ ನಿರೀಕ್ಷೆಯಲ್ಲಿ ಕುಪೇಂದ್ರ ರೆಡ್ಡಿ ಅವರು ಸ್ಪರ್ಧೆಯಲ್ಲಿದ್ದಾರೆ.

ಶಾಸಕರೇನು ಮಾರಾಟವಾಗುವ ಸರಕುಗಳೇ ತಮ್ಮ ಪಕ್ಷದ ಶಾಸಕರುಗಳ ಬಗ್ಗೆಯೇ ಪಕ್ಷಕ್ಕೆ ನಂಬಿಕೆ ಇಲ್ಲವೇ, ಇವರುಗಳ ಬಗ್ಗೆ ಅಪನಂಬಿಕೆ ಸಂದೇಹ ಇಟ್ಟು ಇವರುಗಳನ್ನು ರೆಸಾರ್ಟ್ ಎಂದು ಒಂದು ರೀತಿಯಲ್ಲಿ ಗೃಹ ಬಂಧನದಲ್ಲಿ ಇಡುವುದು ಎಷ್ಟರಮಟ್ಟಿಗೆ ಸರಿ?

ಶಾಸಕರನ್ನು ರೆಸಾರ್ಟ್‌ನಲ್ಲಿ ಇಟ್ಟು, ಚುನಾವಣೆ ದಿನ ಕರೆದುಕೊಂಡು ಬಂದು ತಮ್ಮ ಪಕ್ಷದ ಪರ ಮತ ಹಾಕಿಸಿಕೊಳ್ಳುವುದು ಪ್ರಜಾಪ್ರಭುತ್ವದ ಬೇರುಗಳೇ ಅಲುಗಾಡಿದಂತೆ, ಇನ್ನು ಮುಂದಾದರೂ ಈ ರೆಸಾರ್ಟ್ ರಾಜಕಾರಣ ನಿಲ್ಲಲಿ. ಪ್ರಜಾಪ್ರಭುತ್ವದ ಬೇರುಗಳು ಗಟ್ಟಿಯಾಗಿ ಉಳಿಯಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.




ಜೆ.ಎಲ್. ತ್ರಿಪುರಾಂತಕ

ಮೊಬೈಲ್ ನಂ.: 96866–77284

ಬೆರಗು

ಕಾಣದ ದೇವರು... ಕಾಣುವ ದೇವರು...!



ಪ್ರಪಂಚದಲ್ಲಿ ಅತಿ ಹೆಚ್ಚು ಚರ್ಚಿತ ವಿಷಯವೆಂದರೆ ಬಹುಶಃ ಅದು ದೇವರ ಕುರಿತೇ ಆಗಿರುತ್ತದೆ. ಬೆಳಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆವಿಗೆ ತಮ್ಮ ಹೆತ್ತವರನ್ನು, ಒಡಹುಟ್ಟಿದವರನ್ನು, ಕಷ್ಟದಲ್ಲಿ ಸಹಾಯ ಮಾಡಿದ ಸ್ನೇಹಿತರನ್ನು ನೆನೆಯುತ್ತಾರೋ ಇಲ್ಲವೋ? ಆದರೆ ದೇವರ ಕುರಿತಾಗಿ ಕನಿಷ್ಠ ಒಂದು ಬಾರಿಯಾದರೂ ನೆನೆಯುತ್ತಾರೆ. ಆಸ್ತಿಕರಾದರೆ ಲೆಕ್ಕವಿಲ್ಲದಷ್ಟು ಬಾರಿ ದೇವರನ್ನು ನೆನೆಯುವ ಪರಿಪಾಠ ಹೊಂದಿರುತ್ತಾರೆ. ದೇವರ ಕುರಿತು ಅನೇಕ ರೀತಿಯ ಜಿಜ್ಞಾಸೆಗಳಿವೆ. ದೇವರು ಎಂಬುದು ಮನುಷ್ಯನ ಸೃಷ್ಟಿ ಎಂದು ನಾಸ್ತಿಕರು ವಾದಿಸಿದರೆ, ಭೂಮಿ ಮೇಲಿನ ಸಕಲ ಜೀವಿಗಳ ಸೃಷ್ಟಿಕರ್ತ ದೇವರು ಎಂದು ಆಸ್ತಿಕರು ನಂಬುತ್ತಾರೆ, ಹಾಗೆಯೇ ಪ್ರತಿಪಾದಿಸುತ್ತಾರೆ ಕೂಡ. ದೇವರ ಕುರಿತಾಗಿ ತದ್ವಿರುದ್ಧ ನಂಬಿಕೆಗಳಿರುವುದರಿಂದ ಕೆಲವರು ಈ ಕುರಿತು ತಟಸ್ಥ ನೀತಿ ಅನುಸರಿಸಿ ನಿರುಮ್ಮಳವಾಗಿದ್ದಾರೆ. ದೇವರ ಅಸ್ತಿತ್ವದ ಕುರಿತು ಕೆಲವರು ಅನೇಕ ಪುರಾವೆ, ಪವಾಡಗಳನ್ನು ಸಾಕ್ಷಿಯಾಗಿ ತೋರಿಸಿದರೆ, ಕೋವಿಡ್ ಬಂದಾಗ ದೇವಸ್ಥಾನಗಳಿಗೆ ಬಾಗಿಲು ಹಾಕುವ ಪರಿಸ್ಥಿತಿ ಬಂತು, ದೇವರು ದೇವರ ಗುಡಿಯಲ್ಲಿಯೇ ಇಲ್ಲ ಎಂದು ನಿರೂಪಿಸಿದವರು ಅನೇಕರು. ಬಹುಶಃ ಮನುಷ್ಯ ಭೂಮಿಯ ಮೇಲೆ ಇರುವವರೆವಿಗೂ ದೇವರ ಕುರಿತಾದ ವಾದವಿವಾದಗಳಿಗೆ ಅಂತ್ಯವೇ ಇಲ್ಲ ಎನ್ನಬಹುದು.

'ಮಾತೃ ದೇವೋ ಭವ, ಪಿತೃದೇವೋ ಭವ, ಆಚಾರ್ಯ ದೇವೋ ಭವ, ಅತಿಥಿ ದೇವೋ ಭವ' ಎಂದು ಉಪನಿಷತ್‌ನಲ್ಲಿ ಉಲ್ಲೇಖಿಸಿದ್ದು, ಭಾರತೀಯ ಪರಂಪರೆಯಲ್ಲಿ ಈ ಸಾಲುಗಳನ್ನು ಶತಮಾನಗಳಿಂದ ಬಳಸಲಾಗುತ್ತಿದೆ. ಕಣ್ಣಿಗೆ ಕಾಣದ ದೇವರುಗಳು ಅನೇಕ ಇರಬಹುದು, ಆದರೆ ತಾಯಿ, ತಂದೆ, ಗುರು ಹಾಗೂ ಅತಿಥಿಗಳು ಕಣ್ಣಿಗೆ ಕಾಣುವ ದೇವರುಗಳಾಗಿದ್ದಾರೆ. ಅವರುಗಳನ್ನು ಗೌರವಿಸಬೇಕಾದುದು ಮನುಷ್ಯನಾದವನ ಧರ್ಮ ಎಂಬುದು ಇದರ ಸಾರ. ಆದರೆ ಈ ನೀತಿ ಎಷ್ಟರ ಮಟ್ಟಿಗೆ ಚಾಲ್ತಿಯಲ್ಲಿದೆ ಎಂಬುದು ಬೇರೆಯದೇ ವಿಷಯ. ಭಾರತ ದೇಶದಲ್ಲಿ ಮೂವತ್ತಮೂರು ಕೋಟಿ ದೇವರುಗಳು ಇವೆ ಎಂಬ ನಂಬಿಕೆ ಇದೆ. ಅಂದರೆ ದೇವರು ಎಂಬ ನಂಬಿಕೆಗೆ ಕೋಟಿ ಕೋಟಿ ರೂಪಗಳನ್ನು ಕೊಟ್ಟು, ಗುಡಿಗೋಪುರಗಳನ್ನು ಕಟ್ಟಿ, ಹಬ್ಬ, ಜಾತ್ರೆ ಆಚರಿಸಿ ದೇವರ ಅಸ್ತಿತ್ವವನ್ನು ಎತ್ತಿಹಿಡಿಯಲಾಗುತ್ತಿದೆ. ದಕ್ಷಿಣ ಭಾರತದಲ್ಲಿ ಕಲ್ಲಿನಿಂದ ನಿರ್ಮಿಸಿರುವ ಅನೇಕ ಪುರಾತನ ದೇವಾಲಯಗಳ ವಿಸ್ತೀರ್ಣ ಹಾಗೂ ಗೋಪುರಗಳ ಎತ್ತರ, ವಾಸ್ತುಶಿಲ್ಪ ಗಮನಿಸಿದಲ್ಲಿ ಇವುಗಳು ಮನುಷ್ಯನಿಂದ ನಿರ್ಮಿಸಲು ಸಾಧ್ಯವೇ ಎಂದು ಹುಬ್ಬೇರಿಸುವಂತಿವೆ? ದೇವರ ಅಸ್ತಿತ್ವದ ನಂಬಿಕೆ ಮನುಷ್ಯನಿಂದ ಅಸಾಧ್ಯವಾದುದನ್ನು ಸಾಧ್ಯವಾಗಿಸಿದೆ ಎನ್ನಬಹುದು. ಇಂದಿನ ವಿಜ್ಞಾನ–ತಂತ್ರಜ್ಞಾನ ಯುಗದಲ್ಲಿ ಒಂದೇ ಒಂದು ಆ ಮಾದರಿಯ ದೇವಾಲಯವನ್ನು ನಿರ್ಮಿಸಲು ಸಾಧ್ಯವಾಗದೇ ಇರುವುದು ಸೋಜಿಗದ ಸಂಗತಿ.

ಕೆಲವರು ಪ್ರಕೃತಿಯನ್ನೇ ದೇವರು ಎಂದು ನಂಬುತ್ತಾರೆ, ಪೂಜಿಸುತ್ತಾರೆ ಕೂಡ. ಪ್ರಕೃತಿಯಲ್ಲಿನ ಪ್ರತಿ ವಸ್ತುವೂ ದೇವರ ಸ್ವರೂಪ ಎಂದು ನಂಬುವವರು ಇದ್ದಾರೆ. ಕಲ್ಲು, ಮರ, ಗಿಡ ಅಷ್ಟೇ ಅಲ್ಲ ಪ್ರಾಣಿ ಪಕ್ಷಿಗಳು ಕೂಡ ದೇವರ ಸ್ವರೂಪ ಎಂದು ನಂಬುತ್ತಾರೆ. ಒಂದೊಂದು ಧರ್ಮದವರು ದೇವರ ಕುರಿತಾಗಿ ತಮ್ಮದೇ ನಂಬಿಕೆ ಹಾಗೂ ಆಚರಣೆಯನ್ನು ಅನುಸರಿಸುತ್ತಾರೆ. ಹಸುವನ್ನು ಗೋಮಾತೆ ಎಂದು ಒಬ್ಬರು ಪೂಜಿಸಿದರೆ, ಮತ್ತೊಬ್ಬರು ಅದೇ ಹಸುವನ್ನು ಅಮಾನವೀಯವಾಗಿ ವಧಿಸಿ ಭಕ್ಷಿಸಿಬಿಡುತ್ತಾರೆ. ಹಂದಿಯು ಒಬ್ಬರಿಗೆ ಮಾಂಸಾಹಾರದ ಪ್ರಾಣಿ ಎನಿಸಿದರೆ, ಅದನ್ನು ವಿಷ್ಣುವಿನ ಮೂರನೇ ಅವತಾರ ವರಾಹ ಸ್ವಾಮಿ ಎಂದು ಪೂಜಿಸುವವರು ಇದ್ದಾರೆ. ಅನೇಕ ಪ್ರಾಣಿಪಕ್ಷಿಗಳು ದೇವರುಗಳ ವಾಹನಗಳಾಗಿ ಕಾಣುತ್ತವೆ. ಅವುಗಳನ್ನು ಮನುಷ್ಯ ತನ್ನ ಕಲ್ಪನೆಯಲ್ಲಿ ಚಿತ್ರಿಸಿ ಗೌರವಿಸುತ್ತಾನೆ, ಪೂಜಿಸುತ್ತಾನೆ.

> ಕೆಲವರು ಪ್ರಕೃತಿಯನ್ನೇ ದೇವರು ಎಂದು ನಂಬುತ್ತಾರೆ, ಪೂಜಿಸುತ್ತಾರೆ ಕೂಡ. ಪ್ರಕೃತಿಯಲ್ಲಿನ ಪ್ರತಿ ವಸ್ತುವೂ ದೇವರ ಸ್ವರೂಪ ಎಂದು ನಂಬುವವರು ಇದ್ದಾರೆ. ಕಲ್ಲು, ಮರ, ಗಿಡ ಅಷ್ಟೇ ಅಲ್ಲ ಪ್ರಾಣಿ ಪಕ್ಷಿಗಳು ಕೂಡ ದೇವರ ಸ್ವರೂಪ ಎಂದು ನಂಬುತ್ತಾರೆ. ಒಂದೊಂದು ಧರ್ಮದವರು ದೇವರ ಕುರಿತಾಗಿ ತಮ್ಮದೇ ನಂಬಿಕೆ ಹಾಗೂ ಆಚರಣೆಯನ್ನು ಅನುಸರಿಸುತ್ತಾರೆ. ಹಸುವನ್ನು ಗೋಮಾತೆ ಎಂದು ಒಬ್ಬರು ಪೂಜಿಸಿದರೆ, ಮತ್ತೊಬ್ಬರು ಅದೇ ಹಸುವನ್ನು ಅಮಾನವೀಯವಾಗಿ ವಧಿಸಿ ಭಕ್ಷಿಸಿ ಬಿಡುತ್ತಾರೆ. ಹಂದಿಯು ಒಬ್ಬರಿಗೆ ಮಾಂಸಾಹಾರದ ಪ್ರಾಣಿ ಎನಿಸಿದರೆ, ಅದನ್ನು ವಿಷ್ಣುವಿನ ಮೂರನೇ ಅವತಾರ ವರಾಹ ಸ್ವಾಮಿ ಎಂದು ಪೂಜಿಸುವವರು ಇದ್ದಾರೆ. ಅನೇಕ ಪ್ರಾಣಿ-ಪಕ್ಷಿಗಳು ದೇವರುಗಳ ವಾಹನಗಳಾಗಿ ಕಾಣುತ್ತವೆ. ಅವುಗಳನ್ನು ಮನುಷ್ಯ ತನ್ನ ಕಲ್ಪನೆಯಲ್ಲಿ ಚಿತ್ರಿಸಿ ಗೌರವಿಸುತ್ತಾನೆ, ಪೂಜಿಸುತ್ತಾನೆ.

ಗ್ರಾಮಗಳಲ್ಲಿ ಗ್ರಾಮದೇವತೆಯೂ ಸೇರಿದಂತೆ ಅನೇಕ ದೇವಾಲಯಗಳು ಇರುವುದು ವಾಡಿಕೆ. ಕೆಲವು ಗ್ರಾಮಗಳಲ್ಲಿ ದೊಡ್ಡ ಗುಡಿ ಕಟ್ಟದಿದ್ದರೂ ದೇವರ ಶ್ರದ್ಧಾಕೇಂದ್ರವಾಗಿ ಸಣ್ಣ ಕಟ್ಟೆಯಾದರೂ ಇದ್ದೇ ಇರುತ್ತದೆ. ಈ ದೇವಾಲಯಗಳು ಇಲ್ಲದೇ ಇದ್ದಲ್ಲಿ ಇಂದು ಸ್ವೇಚ್ಛಾಚಾರ ಹೆಚ್ಚಾಗಿ ಮನುಷ್ಯನ ಹುಚ್ಚಾಟಗಳಿಗೆ ಕಡಿವಾಣ ಹಾಕುವವರು ಇರುತ್ತಿರಲಿಲ್ಲವೇನೋ? ಯಾರಿಗೂ ಹೆದರದವರು ಊರಿನ ದೇವರಿಗೆ, ದೈವಕ್ಕೆ ಹೆದರುವುದನ್ನು ಕಾಣಬಹುದು. ಗ್ರಾಮದೇವತೆ ನ್ಯಾಯದೇವತೆಯಾಗಿಯೂ ಕಾರ್ಯ ನಿರ್ವಹಿಸುವುದನ್ನು ಕಾಣಬಹುದು. ಆಣೆ, ಪ್ರಮಾಣ, ಕರ್ಪೂರ ಹಚ್ಚುವುದು, ವರ ಕೇಳುವುದು ಇಂತಹ ಪದ್ಧತಿಗಳು ಇಂದಿಗೂ ಚಾಲ್ತಿಯಲ್ಲಿವೆ. ಬಾಲ್ಯದಿಂದಲೇ ದೇವರು 'ಶಿಷ್ಟ ರಕ್ಷಕ, ದುಷ್ಟ ಶಿಕ್ಷಕ' ಎಂಬ ತತ್ವವನ್ನು ಹಿರಿಯರು ತಲೆಗೆ ತುಂಬಿದ ಕಾರಣ ತಪ್ಪೆಸಗುವವರಿಗೆ ಒಂದು ರೀತಿಯ ಅವ್ಯಕ್ತ ಭಯ ಕಾಡುತ್ತಲೇ ಇರುತ್ತದೆ. ಇದರಿಂದ ತಪ್ಪು ಮಾಡುವವರು ಕಡಿಮೆಯಾಗುವ ಸಾಧ್ಯತೆ ಇರುತ್ತದೆ. ಸಮಾಜದಲ್ಲಿ ಸ್ವಾಸ್ಥ್ಯ ಕಾಪಾಡುವ ನಿಟ್ಟಿನಲ್ಲಿ, ದೇವರು ಹಾಗೂ ದೇವಾಲಯ ಪ್ರಮುಖ ಪಾತ್ರ ವಹಿಸುತ್ತವೆ ಎನ್ನಬಹುದು.

ದೇವರು ಎಂಬುದು ನಂಬಿಕೆಯ ಉತ್ಕಟ ಭಾವ. ದೇವರನ್ನು ಆರಾಧಿಸುವವರು ಇರುವಂತೆ ದೇವರನ್ನು ಲೇವಡಿ ಮಾಡುವವರು ಸಹ ಇದ್ದಾರೆ. ಅಷ್ಟೇ ಏಕೆ ದೇವರ ಹೆಸರಿನಲ್ಲಿ ಇಲ್ಲಸಲ್ಲದ ಅರಿಕೆ, ಸೇವೆ, ಪೂಜೆ ಎಂದು ಆಸ್ತಿಕ ಬಂಧುಗಳನ್ನು ನಂಬಿಸಿ ಅರ್ಥವಿಲ್ಲದ ಪೂಜೆ ಮಾಡಿಸಿ, ಹಣ ಬಾಚುವವರು ಇದ್ದಾರೆ. ದೇವರು ಹಸಿದವರಿಗೆ ಹೊಟ್ಟೆ ತುಂಬಿಸುತ್ತಾನೋ ಇಲ್ಲವೋ ಆದರೆ ಕೆಲವರಿಗೆ ಮಾತ್ರ 'ಉದರ ನಿಮಿತ್ತಂ ಬಹುಕೃತ ವೇಷಂ' ಎನ್ನುವಂತೆ ಮನುಷ್ಯನ ನಂಬಿಕೆಯನ್ನು ಬಂಡವಾಳವಾಗಿಸಿಕೊಂಡು ಹಣ ಗಳಿಸುವ ಮಾರ್ಗವನ್ನು ದುರುಳರು ಮಾಡಿಕೊಂಡಿದ್ದಾರೆ. 'ದೊಡ್ಡ ನಾಸ್ತಿಕ ಯಾರು ಎಂದರೆ ಪುರೋಹಿತ' ಎಂದು ಒಂದು ಮಾತಿದೆ. ಎಲ್ಲಾ ಪುರೋಹಿತರ ಕುರಿತಾಗಿ ಈ ಮಾತನ್ನು ಇಲ್ಲಿ ಉಲ್ಲೇಖಿಸಿಲ್ಲ. ಅನೇಕರು ತಮ್ಮ ಪೌರೋಹಿತ್ಯ ವೃತ್ತಿಯನ್ನು ತುಂಬಾ ಶ್ರದ್ಧೆ ಹಾಗೂ ಪ್ರಾಮಾಣಿಕತೆಯಿಂದ ನಿರ್ವಹಿಸುತ್ತಾ, ಆ ವೃತ್ತಿಗೆ ತುಂಬಾ ಗೌರವ ತರುತ್ತಾರೆ. ಆದರೆ ಕೆಲವು ಪುರೋಹಿತರು ಮಾತ್ರ ನಿಯತ್ತಾಗಿ ಮಂತ್ರವನ್ನೂ ಹೇಳದೆ, ಆರತಿಯನ್ನೂ ಮಾಡದೆ, ಕಾಟಾಚಾರಕ್ಕೆ ಯಾಂತ್ರಿಕವಾಗಿ ತಮ್ಮ ಕೆಲಸ ಮಾಡಿಮುಗಿಸುತ್ತಾರೆ. ಭಕ್ತರು ದೇವರ ಹೆಸರಿನಲ್ಲಿ ಕೊಟ್ಟ ವಸ್ತುಗಳನ್ನು ಗೌರವಪೂರ್ಣವಾಗಿ ದೇವರ ಮೂರ್ತಿಗೂ ಮುಟ್ಟಿಸದೆ ಅದನ್ನು ಒಂದು ವ್ಯಾಪಾರಿ ವಸ್ತುವಿನಂತೆ ಕಾಣುವ ಹಣ ಕೇಂದ್ರಿತ ಪುರೋಹಿತ ವರ್ಗವನ್ನು ಕಂಡಾಗ ಈ ಮಾತು ಸತ್ಯ ಎನಿಸುತ್ತದೆ.

ದೇವರ ಕುರಿತು ಮನುಷ್ಯನಿಗೆ ಭಕ್ತಿಗಿಂತ ಹೆಚ್ಚಾಗಿ ಭಯವೇ ಇರುವಂತೆ ಕಾಣುತ್ತದೆ. ಏಕೆಂದರೆ ಇತ್ತೀಚೆಗೆ ಯಾವುದೇ ದೇವಸ್ಥಾನ ನೋಡಿದರು ಭಕ್ತರಿಂದ ತುಂಬಿತುಳುಕುತ್ತಿರುತ್ತದೆ. ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ದೇವಸ್ಥಾನದ ಮೊರೆ ಹೋಗುವುದು ವಾಡಿಕೆ. ಅಷ್ಟೇ ಅಲ್ಲದೆ ದೇವಸ್ಥಾನಕ್ಕೆ ಹೋಗಿ ಬಂದರೆ ಮನಸ್ಸಿಗೆ ಶಾಂತಿ ದೊರಕುತ್ತದೆ. ಅಲ್ಲಿ ಸಿಗುವ ಧನಾತ್ಮಕ ತರಂಗಗಳು ಮನುಷ್ಯನ ಮನಸ್ಸನ್ನು ತುಸು ಹೊತ್ತು ನಿಗ್ರಹಿಸುತ್ತದೆ. ಜೀವನದ ಜಂಜಾಟದಿಂದ ಬೇಸತ್ತ ಮನುಷ್ಯ ಮನಃಶಾಂತಿಗಾಗಿ ದೇವಸ್ಥಾನಕ್ಕೆ ಭೇಟಿ ಕೊಡುವುದು ಅಭ್ಯಾಸವಾಗಿದೆ. ಆದರೆ ಎಷ್ಟೋ ಭಕ್ತರು ತಾವು ಅನುಭವಿಸುತ್ತಿರುವ ಪಾಪಪ್ರಜ್ಞೆಯಿಂದ ಮುಕ್ತಿಪಡೆಯಲು ದೇವಸ್ಥಾನಕ್ಕೆ ಎಡತಾಕುತ್ತಿರುವುದನ್ನು ಕಾಣಬಹುದು. ಮಾಡಿದ ಪಾಪದ ಪ್ರಾಯಶ್ಚಿತ್ತವಾಗಿ ಪುಣ್ಯಸ್ನಾನ ಮಾಡಿ, ವಿಶೇಷ ಪೂಜೆಗಳನ್ನು ಮಾಡಿಸಿ ಸ್ವಲ್ಪ ಮಟ್ಟದ ಸಮಾಧಾನ ಹೊಂದುತ್ತಾರೆ.

ಹನ್ನೆರಡನೇ ಶತಮಾನದಲ್ಲಿ ಶರಣರನೇಕರು ದೇವರ ಕುರಿತು ತಮ್ಮದೇ ಆದ ತತ್ವಗಳನ್ನು ಪ್ರತಿಪಾದಿಸಿದ್ದಾರೆ. ಮೂರ್ತಿ ಪೂಜೆಯನ್ನು, ಡಾಂಭಿಕ ಭಕ್ತಿಯನ್ನು, ಇಲ್ಲಸಲ್ಲದ ಆಚರಣೆಗಳನ್ನು ಬಹಳ ಕಠಿಣವಾಗಿ ಟೀಕಿಸಿದ್ದಾರೆ. 'ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ', 'ಸುತ್ತಿ ಸುತ್ತಿ ಬಂದಡಿಲ್ಲ, ಲಕ್ಷ ಗಂಗೆ ಮಿಂದಡಿಲ್ಲ', 'ಕಾಯಕವೇ ಕೈಲಾಸ' 'ಕಲ್ಲ ನಾಗರ ಕಂಡರೆ ಹಾಲನೆರೆಯೆಂಬರು, ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯಾ, ಉಣುವ ಜಂಗಮ ಬಂದಡೆ ನಡೆಯೆಂಬರು', 'ನಂಬರು ನೆಚ್ಚರು ಬರಿದೆ ಕರೆವರು', ಹೀಗೆ ಸಾವಿರಾರು ವಚನಗಳ ಮೂಲಕ ದೇವರ ಕುರಿತಾಗಿ ತಮ್ಮ ನಿಲುವುಗಳನ್ನು ಪ್ರಕಟಿಸಿದ್ದಾರೆ. ಅವರು ಎಂದಿಗೂ ದೇವರ ಅಸ್ತಿತ್ವವನ್ನು ಪ್ರಶ್ನಿಸಿಲ್ಲ, ಬದಲಿಗೆ ಮನುಷ್ಯನ ನಡೆ ಹಾಗೂ ನುಡಿಯಲ್ಲಿನ ಭಿನ್ನತೆಯನ್ನು ಗುರುತಿಸಿ ದೇವರ ಕುರಿತಾಗಿ ಅರಿವನ್ನು ಮೂಡಿಸಿ ಅಂಧಶ್ರದ್ಧೆಯನ್ನು ಕಡಿಮೆ ಮಾಡುವ ಪ್ರಯತ್ನ ಮಾಡಿದ್ದಾರೆ.

ಮನುಷ್ಯನ ಬದುಕಿನಲ್ಲಿ ನಿತ್ಯವೂ ಒಂದಲ್ಲ ಒಂದು ದ್ವಂದ್ವ ಕಾಡುತ್ತಿರುತ್ತದೆ. ಸರಿತಪ್ಪುಗಳ ಲೆಕ್ಕಾಚಾರದಲ್ಲಿ ಪಾಪಪ್ರಜ್ಞೆ ಕಾಡುತ್ತಿರುತ್ತದೆ. ಎಷ್ಟೋ ಬೃಹತ್ ಕೆಲಸಗಳನ್ನು ಪ್ರಾರಂಭಿಸಿದಾಗ ಭಯ ಕಾಡುತ್ತಿರುತ್ತದೆ. ಆಗ ಅವನು ಎಲ್ಲರಿಗಿಂತ, ಎಲ್ಲದಕ್ಕಿಂತ ದೇವರ ಮೇಲೆ ತನ್ನ ಭಾರ ಹಾಕುತ್ತಾನೆ. ದೇವರನ್ನು ಪ್ರಾರ್ಥಿಸುತ್ತಾನೆ. ದೇವರು ನನಗೆ ಶಕ್ತಿ ನೀಡುತ್ತಾನೆ ಎಂದು ನಂಬುತ್ತಾನೆ. ಆ ನಂಬಿಕೆಯೇ ಅಸಾಧ್ಯ ಎನಿಸಿದ ಕೆಲಸವನ್ನು ಮಾಡಿಸಿಬಿಡುತ್ತದೆ. ದೇವರು ಪರೋಕ್ಷವಾಗಿ ಮನುಷ್ಯನಿಗೆ ಸಹಕಾರ ನೀಡುತ್ತಾನೆ ಎಂದು ನಂಬುತ್ತಾನೆ. ದೇವರು ಪರೋಕ್ಷವಾಗಿ ನೆರವು ನೀಡುವ ರೀತಿಯಲ್ಲಿಯೇ ಪ್ರತ್ಯಕ್ಷವಾಗಿ ನೆರವು ನೀಡುವ ಜನರು ಅನೇಕರ ಬದುಕಿನಲ್ಲಿ ಬಂದಿರುತ್ತಾರೆ. ಕಷ್ಟದ ಕಾಲದಲ್ಲಿ ಕೈಹಿಡಿಯುತ್ತಾರೆ, ಬದುಕೇ ಭಾರ ಎನಿಸಿದಾಗ ಹೆಗಲು ಕೊಟ್ಟು ಮುನ್ನಡೆಸುತ್ತಾರೆ. ಅವರು ಯಾವ ದೇವರಿಗಿಂತಲೂ ಕಡಿಮೆ ಇರುವುದಿಲ್ಲ. ಅವರನ್ನು ಗೌರವಿಸುವ, ಕೃತಜ್ಞತೆಯಿಂದ ನೆನೆಸಿಕೊಳ್ಳುವ ಮನೋಭಾವ ಹೆಚ್ಚಾಗಬೇಕು. ಅವರೇ ಕಣ್ಣಿಗೆ ಕಾಣುವ ದೇವರಾಗಿರುತ್ತಾರೆ. ಅದೃಶ್ಯ ದೇವರು ಈ ರೂಪದಲ್ಲಿ ಸದೃಶ್ಯನಾಗಿದ್ದಾನೆ ಎಂದು ನಂಬಬೇಕು. ಅವರಿಗೆ ಪೂಜಿಸಬೇಕು ಎಂಬುದು ಮಾತಿನ ಅರ್ಥವಲ್ಲ. ಕಷ್ಟದಲ್ಲಿ ನೆರವಾದವರನ್ನು ನೆನೆಯುವುದು ಮನುಷ್ಯನ ಮುಖ್ಯ ಗುಣವಾಗಬೇಕು. ಅದಬಿಟ್ಟು ಅವರನ್ನು ಕಡೆಗಣಿಸಿ, ಇಲ್ಲದ ಹರಿಕೆ ತೀರಿಸಲು ಹೊರಡುವುದು ಮೂರ್ಖತನ.

ಜನ್ಮಕೊಟ್ಟ ತಾಯಿ–ತಂದೆ, ದಾರಿ ತೋರಿದ ಗುರುವನ್ನು ಪಾತಃಕಾಲದಲ್ಲಿ ನೆನೆದು, ಅವರಿಗೆ ಕೃತಜ್ಞತೆ ಸಲ್ಲಿಸುವುದು ಮಾನವ ಧರ್ಮ. ಇಳಿ ವಯಸ್ಸಿನ ತಾಯಿತಂದೆಯನ್ನು ಉಪೇಕ್ಷಿಸಿ, ತನ್ನ ಒಳಿತಿಗಾಗಿ ಮೊರೆ ಇಡುತ್ತಾ ತೀರ್ಥಯಾತ್ರೆ ಮಾಡಿ ದರೆ ಏನು ಫಲ? ನಿತ್ಯ ಕಣ್ಣಿಗೆ ಕಾಣುವ ದೇವರನ್ನು ನೋಡದೆ, ಗೌರವಿಸದೆ, ದೂರದ ಪುಣ್ಯಕ್ಷೇತ್ರಕ್ಕೆ ಹೋಗಿ ದೇವರ ದರ್ಶನ ಮಾಡುವುದರಿಂದ ಪುಣ್ಯ ಪ್ರಾಪ್ತಿಯಾಗುವುದಿಲ್ಲ, ಬದಲಿಗೆ ಪಾಪ ಪ್ರಾಪ್ತಿಯಾಗುತ್ತದೆ. ಕೆಲವು ಸ್ವಯಂಘೋಷಿತ ದೇವಮಾನವರು ಅನೇಕರು ಇದ್ದಾರೆ, ಅವರನ್ನು ಉಪೇಕ್ಷಿಸಿ ನಡೆಯಬೇಕು. ದೇವರ ಹೆಸರಿನಲ್ಲಿ ದೊಂಬರಾಟಗಳನ್ನು ಬಿಟ್ಟು, ಅಗತ್ಯವಿರುವಷ್ಟು ಪೂಜೆಪುನಸ್ಕಾರಗಳನ್ನು ಮಾಡಿ, ತಮ್ಮ ಶಕ್ತಿ ಅನುಸಾರ ಅಗತ್ಯವಿರುವವರಿಗೆ ನೆರವು ನೀಡಿ ಅವರ ಬಾಳಿನ ದೇವರಾಗುವುದು ಒಳಿತು. ಏನಂತೀರಿ?

ಪದ ತಾಂಬೂಲ: ನಿತ್ಯಸತ್ಯವಾಗಿ ನಡೆದರೆ ದೇವರನ್ನು ಹುಡುಕಿ ಎಲ್ಲಿಗೂ ಹೋಗಬೇಕಿಲ್ಲ, ದೇವರೇ ಹುಡುಕಿಕೊಂಡು ಬರುವನು.

ಮಳವಳ್ಳಿಯ ಐತಿಹಾಸಿಕ ಸಿಡಿ ಹಬ್ಬ ಆಚರಣೆ



ಜಾತ್ರಾ ಮಹೋತ್ಸವದಲ್ಲಿ ಕೊಂಡ ಹಾಯುತ್ತಿರುವುದು.

ಮಳವಳ್ಳಿ: ಲಕ್ಷಾಂತರ ಭಕ್ತರ ನಡುವೆ ಸಿಡಿರಣ್ಣನನ್ನು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಎಳೆದು ಪಟ್ಟಲದಮ್ಮ ದೇವಸ್ಥಾನದಲ್ಲಿ ಅಂತಿಮಗೊಳಿಸಿದ ನಂತರ ಪೂಜಾರಿ ಕೊಂಡ ಹಾಯುವುದರ ಮೂಲಕ ಐತಿಹಾಸಿಕ ಪಟ್ಟಲದಮ್ಮ ಸಿಡಿ ಹಬ್ಬವನ್ನು ಆಚರಿಸಲಾಯಿತು.

ಹಿಂದಿನಿಂದ ನಡೆದುಕೊಂಡು ಬಂದ ಸಂಪ್ರದಾಯದಂತೆ ಕೋಟೆ ಪಟೇಲ್ ಚಿಣ್ಣೇಗೌಡರ ಮನೆಯ ಮುಂದೆ ಸಿಡಿಯನ್ನು ಕಟ್ಟಲು ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಗಂಗಾಮತಸ್ಥರ ಬೀದಿಯ ಪಟ್ಟಲದಮ್ಮ ದೇವಸ್ಥಾನದಿಂದ ತಂದಿದ್ದ ಸಿಡಿರಣ್ಣನ ಗೊಂಬೆಯನ್ನು ಸಿಡಿ ಮರಕ್ಕೆ ಕಟ್ಟಲಾಯಿತು. ಮಧ್ಯರಾತ್ರಿ 12 ಗಂಟೆಯ ಸಮಯದಲ್ಲಿ ಸಿಡಿರಣ್ಣನಿಗೆ ಪೂಜೆ ಸಲ್ಲಿಸಿ ಸಿಡಿ ಏರಿಸುವುದಕ್ಕೆ ಚಾಲನೆ ನೀಡಲಾಯಿತು. ಯುವಕರ ತಂಡ ಸಿಡಿಬಂಡಿಯನ್ನು, ಸಾರಂಗ ಪಾಣಿ ಬೀದಿ, ಕೋಟೆ ಬೀದಿ, ಮೈಸೂರು ರಸ್ತೆ ಮೂಲಕ ಪೇಟೆ ಬೀದಿ ಮೂಲಕ ಸಾಗಿಸಿ ಗಂಗಾಮತ ಬೀದಿಯ ಕುಪ್ಪಸ್ವಾಮಿ ವೃತ್ತಕ್ಕೆ ಬಂದು ಸುಲ್ತಾನ್ ರಸ್ತೆಯ ಮಾರ್ಗ ವಾಗಿ ಪಟ್ಟಲದಮ್ಮ ದೇವಸ್ಥಾನದ ಆವರಣಕ್ಕೆ ಆಗಮಿಸಿದಾಗ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಪೂಜೆ ಸಲ್ಲಿಸಿ ದರು. ಮೂರು ಸುತ್ತು ಸುತ್ತಿದ ಸಿಡಿ ರಣ್ಣನಿಗೆ ನವ ದಂಪತಿಗಳು ಸೇರಿದಂತೆ ಸಾವಿರಾರು ಮಂದಿ ಹಣ್ಣು ಜವನ ಎಸೆದು ಭಕ್ತಿ ಭಾವ ಮೆರೆದರು. ಶಾಸಕ ಪಿ.ಎಂ.ನರೇಂದ್ರಸ್ವಾಮಿ ಪಟ್ಟಲದಮ್ಮನ ಹಾಗೂ ವಳಗೆರೆ ಹುಚ್ಚಮ್ಮ ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು.

ಸಿಡಿ ಅಂತಿಮಗೊಳ್ಳುತ್ತಿದ್ದಂತೆ ಗಂಗಾಮತ ಬೀದಿಯ ಅಡ್ಡೆನಿಂಗಯ್ಯನ ಕೇರಿಯ ರಘು ಕೊಂಡಕ್ಕೆ ಪೂಜೆ ಸಲ್ಲಿಸಿ ಕೊಂಡವನ್ನು ಹಾಯ್ದರು, ನಂತರ ಹರಕೆ ಹೊತ್ತ ಸುಮಾರು 50ಕ್ಕೂ ಹೆಚ್ಚು ಮಂದಿ ಸರದಿ ಸಾಲಿನಲ್ಲಿ ತೆರಳಿ ಕೊಂಡ ಹಾಯುವ ಮೂಲಕ ಹರಕೆ ತೀರಿಸಿದರು. ಮೆರವಣಿಗೆಯಲ್ಲಿ ಸಾವಿರಾರು ಮಹಿಳೆಯರು ತಂಬಿಟ್ಟಿನ ಆರತಿಯೊಂದಿಗೆ ಪಟ್ಟಲದಮ್ಮನ ದೇವಸ್ಥಾನದತ್ತ ತೆರಳಿದರು. ನಂತರ ಸಿದ್ದಾರ್ಥನಗರ, ಕೀರ್ತಿ ನಗರ, ಗಂಗಾಮತಸ್ಥರ ಬೀದಿ, ಅಶೋಕ್ ನಗರದ ಮಹಿಳೆಯರು ಮೆರವಣಿಗೆ ಮೂಲಕ ಘಟ್ಟದೊಂದಿಗೆ ತೆರಳಿ ಪಟ್ಟಲದಮ್ಮನಿಗೆ ಪೂಜೆ ಸಲ್ಲಿಸಿದರು.

ಯುಪಿ: ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ, ಏಳು ಮಂದಿ ದುರ್ಮರಣ

ಕೌಶಂಬಿ, ಫೆ.25– ಉತ್ತರ ಪ್ರದೇಶದ ಕೌಶಂಬಿಯಲ್ಲಿರುವ ಪಟಾಕಿ ಕಾರ್ಖಾನೆಯಲ್ಲಿ ಭಾನುವಾರ ಸಂಭವಿಸಿದ ಸ್ಫೋಟದಲ್ಲಿ ಕನಿಷ್ಠ ಏಳು ಜನರು ಸಾವನ್ನಪ್ಪಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಕೊಖ್ರಾಜ್ ಪೊಲೀಸ್ ಠಾಣಾ ವ್ಯಾಪ್ತಿಯ ಕೌಶಂಬಿಯ ಭರ್ವಾರಿ ಪಟ್ಟಣದಲ್ಲಿರುವ ಪಟಾಕಿ ಕಾರ್ಖಾನೆಯಲ್ಲಿ ಈ ಘಟನೆ ನಡೆದಿದೆ. ಈ ದುರ್ಘಟನೆಯಲ್ಲಿ ಏಳಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದು, ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಕಾರ್ಖಾನೆಯು ವಸತಿ ಪ್ರದೇಶದಿಂದ ದೂರದಲ್ಲಿದ್ದು, ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ. ಕಾರ್ಖಾನೆಯವರು ಪಟಾಕಿ ತಯಾರಿಸಲು ಮತ್ತು ಮಾರಾಟ ಮಾಡಲು ಪರವಾನಗಿ ಹೊಂದಿದ್ದರು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬ್ರಿಜೇಶ್ ಶ್ರೀವಾಸ್ತವ ಮಾಹಿತಿ ನೀಡಿದ್ದಾರೆ.

ಲಿಂಗಾಂಬುದಿ ಕೆರೆಯಲ್ಲಿ 15ಕ್ಕೂ ಹೆಚ್ಚು ಮೀನುಗಳ ಸಾವು: ಅಧಿಕಾರಿಗಳಿಂದ ಪರಿಶೀಲನೆ



ಲಿಂಗಾಂಬುದಿ ಕೆರೆಯಲ್ಲಿ ಮೀನು ಸತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಫೆ.25(ಎಂಟಿವೈ)– ಮೈಸೂರಿನ ಪ್ರಮುಖ ಕೆರೆಗಳಲ್ಲಿ ಒಂದಾಗಿರುವ ಲಿಂಗಾಂಬುದಿ ಕೆರೆಯಲ್ಲಿ 15ಕ್ಕೂ ಹೆಚ್ಚು ಮೀನುಗಳು ಮೃತಪಟ್ಟಿದ್ದು, ವಾಯುವಿಹಾರಿಗಳು ಆತಂಕ ವ್ಯಕ್ತಪಡಿಸಿದ್ದರಿಂದ ಅರಣ್ಯಾಧಿಕಾರಿಗಳು ಕೆರೆಗೆ ತೆರಳಿ ಪರಿಶೀಲನೆ ನಡೆಸಿದರು.

ಕಲುಷಿತ ನೀರಿನಿಂದ ಲಿಂಗಾಂಬುದಿ ಕೆರೆಯಲ್ಲಿ ಮೀನುಗಳು ಸಾವನ್ನಪ್ಪುತ್ತಿರಬಹುದೆಂದು ವಾಯುವಿಹಾರಿಗಳು ಆತಂಕ ವ್ಯಕ್ತಪಡಿಸಿದ್ದರು. ಇಂದು ಬೆಳಗ್ಗೆ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ವಾಯುವಿಹಾರಕ್ಕೆ ತೆರಳಿದ್ದಾಗ ಎರಡು ಮೀನುಗಳು ಸತ್ತಿರುವುದನ್ನು ಗಮನಿಸಿದ್ದಾರೆ. ವಾಯುವಿಹಾರಿಗಳು ನೀಡಿದ ಮಾಹಿತಿ ಮೇರೆಗೆ ಡಿಸಿಎಫ್ ಡಾ.ಕೆ.ಎನ್. ಬಸವರಾಜು ನೀಡಿದ ಸೂಚನೆ ಮೇರೆಗೆ ಆರ್‌ಎಫ್‌ಓ ಧನ್ಯಶ್ರೀ ಹಾಗೂ ಅರಣ್ಯ ಸಿಬ್ಬಂದಿ ಕೆರೆಯ ವಿವಿಧೆಡೆ ತೇಲುತ್ತಿದ್ದ ಮೀನುಗಳ ಕಳೇಬರ ತೆರವುಗೊಳಿಸಿದರು. ಬಳಿಕ ಸತ್ತ ಮೀನುಗಳನ್ನು ಪರಿಶೀಲಿಸಿದಾಗ ಅವುಗಳು ಕೆರೆಯಲ್ಲಿರುವ ಹಳೆಯ ಬಲೆಗಳಿಗೆ ಸಿಲುಕಿ ಗಾಯಗೊಂಡು ಮೃತಪಟ್ಟಿರುವುದು ದೃಢಪಟ್ಟಿವೆ.

ಆದರೂ ಮಧ್ಯಾಹ್ನ ಹಾಗೂ ಸಂಜೆ ಮತ್ತೆ ಕೆರೆಯನ್ನು ಪರಿಶೀಲಿಸಲಾಯಿತು. ಆದರೆ, ಹೊಸದಾಗಿ ಮೀನು ಸತ್ತಿರುವುದು ಕಂಡು ಬಂದಿಲ್ಲ. ಇದರಿಂದ ಆತಂಕ ನಿವಾರಣೆಯಾಗಿದೆ. ಆದರೂ ಪರಿಶೀಲನೆ ಮುಂದುವರೆಸಲು ನಿರ್ಧರಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visvesvaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ-ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಸಾ.ರಾ.ಮಹೇಶ್?

- ಬಿ.ಎಸ್.ಯಡಿಯೂರಪ್ಪ, ಬಿ.ವೈ.ವಿಜಯೇಂದ್ರ ಕಾರ್ಯತಂತ್ರ
- ಬಿಜೆಪಿಯಿಂದ ಸ್ಪರ್ಧಿಸಲು ಸಾ.ರಾ.ಗೆ ವಿಜಯೇಂದ್ರ ಆಫರ್
- ಸ್ಪರ್ಧೆಗೆ ನಿರಾಸಕ್ತಿ ವ್ಯಕ್ತಪಡಿಸಿರುವ ಸಾ.ರಾ.



ಮೈಸೂರು, ಫೆ.25-ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಕೆ.ಆರ್.ನಗರ ಕ್ಷೇತ್ರದ ಜೆಡಿಎಸ್ ಮಾಜಿ ಶಾಸಕ ಸಾ.ರಾ.ಮಹೇಶ್ ಅವರನ್ನು ಕಣಕ್ಕಿಳಿಸಲು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಅವರ ಪುತ್ರರೂ ಆದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕಾರ್ಯತಂತ್ರ ರೂಪಿಸಿದ್ದಾರೆ ಎಂದು ವಿಶ್ವಾಸನೀಯ ಮೂಲಗಳಿಂದ ತಿಳಿದು ಬಂದಿದೆ.

ಮೈಸೂರು-ಕೊಡಗು ಲೋಕಸಭಾ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡುವಂತೆ ಈಗಾಗಲೇ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಬಿಜೆಪಿ ರಾಷ್ಟ್ರೀಯ ಮುಖಂಡರ ಮುಂದೆ ಬೇಡಿಕೆ ಇಟ್ಟಿದ್ದಾರೆ. ಆದರೆ ಈ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡಲು ಬಿಜೆಪಿ ವರಿಷ್ಠರು ಒಪ್ಪಲಿಲ್ಲವೆಂದು ಹೇಳಲಾಗಿದೆ.

ಈ ಹಿನ್ನೆಲೆಯಲ್ಲಿ ತಮ್ಮ ರಾಜಕೀಯ ವಿರೋಧಿ ವಿ.ಸೋಮಣ್ಣ ಪರ ಇದ್ದಾರೆ ಎನ್ನಲಾದ ಹಾಲಿ ಸಂಸದ ಪ್ರತಾಪ್‌ಸಿಂಹ ಅವರಿಗೆ ಟಿಕೆಟ್ ತಪ್ಪಿಸಿ, ಸಾ.ರಾ. ಮಹೇಶ್ ಅವರನ್ನು ಬಿಜೆಪಿಗೆ ಕರೆತಂದು ಅವರಿಗೆ ಟಿಕೆಟ್ ಕೊಡಿಸುವ ನಿಟ್ಟಿನಲ್ಲಿ ಯಡಿಯೂರಪ್ಪ ಮತ್ತು ವಿಜಯೇಂದ್ರ ಕಾರ್ಯೋನ್ಮುಖರಾಗಿದ್ದಾರೆ. ಇತ್ತೀಚೆಗೆ ಮೈಸೂರು ಜಿಲ್ಲಾ ಪ್ರವಾಸ ಕೈಗೊಂಡಿರುವ ವಿಜಯೇಂದ್ರ ಅವರು, ಸಾ.ರಾ.ಮಹೇಶ್ ಅವರನ್ನು ಅವರ ತೋಟದ ಮನೆಯಲ್ಲಿ ಭೇಟಿ ಮಾಡಿ ಈ ಸಂಬಂಧ ಸುದೀರ್ಘ ಚರ್ಚೆ ನಡೆಸಿ ಬಿಜೆಪಿ ಅಭ್ಯರ್ಥಿಯಾಗಿ ಲೋಕಸಭೆಗೆ ಸ್ಪರ್ಧಿಸುವಂತೆ ಆಹ್ವಾನಿಸಿದ್ದಾರೆ. ಈ ವೇಳೆ ವಿಜಯೇಂದ್ರ ಅವರು ಯಡಿಯೂರಪ್ಪ ಅವರಿಗೆ ಕರೆ ಮಾಡಿ ಅವರ ಮೂಲಕವೂ ಸಾ.ರಾ. ಮಹೇಶ್ ಅವರೊಂದಿಗೆ ಮಾತನಾಡಿಸಿದ್ದಾರೆ ಎಂದು ಹೇಳಲಾಗಿದೆ.

ಈ ವೇಳೆ ವಿಜಯೇಂದ್ರ ಅವರಿಗೆ ಪ್ರತಿಕ್ರಿಯಿಸಿದ ಸಾ.ರಾ.ಮಹೇಶ್, ತಮಗೆ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಆಸಕ್ತಿ ಇಲ್ಲ. ಅಲ್ಲದೇ ಜೆಡಿಎಸ್ ಬಿಟ್ಟು ಬಿಜೆಪಿಯಿಂದ ಸ್ಪರ್ಧಿಸುವುದಕ್ಕೆ ಮನಸ್ಸು ಒಪ್ಪುತ್ತಿಲ್ಲ. ಒಂದು ವೇಳೆ ನಮ್ಮ ಪಕ್ಷದ (ಜೆಡಿಎಸ್) ವರಿಷ್ಠರು ಹೇಳಿದರೆ ಮಾತ್ರ ಸ್ಪರ್ಧಿಸುವ ಬಗ್ಗೆ ಚಿಂತನೆ ನಡೆಸುತ್ತೇನೆ. ಆದರೆ ನಾನಾಗಿ ನಮ್ಮ ಪಕ್ಷದ ವರಿಷ್ಠರ ಬಳಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸುವ ಬಗ್ಗೆ ಮಾತನಾಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ ಎನ್ನಲಾಗಿದೆ.

ಸಾ.ರಾ.ಮಹೇಶ್ ಈ ಹಿಂದೆ ಬಿಜೆಪಿಯಲ್ಲೇ ಇದ್ದರು. ಜೊತೆಗೆ ಬಿಜೆಪಿ ಕಾರ್ಯಕರ್ತರೊಂದಿಗೆ ಉತ್ತಮ ಬಾಂಧವ್ಯವನ್ನೂ ಹೊಂದಿದ್ದಾರೆ. ಹೀಗಾಗಿ ಅವರನ್ನು ಅಭ್ಯರ್ಥಿ ಮಾಡಿದರೆ ಕಾರ್ಯಕರ್ತರಿಂದ ಅಷ್ಟೇನೂ ವಿರೋಧ ವ್ಯಕ್ತವಾಗುವುದಿಲ್ಲ. ಜೊತೆಗೆ ಸಾ.ರಾ.ಮಹೇಶ್ ಅವರಿಗಾಗಿ ಶ್ರಮಿಸುತ್ತಾರೆ ಎಂಬುದು ಯಡಿಯೂರಪ್ಪ ಮತ್ತು ವಿಜಯೇಂದ್ರ ಅವರ ಲೆಕ್ಕಾಚಾರವಾಗಿದೆ. ಸಾ.ರಾ. ಮಹೇಶ್ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದು, ಅಲ್ಲಿ ಪ್ರಕೃತಿ ವಿಕೋಪ ಸಂಭವಿಸಿದಾಗ ಹಗಲಿರುಳು ಕೊಡಗಿನಲ್ಲೇ ಇದ್ದು, ಕೆಲಸ ಮಾಡಿದ್ದರಿಂದ ಚಿರಪರಿಚಿತರಾಗಿದ್ದಾರೆ. ಮೈಸೂರು ಜಿಲ್ಲೆಯನ್ನು ಅವರಿಗೆ ಹೆಚ್ಚಿನ ಮತಗಳು ದೊರೆಯುವುದರಿಂದ ಅವರ ಗೆಲುವು ಸುಲಭವಾಗುತ್ತದೆ ಎಂಬುದು ಯಡಿಯೂರಪ್ಪ ಅವರ ಲೆಕ್ಕಾಚಾರವಾಗಿದೆ ಎನ್ನಲಾಗಿದೆ.

ಮೂಲಗಳ ಪ್ರಕಾರ ಬಿಜೆಪಿ ವರಿಷ್ಠರು ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಟ್ಟರೆ ಸಾ.ರಾ.ಮಹೇಶ್ ಅವರನ್ನು ಕಣಕ್ಕಿಳಿಸಲು ಹೆಚ್.ಡಿ.ದೇವೇಗೌಡ ಮತ್ತು ಹೆಚ್.ಡಿ.ಕುಮಾರಸ್ವಾಮಿ ಚಿಂತನೆ ನಡೆಸಿದ್ದಾರೆ. ಹಾಲಿ ಸಂಸದ ಪ್ರತಾಪ್ ಸಿಂಹ ಅವರೂ ಕೂಡ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಮತ್ತು ಕುಮಾರಸ್ವಾಮಿ ಅವರೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವ ಕಾರಣ ತಮ್ಮ ಪಕ್ಷಕ್ಕೆ ಕ್ಷೇತ್ರ ದೊರೆಯದಿದ್ದಲ್ಲಿ ಬಿಜೆಪಿಯಿಂದ ಪ್ರತಾಪ್ ಸಿಂಹ ಅವರಿಗೆ ಟಿಕೆಟ್ ತಪ್ಪಿಸಿ ಸಾ.ರಾ.ಮಹೇಶ್‌ಗೆ ಬಿಜೆಪಿ ಟಿಕೆಟ್ ಕೊಡುವುದನ್ನು ಹೆಚ್.ಡಿ. ದೇವೇಗೌಡ ಮತ್ತು ಕುಮಾರಸ್ವಾಮಿ ಇಚ್ಛಿಸುವುದಿಲ್ಲ ಎಂಬ ಮಾತುಗಳು ಜೆಡಿಎಸ್ ವಲಯದಿಂದ ಕೇಳಿಬಂದಿವೆ. ಮೈಸೂರು-ಕೊಡಗು ಲೋಕಸಭಾ ಕ್ಷೇತ್ರ ಜೆಡಿಎಸ್ ಪಾಲಾಗುವುದೇ? ಬಿಜೆಪಿ ರಾಷ್ಟ್ರೀಯ ನಾಯಕರೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವ ಹಾಲಿ ಸಂಸದ ಪ್ರತಾಪ್ ಸಿಂಹ ಅವರಿಗೆ ಟಿಕೆಟ್ ಕೈತಪ್ಪಿ ಬಿಜೆಪಿ ಅಭ್ಯರ್ಥಿಯಾಗಿ ಸಾ.ರಾ. ಮಹೇಶ್ ಅವರನ್ನು ಕಣಕ್ಕಿಳಿಸಲಾಗುವುದೇ? ಎಂಬುದನ್ನು ಕಾದು ನೋಡಬೇಕಾಗಿದೆ.

ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ಜಾತ್ರೆಗೆ ಚಾಲನೆ



ಮೈಸೂರು, ಫೆ.25(ಎಸ್‌ಪಿಎನ್)-ತಾಲೂಕಿನ ಸರ್ಕಾರಿ ಉತ್ತನಹಳ್ಳಿ ಗ್ರಾಮ ದೇವತೆಯಾದ ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ಮೂರು ದಿನಗಳ ಜಾತ್ರಾ ಮಹೋತ್ಸವಕ್ಕೆ ಸಂಭ್ರಮ ಸಡಗರದಿಂದ ಭಾನುವಾರ ಚಾಲನೆ ದೊರಕಿದೆ.

ಇಂದು ಬೆಳಗ್ಗೆ ಜಾತ್ರಾ ಮಹೋತ್ಸವ ಹಿನ್ನೆಲೆಯಲ್ಲಿ ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರಿಗೆ ಏಕದಶವಾರ ರುದ್ರಾಭಿಷೇಕ, ಸುವರ್ಣಾಲಂಕಾರ, ಸಹಸ್ರನಾಮಾರ್ಚನೆ, ನಿವೇದನೆ, ಮಹಾಮಂಗಳಾರತಿ, ರಾಜೋಪಚಾರ, ರಾಷ್ಟ್ರಾಶೀವಾದ ನೆರವೇರಿಸಲಾಯಿತು.

ತದ ನಂತರ ಮಧ್ಯಾಹ್ನ 12.30ಕ್ಕೆ ಪ್ರದೋಷಕಾಲದ ಪೂಜೆ, ತ್ರಿಶತಿ ನಾಮರ್ಚನೆ, ಮಹಾಮಂಗಳಾರತಿ ನೆರವೇರಿಸಲಾಯಿತು. ಬಳಿಕ ಅಮ್ಮನವರ ದರ್ಶನಕ್ಕೆ ಬಂದ ಸಹಸ್ರಾರು ಭಕ್ತರಿಗೆ ತೀರ್ಥ ಪ್ರಸಾದ ವಿತರಣೆ ಮಾಡಲಾಯಿತು.

ಕನ್ಯಾ ಕನ್ನಡಿ ಉತ್ಸವ: ಭಾನುವಾರ ರಾತ್ರಿ ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವದ ಅಂಗವಾಗಿ ಕನ್ಯಾ ಕನ್ನಡಿ ಉತ್ಸವ ವಿಜೃಂಭಣೆಯಿಂದ ಜರುಗಿತು.

ಗ್ರಾಮದ ಪ್ರಮುಖ ಬೀದಿಗಳಲ್ಲಿ ಹೆಣ್ಣು ಮಕ್ಕಳು ಉತ್ಸವ ಮೂರ್ತಿ ಹೊತ್ತು ಸಾಗಿದರು. ಮೆರವಣಿಗೆಯಲ್ಲಿ ಪಟ ಕುಣಿತ, ತಮಟೆ ವಾದ್ಯ, ವಾದ್ಯಗೋಷ್ಠಿ ತಂಡ ಭಾಗಿಯಾಗಿತ್ತು. ಪಟಾಕಿ ಸಿಡಿಸಿ ಗ್ರಾಮಸ್ಥರು ಭಕ್ತಿಯ ಪರಕಾಷ್ಠೆ ಮೆರೆದರು.

ಇಂದು ತಂಪು, ಮಡೆ ಪದ್ಧತಿ: ಸೋಮವಾರ ಬೆಳಗ್ಗೆ ಗ್ರಾಮಸ್ಥರು ತಂಪು, ಮಡೆ ಪದ್ಧತಿ ಆಚರಿಸಲಿದ್ದಾರೆ. ನಂತರ ದೇವಸ್ಥಾನದಲ್ಲಿ ವಿಶೇಷ ಪೂಜೆ ನಡೆಯಲಿದೆ. ಸಂಜೆ ಗ್ರಾಮದ ಅರಳಿಕಟ್ಟೆ ಬಳಿ ಕುರುಕ್ಷೇತ್ರ ಪೌರಾಣಿಕ ನಾಟಕ ಪ್ರದರ್ಶನವಾಗಲಿದೆ. ಮಂಗಳವಾರ ವಿವಿಧ ಭಕ್ಷಭೋಜನಗಳ ಸೇವನೆ ಮೂಲಕ ಜಾತ್ರೆಗೆ ತೆರೆ ಬೀಳಲಿದೆ

ನಾಗರತ್ನಮ್ಮ ನಿಧನ



ಮೈಸೂರು, ಫೆ.25- ಮೈಸೂರಿನ ಪಿ.ಎಸ್.ರಾಜರತ್ನಂ ಅವರ ಪತ್ನಿ ಡಾ.ವಿ.ನಾಗರತ್ನಮ್ಮ ಅವರು ಭಾನುವಾರ ಮಧ್ಯಾಹ್ನ ನಿಧನರಾದರು. ಇವರು ಪತಿ, ಪುತ್ರರಾದ ವಿಜಯ್ ರತ್ನಂ, ಗೋಪಾಲ್ ರತ್ನಂ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಚಾಮುಂಡಿಬೆಟ್ಟ ತಪ್ಪಲಿನ ಹರಿಶ್ಚಂದ್ರ ಘಾಟ್‌ನಲ್ಲಿ ಮಂಗಳವಾರ ಬೆಳಗ್ಗೆ 11ಕ್ಕೆ ಅಂತಿಮ ಸಂಸ್ಕಾರ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಸವರಾಜು



ಹೆಚ್.ಡಿ.ಕೋಟೆ ಫೆ.25- ತಾಲೂಕಿನ ಹೀರಹಳ್ಳಿ ಗ್ರಾಮದ ನಿವಾಸಿ ಬಸವರಾಜು(45) ಹೃದಯಘಾತದಿಂದ ಭಾನುವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ಪುಷ್ಪ, ಪುತ್ರ ಪ್ರಜ್ವಲ್, ಪುತ್ರಿ ಪೂರ್ಣಿಮ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಸಂಜೆ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಾಗಮಂಗಲದಲ್ಲಿ ಪ್ರಸಿದ್ಧ ದ್ವಾದಶ ಜ್ಯೋತಿರ್ಲಿಂಗಗಳ ಪುಣ್ಯದರ್ಶನ

ನಾಗಮಂಗಲ, ಫೆ.25– ಭಾರತದ ಇತಿಹಾಸ ಪ್ರಸಿದ್ಧ ದ್ವಾದಶ ಜ್ಯೋತಿರ್ಲಿಂಗಗಳ ಪುಣ್ಯ ದರ್ಶನ ಹಾಗೂ ಆಧ್ಯಾತ್ಮಿಕ ಚಿತ್ರ ಪ್ರದರ್ಶನವನ್ನು ನಾಗಮಂಗಲ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾನಿಲಯವು ಹಮ್ಮಿಕೊಂಡಿದೆ ಎಂದು ಶ್ರೀ ಶೈಲಜಾ ಅಕ್ಕ ಅವರು ತಿಳಿಸಿದರು.

ನಾಗಮಂಗಲ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಶ್ರೀ ಶೈಲಜಾ ಅಕ್ಕ ಅವರು ಮಾಧ್ಯಮದವರೊದಿಗೆ ಮಾತನಾಡುತ್ತಾ 88ನೇ ತ್ರಿಮೂರ್ತಿ ಶಿವ ಜಯಂತಿ ಮಹೋತ್ಸವದ ಪ್ರಯುಕ್ತ ಭಾರತದ ಪ್ರಸಿದ್ಧ ದ್ವಾದಶ ಜ್ಯೋತಿರ್ಲಿಂಗಗಳ ಪುಣ್ಯ ದರ್ಶನ ಮತ್ತು ಆಧ್ಯಾತ್ಮಿಕ ಚಿತ್ರ ಪ್ರದರ್ಶನವನ್ನು ಫೆ.26ರಿಂದ ಮಾರ್ಚ್ 8ರವರೆಗೆ ಆಯೋಜನೆ ಮಾಡಲಾಗಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡಿಸಿಕೊಳ್ಳುವಂತೆ ಕರೆ ನೀಡಿದರು ಹಾಗೂ ಪ್ರವೇಶ ಉಚಿತವಾಗಿರುತ್ತದೆ ಎಂದರು.

ಭಗವಂತನ ಸಂದೇಶವನ್ನು ತಿಳಿಸುವ ಹಾಗೂ ಆಧ್ಯಾತ್ಮಿಕ ಚಿಂತನೆಯಲ್ಲಿ ಮನಸ್ಸಿನ ದೃಡಶಕ್ತಿ ಹಾಗೂ ಮನಸ್ಸಿನ ಸ್ಥಿರತೆಯ ಶಕ್ತಿಯನ್ನು ಸಿಮಿತಗೊಳಿಸುವ ಆಧ್ಯಾತ್ಮಿಕ ಚಿಂತನ ಶಕ್ತಿಯಲ್ಲಿ ಬೆಳೆಸುವ ಮುಖಾಂತರ ಹಾಗೂ ದೈವ ಸ್ವರೂಪ ಶಕ್ತಿಯ ಪ್ರಸಿದ್ಧ ಜ್ಯೋತಿರ್ಲಿಂಗಗಳ ಪರಿಚಯ ಹಾಗೂ ಆಧ್ಯಾತ್ಮಿಕ ಚಿಂತನೆಯನ್ನು ಪ್ರಚಾರಪಡಿಸುವ ಈ ಕಾರ್ಯಕ್ರಮಕ್ಕೆ ಪ್ರಜಾಪಿತ ಬ್ರಹ್ಮಕುಮಾರಿಯ ಕೇಂದ್ರಗಳು 140 ದೇಶಗಳಲ್ಲಿ 10 ಸಾವಿರ ಸೇವಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು ತಾವುಗಳು ಭಾಗವಹಿಸಬೇಕೆಂದು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ದೀಪಕ್ ತಿಳಿಸಿದರು. ಇದೇ ಸಂದರ್ಭದಲ್ಲಿ ಸಿ.ಕುಮಾರ್ ಮತ್ತು ಹೇಮಾ ರವರುಗಳು ಹಾಜರಿದ್ದರು.

ಅಷ್ಟು ಸುಲಭವಾಗಿ ಮಂಡ್ಯ ಬಿಟ್ಟುಕೊಡಲ್ಲ

ನಾನು ಬಿಜೆಪಿ ಅಭ್ಯರ್ಥಿಯಾಗೇ ಸ್ಪರ್ಧಿಸ್ತೀನಿ : ಸಂಸದೆ ಸುಮಲತಾ ವಿಶ್ವಾಸ



ಬೆಂಗಳೂರು, ಫೆ.25– ಮಂಡ್ಯ ಲೋಕಸಭಾ ಕ್ಷೇತ್ರದ ಟಿಕೆಟ್ ಫೈಟ್ ಮತ್ತಷ್ಟು ಜೋರಾಗಿದೆ. ಬಿಜೆಪಿ ಟಿಕೆಟ್‌ಗಾಗಿ ಪಟ್ಟು ಹಿಡಿದಿರುವ ಸಂಸದೆ ಸುಮಲತಾ ಅಂಬರೀಷ್, ನಾನು ಅಷ್ಟು ಸುಲಭವಾಗಿ ಮಂಡ್ಯ ಕ್ಷೇತ್ರವನ್ನು ಬಿಟ್ಟು ಕೊಡುವುದಿಲ್ಲ ಎಂದಿದ್ದಾರೆ. ಬೆಂಗಳೂರಿನ ತಮ್ಮ ನಿವಾಸದಲ್ಲಿ ನಟ ದರ್ಶನ್, ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಸೇರಿದಂತೆ ತಮ್ಮ ಆಪ್ತರ ಸಭೆ ನಡೆಸಿದ ಸುಮಲತಾ, ಮಂಡ್ಯ ಅಂಬರೀಶ್ ನಾಡು, ಅವರು ಮಂಡ್ಯದ ಗಂಡು. ಹಾಗಾಗಿ ನಾನು ಮಂಡ್ಯದಲ್ಲೇ ಸ್ಪರ್ಧೆ ಮಾಡ್ತೀನಿ, ಅದು ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡ್ತೀನಿ ಅಂತ ಸ್ಪಷ್ಟಪಡಿಸಿದ್ದಾರೆ.

ಬೆಂಬಲಿಗರ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸುಮಲತಾ, ನಾನು ಅಷ್ಟು ಸುಲಭವಾಗಿ ಮಂಡ್ಯವನ್ನು ಕಳೆದುಕೊಳ್ಳಲ್ಲ, ಬಿಟ್ಟುಕೊಡುವುದಿಲ್ಲ. ನಾನು ಇವಾಗ ಬಿಜೆಪಿ ಅಧಿಕೃತ ಸದಸ್ಯೆ ಇಲ್ಲದೇ ಇರಬಹುದು, ನಾನೊಬ್ಬಳು ಪಕ್ಷೇತರ ಸಂಸದೆ. ಆದರೆ ಮುಂದಿನ ದಿನಗಳಲ್ಲಿ ನಾನು ಬಿಜೆಪಿ ಸದಸ್ಯೆ ಆಗುತ್ತೇನೆ ಎಂದರು.

ಮಂಡ್ಯ ಜಿಲ್ಲೆಯ ಬೆಂಬಲಿಗರ ಸಭೆ ಕರೆದು ಮಾತಾಡಿದ್ದೇನೆ. ಐದು ವರ್ಷಗಳ ಜರ್ನಿಯ ಬಗ್ಗೆ ಮಾತಾಡಿದ್ದೇವೆ. ನನ್ನ ಕೆಲಸದ ಬಗ್ಗೆ ಮಾತಾಡಿದ್ದೇವೆ. ಒಂದು ಪಾಸಿಟಿವ್ ಚರ್ಚೆ ಆಗಿದೆ. ಯಾವುದೇ ಗೊಂದಲಗಳು ಇಲ್ಲ. ನಾವು ನಿಮ್ಮ ಜೊತೆ ಇದ್ದೇವೆ ಎಂದು ಹೇಳಿದ್ದಾರೆ. ಕಳೆದ ಬಾರಿ ಬಿಜೆಪಿಗೆ ನಾನು ಸಪೋರ್ಟ್ ಕೊಟ್ಟಿದ್ದೇನೆ, ಇದೀಗ ಬಿಜೆಪಿ ಪಕ್ಷಕ್ಕೆ ಪೂರಕವಾದ ವಾತಾವರಣ ಮಂಡ್ಯದಲ್ಲಿದೆ. ಬಹುತೇಕ ಎಲ್ಲರೂ ಬಿಜೆಪಿಯಿಂದ ಸ್ಪರ್ಧೆ ಮಾಡಬೇಕು ಎಂದು ಹೇಳುತ್ತಿದ್ದಾರೆ. ಪಕ್ಷೇತರರಾಗಿ ಸ್ಪರ್ಧೆ ಬಗ್ಗೆ ಯಾವುದೇ ಯೋಚನೆಯಂತೂ ಇದುವರೆಗೂ ಮಾಡಿಲ್ಲ ಅಂತ ಸುಮಲತಾ ಹೇಳಿದರು.

ನನಗೆ ಮೊದಲ ಆದ್ಯತೆ ಕೊಡುವ ವಿಶ್ವಾಸ: ಈಗ ಇರುವ ಸನ್ನಿವೇಶದಲ್ಲಿ ಫಸ್ಟ್ ಆದ್ಯತೆ ನನಗೆ ಕೊಡ್ತಾರೆ ಎಂಬ ವಿಶ್ವಾಸ ಇದೆ. ಕುಮಾರಸ್ವಾಮಿ ಸ್ಪರ್ಧೆ ಮಾಡ್ತೀನಿ ಎಂದು ಎಲ್ಲಿಯೂ ಹೇಳಿಲ್ಲ. ಜೆಡಿಎಸ್‌ನವರದ್ದು ಒತ್ತಡ ಇರಬಹುದು. ಆದರೆ ಅಂತಿಮವಾಗಿ ಬಿಜೆಪಿ ಹೈಕಮಾಂಡ್ ತೀರ್ಮಾನ ಮಾಡ್ತಾರೆ. ಬಿಜೆಪಿ ವರಿಷ್ಠರು ಸೂಕ್ತ ಸಮಯದಲ್ಲಿ ಘೋಷಣೆ ಮಾಡ್ತಾರೆ, ಅದು ನಮಗೆ ಪಾಸಿಟಿವ್ ಆಗುತ್ತದೆ ಎಂಬ ವಿಶ್ವಾಸದಲ್ಲಿದ್ದೇನೆ ಅಂತ ಸುಮಲತಾ ಹೇಳಿದರು.

ಮಂಡ್ಯದಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಎಂದು ಬೆಂಬಲಿಗರು ಹೇಳಿದ್ದಾರೆ. ಜಿಲ್ಲೆಯಲ್ಲಿ ಬಿಜೆಪಿ ಬಲಪಡಿಸಬೇಕೆಂಬುದು ನಾಯಕರ ಒಲವು ಇದೆ ಯಾವುದೇ ಕಾರಣಕ್ಕೆ ಮಂಡ್ಯ ಬಿಡಬಾರದೆಂದು ಬೆಂಬಲಿಗರು ಹೇಳಿದ್ದಾರೆ. ಇಂತಹದ್ದೇ ಪಕ್ಷ ಅಂತೇನಿಲ್ಲ ಬಿಟ್ಟಾರೆ ಮಂಡ್ಯ ಬಿಡಬಾರದೆಂಬ ಒತ್ತಾಯ ಇದೆ. ಈ ಬಾರಿ ನನ್ನ ಪರ ಕೆಲಸ ಮಾಡಲು ದರ್ಶನ್ ಪುಟ್ಟಣ್ಣಯ್ಯ ಕೇಳುತ್ತೇನೆ. ಬಿಜೆಪಿಯ ಮಂಡ್ಯ ಉಸ್ತುವಾರಿಕೊಂಡ ಟಿಕೆಟ್‌ನಲ್ಲಿ ನನಗೆ ಮೊದಲ ಆದ್ಯತೆ. ಸೂಕ್ತ ಸಮಯದಲ್ಲಿ ಪಕ್ಷದ ನಾಯಕರು ಅಭ್ಯರ್ಥಿ ಘೋಷಣೆ ಮಾಡುತ್ತಾರೆ. ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವ ಯೋಚನೆ ಮಾಡಿಲ್ಲ ಎಂದು ಹೇಳಿದ್ದಾರೆ.

ನಾನಾಗಲಿ, ನನ್ನ ಪುತ್ರನಾಗಲಿ ಸ್ಪರ್ಧಿಸಲ್ಲ ಎಂದು ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ. ಸ್ಪರ್ಧೆ ಮಾಡಬೇಕೆಂದು ಅಂತಾ ಕುಮಾರಸ್ವಾಮಿ ಎಲ್ಲೂ ಹೇಳಿಲ್ಲ. ಸ್ಪರ್ಧೆ ಬಗ್ಗೆ ನಿರ್ಧಾರಕ್ಕೆಗೊಳ್ಳಲು ತಿಂಗಳು ಮಾತ್ರ ಸಮಯವಿದೆ. ಸೂಕ್ತ ಸಮಯದಲ್ಲಿ ವರಿಷ್ಠರು ನಿರ್ಧಾರ ಮಾಡುತ್ತಾರೆಂಬ ವಿಶ್ವಾಸವಿದೆ ಎಂದಿದ್ದಾರೆ. ಮಂಡ್ಯ ಟಿಕೆಟ್ ಜೆಡಿಎಸ್ ಪಾಲಾದರೆ ಮುಂದೇನು ಎಂಬ ಯೋಚನೆಯನ್ನೂ ನಾನು ಮಾಡಿಲ್ಲ ನಾನು ಪಕ್ಷ ಅಲ್ಲ. ನಾನು ಸ್ವತಂತ್ರ ವ್ಯಕ್ತಿ. ಜೆಡಿಎಸ್ ಅವರದ್ದು ಪಕ್ಷ ಆಮೇಲೆ ಮಂಡ್ಯ ಬಗ್ಗೆ ಮಾತ್ರ ಯೋಚನೆ ಮಾಡುತ್ತಿಲ್ಲ ಇಡೀ ರಾಜ್ಯದ ಬಗ್ಗೆ ಅವರು ಯೋಚನೆ ಮಾಡುತ್ತಾರೆ. ಟಿಕೆಟ್ ಬಗ್ಗೆ ಎಲ್ಲಾ ಕಡೆ ಇನ್ನೂ ಅಂತಿಮ ನಿರ್ಧಾರ ಆಗಿಲ್ಲ ಪ್ರಾಥಮಿಕ ಚರ್ಚೆ ಆಗಿದೆ ಅಷ್ಟೇ ಎಂದರು.

ಯಾವ ರೀತಿ ಪ್ರಚಾರ ಹೋರಾಟ ಎಂಬ ಕುರಿತು ಸಭೆಯಲ್ಲಿ ಚರ್ಚೆ ಮಾಡಲಾಗಿದೆ. ರಾಜಕೀಯಕ್ಕೆ ಬಂದಿದ್ದು ಮಂಡ್ಯ ಜನರ ವಿಶ್ವಾಸ ಗಳಿಸುವುದಕ್ಕೋಸ್ಕರ ಅಲ್ಲ ಅಂಬರೀಶ್ ಅಂದರೆ ಮಂಡ್ಯ ಅಂತಾ ಇಂಡಿಯಾದಲ್ಲೇ ಗುರುತಿಸಿಕೊಂಡಿದ್ದಾರೆ. ಇಂದು ಇಲ್ಲಿ ಎಲ್ಲಾ ಪಕ್ಷದವರೂ ಇದ್ದಾರೆ ಎಂದಿದ್ದಾರೆ.

ಚಿನಕುರಳಿ ಡೇರಿ ಜೆಡಿಎಸ್ ತೆಕ್ಕೆಗೆ: 12 ಸ್ಥಾನಗಳಲ್ಲಿ ಗೆಲುವು

ರೈತಸಂಘ- ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳಿಗೆ ಮುಖಭಂಗ



ಚಿನಕುರಳಿ ಹಾಲು ಉತ್ಪಾದಕರ ಸಹಕಾರ ಸಂಘದ ನಿರ್ದೇಶಕ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಆಯ್ಕೆಯಾದ ಎಲ್ಲಾ ಜೆ.ಡಿ.ಎಸ್.ಬೆಂಬಲಿತ ನಿರ್ದೇಶಕರನ್ನು ಹಾಲು ಉತ್ಪಾದಕರು, ಮುಖಂಡರು, ಗ್ರಾಮಸ್ಥರು ಅಭಿನಂದಿಸಿದರು.

ಚಿನಕುರಳಿ, ಫೆ.25– ಚಿನಕುರಳಿ ಹಾಲು ಉತ್ಪಾದಕರ ಸಹಕಾರ ಸಂಘದ 12 ನಿರ್ದೇಶಕ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ 12 ಸ್ಥಾನದಲ್ಲೂ ರೈತಸಂಘ–ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳ ವಿರುದ್ಧ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ಭರ್ಜರಿ ಗೆಲುವು ಸಾಧಿಸುವ ಮೂಲಕ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

12 ಸ್ಥಾನಗಳ ಪೈಕಿ ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಹೇಮಪುಟ್ಟಯ್ಯ ಅವಿರೋಧವಾಗಿ ಆಯ್ಕೆಯಾಗಿದ್ದರು. ಉಳಿದ 11 ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ 11ಕ್ಷೇತ್ರದಲ್ಲೂ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ರೈತ ಸಂಘ–ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳ ವಿರುದ್ಧ ಭರ್ಜರಿ ಗೆಲುವು ಸಾಧಿಸುವ ಮೂಲಕ ನಿರ್ದೇಶಕರಾಗಿ ಆಯ್ಕೆಯಾದರು.

ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾದ ಸಾಮಾನ್ಯ ವರ್ಗದಿಂದ ಸಿ.ಶಿವಕುಮಾರ್–311, ಸಿ.ಎಂ.ರಮೇಶ್–285, ಸಿ.ಎಸ್.ಲೋಕೇಶ್–284, ಸಿ.ಎ.ಮಂಜುನಾಥ್–283, ಕೆಂಪೇಗೌಡ–282, ವರದರಾಜು–272, ಸಿ.ಆರ್.ರಮೇಶ್–268, ಮಹಿಳಾ ಮೀಸಲು ಕ್ಷೇತ್ರದಿಂದ ವರಲಕ್ಷ್ಮಿಸೋಮಶೇಖರ್– 275, ಯಶೋಧಮ್ಮ ಲೋಕೇಶ್–264, ಬಿ ಮೀಸಲು ಕ್ಷೇತ್ರದಿಂದ ಲಿಂಗಾಪುರ ಯೋಗೇಂದ್ರ–255, ಎ ಮೀಸಲು ಕ್ಷೇತ್ರದಿಂದ ನಾರಾಯಣಚಾರಿ–273, ಅವರು ಭರ್ಜರಿ ಗೆಲುವು ಸಾಧಿಸಿದ್ದಾರೆ.

ರೈತಸಂಘ–ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳಾದ ಸಿ.ಕೆ.ಪುಟ್ಟೇಗೌಡ–121, ಸಿ.ಎಲ್.ರಾಜು–94, ಶೀಲಾಕುಮಾರ್–78, ಲತಾವಸಂತ–110, ಪೂರ್ಣಿಮಾ ನಾರಾಯಣ್–96, ಲಲಿತ ಅಶೋಕ್–71, ಭಾರತಿ ಕುಮಾರ್–96 ಮತಗಳನ್ನು ಪಡೆದು ಪರಾಭವಗೊಂಡಿದ್ದಾರೆ ಎಂದು ಚುನಾವಣಾ ಅಧಿಕಾರಿ ನಿರ್ಮಲ ಅವರು ಘೋಷಿಸಿದರು.

ನಿರ್ದೇಶಕ ಸಿ.ಶಿವಕುಮಾರ್ ಮಾತನಾಡಿ, ಚಿನಕುರಳಿ ಹಾಲು ಉತ್ಪಾದಕರ ಸಹಕಾರ ಸಂಘದ ನಿರ್ದೇಶಕ ಸ್ಥಾನಕ್ಕೆ ನಡೆದ ಚುನಾವಣೆ ಯಲ್ಲಿ ಚಿನಕುರಳಿ ಹಾಗೂ ಲಿಂಗಾಪುರ ಗ್ರಾಮದ ಉತ್ಪಾದಕರು ಶಾಸಕ ಸಿ.ಎಸ್.ಪುಟ್ಟರಾಜು ಆಡಳಿತವನ್ನು ಮೆಚ್ಚಿ 12 ಸ್ಥಾನಕ್ಕೂ ಜೆಡಿಎಸ್ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಮೂಲಕ ಬೆಂಬಲ ಸೂಚಿಸಿದ್ದಾರೆ. ಮುಂದಿನ ದಿನಗಳಲ್ಲಿ ಎಲ್ಲಾ ನಿರ್ದೇಶಕರ ಹಾಗೂ ನಮ್ಮ ನಾಯಕ ಸಿ.ಎಸ್. ಪುಟ್ಟರಾಜು ಸಹಕಾರಪಡೆದು ಸಂಘದ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದು ಭರವಸೆ ನೀಡಿದರು.

ನೂತನ ನಿರ್ದೇಶಕರನ್ನು ಮುಖಂಡರು, ಬೆಂಬಲಿಗರು ಅಭಿನಂದಿಸಿದರು. ಇದೇ ವೇಳೆ ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ತಾಪಂ ಮಾಜಿ ಸದಸ್ಯ ಸಿ.ಎಸ್. ಗೋಪಾಲಗೌಡ ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಸಿ.ಪ್ರಕಾಶ್, ಟಿಎಪಿಸಿಎಂಎಸ್ ನಿರ್ದೇಶಕ ರಾಮಕೃಷ್ಣೇಗೌಡ, ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಸಿ.ಎಸ್.ಮಂಜುನಾಥ್, ಸಿ.ಎಂ.ಕಾಳೇಗೌಡ, ಕೆಎಸ್.ಜಯ ರಾಮು, ಗ್ರಾಪಂ ಮಾಜಿ ಅಧ್ಯಕ್ಷ ಪಾಪಣ್ಣ, ಪಾಷ, ಸದಸ್ಯರು, ವಿಎಸ್‌ಎಸ್‌ಎನ್‌ಬಿ ನಿರ್ದೇಶಕರು, ಗ್ರಾಮಸ್ಥರು ಹಾಜರಿದ್ದರು.

ಗವಿಮಠದ ಶ್ರೀ ಸ್ವತಂತ್ರ ಸಿದ್ಧಲಿಂಗೇಶ್ವರ ಸ್ವಾಮಿಯ ವೈಭವದ ರಥೋತ್ಸವ



ಕಾಪನಹಳ್ಳಿಯ ಗವಿಮಠದ ಶ್ರೀ ಸ್ವತಂತ್ರ ಸಿದ್ಧಲಿಂಗೇಶ್ವರ ಸ್ವಾಮಿಯವರ ಮಹಾ ರಥೋತ್ಸವವು ಗವಿಮಠದ ಗಜರಾಜಗಿರಿಯ ತಪ್ಪಲಿನಲ್ಲಿ ವಿಜೃಂಭಣೆಯಿಂದ ನಡೆಯಿತು.

ಕೆ.ಆರ್.ಪೇಟೆ, ಫೆ.25– ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಮನೆದೇವರು ಕೆ.ಆರ್.ಪೇಟೆ ತಾಲೂಕಿನ ಕಾಪನಹಳ್ಳಿಯ ಗವಿಮಠದ ಶ್ರೀ ಸ್ವತಂತ್ರ ಸಿದ್ಧಲಿಂಗೇಶ್ವರ ಸ್ವಾಮಿಯ ಮಹಾ ರಥೋತ್ಸವವು ಗಜರಾಜಗಿರಿಯ ತಪ್ಪಲಿನಲ್ಲಿ ವಿಜೃಂಭಣೆಯಿಂದ ನಡೆಯಿತು.

ಗವಿಮಠದ ಪೀಠಾಧಿಪತಿಗಳಾದ ಶ್ರೀ ಸ್ವತಂತ್ರ ಚನ್ನವೀರಯ್ಯ ಸ್ವಾಮೀಜಿ, ಕೆಂಗೇರಿಯ ಏಕಬಿಲ್ವ ಬಂಡೆ ಮಠ ಕ್ಷೇತ್ರದ ಶ್ರೀಗಳಾದ ಶ್ರೀ ಸಚ್ಚಿದಾನಂದ ಮಹಾಸ್ವಾಮೀಜಿ, ಸಮಾಜ ಸೇವಕರಾದ ಆರ್.ಟಿ.ಓ ಮಲ್ಲಿಕಾರ್ಜುನ್, ಮಾಜಿ ಮುಖ್ಯಮಂತ್ರಿಗಳ ವಿಶೇಷಾಧಿಕಾರಿ ಅರವಿಂದ್ ಮತ್ತಿತರ ಗಣ್ಯರು ಶ್ರೀ ಸ್ವತಂತ್ರ ಸಿದ್ಧಲಿಂಗೇಶ್ವರರು ಜೀವಂತವಾಗಿ ಸಮಾಧಿಯಾಗಿರುವ ಗದ್ದುಗೆಗೆ ವಿಶೇಷ ಪೂಜೆ ಸಲ್ಲಿಸಿ ಶ್ರೀಗಳ ಪ್ರತಿರೂಪದ ಉತ್ಸವಮೂರ್ತಿಯನ್ನು ಶ್ರೀರಥದಲ್ಲಿರಿಸಿ ಬಗೆ ಬಗೆಯ ಪುಷ್ಪಗಳಿಂದ ವಿಶೇಷವಾಗಿ ಅಲಂಕರಿಸಿದ್ದ ಶ್ರೀ ರಥಕ್ಕೆ ಸಾಂಪ್ರದಾಯಿಕ ಪೂಜೆಯನ್ನು ಸಲ್ಲಿಸಿ ರಥೋತ್ಸವ ಮತ್ತು ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಸಮಾಜ ಸೇವಕ ಆರ್.ಟಿ.ಓ ಮಲ್ಲಿಕಾರ್ಜುನ್, ತಾಲೂಕಿನ ಪ್ರಥಮ ವಚನ ಸಾಹಿತಿಗಳು, ಪವಾಡ ಪುರುಷರಾದ ಶ್ರೀ ಸ್ವತಂತ್ರ ಸಿದ್ಧಲಿಂಗೇಶ್ವರರು ಜೀವಂತವಾಗಿ ಸಮಾಧಿಯಾಗಿರುವ ಗವಿಮಠ ಶ್ರೀ ಕ್ಷೇತ್ರವು ಪವಿತ್ರ ಶರಣ ಕ್ಷೇತ್ರವಾಗಿದೆ. ಶ್ರೀ ಮೈಸೂರು ಸಂಸ್ಥಾನದ ರಾಜ ಹೈದರಾಲಿಯು ನಾಡಿನ ಪರ್ಯಟನೆ ಮಾಡುವಾಗ ಕಾಪನಹಳ್ಳಿ ಗವಿ ಮಠ ಶ್ರೀ ಸ್ವತಂತ್ರ ಸಿದ್ಧಲಿಂಗೇಶ್ವರರ ಕ್ಷೇತ್ರದ ಮಾರ್ಗವಾಗಿ ಹೋಗುವಾಗ ಕುದುರೆ ಕಣ್ಣು ಕಾಣದಂತಾದಾಗ ಹೈದರಾಲಿಯು ಸ್ವತಂತ್ರ ಸಿದ್ಧಲಿಂಗೇಶ್ವರರಿಗೆ 900 ಎಕರೆ ಭೂಮಿ, ಒಡವೆಗಳನ್ನು ದಾನವಾಗಿ ನೀಡಿ ಹರಕೆ ಒಪ್ಪಿಸಿದಾಗ ಕುದುರೆಗೆ ಕಣ್ಣು ಬಂದಮತೆ ಎಂಬ ಪವಾಡ ತಾಲೂಕಿನಾದ್ಯಂತ ಪ್ರಚಲಿತದಲ್ಲಿದೆ ಎಂದರು.

ರಥೋತ್ಸವ ಮತ್ತು ಜಾತ್ರಾ ಮಹೋತ್ಸವದಲ್ಲಿ ಶಾಸಕ ಹೆಚ್.ಟಿ.ಮಂಜು, ತಾಲೂಕು ಟಿಎಪಿಸಿಎಂಎಸ್ ಮಾಜಿ ಉಪಾಧ್ಯಕ್ಷ ಬಿ.ಎ. ಸುರೇಶ್, ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಘಟಕದ ಅಧ್ಯಕ್ಷ ವಿ.ಎಸ್. ಧನಂಜಯಕುಮಾರ್, ಉದ್ಯಮಿಗಳಾದ ಮೈಸೂರು ಹರ್ಷ, ತಾಲೂಕು ವೀರಶೈವ ಮಹಾಸಭಾ ಮಾಜಿ ಅಧ್ಯಕ್ಷ ತೋಟಪ್ಪಶೆಟ್ಟಿ, ಬ್ಯಾಂಕ್ ಪರಮೇಶ್, ಮೆಡಿಕಲ್ ಶೈಲೇಂದ್ರ, ಉಪನ್ಯಾಸಕ ಎಸ್.ಚಂದ್ರಶೇಖರ್, ರಾಧಾ ಚಂದ್ರಶೇಖರ್, ನಾಟನಹಳ್ಳಿ ಕುಳ್ಳೇಗೌಡರ ನಾಗೇಶ್, ವಿ.ಮಣ್ಣೇಶ್, ದೊಡ್ಡಹಟ್ಟಿ ನರಸಿಂಹ, ವಿಠಲಾಪುರ ವಿ.ಡಿ.ಮೋಹನ್, ವಿಠಲಾಪುರ ಗ್ರಾ.ಪಂ ಅಧ್ಯಕ್ಷ ಕುಮಾರ್, ಮಾಜಿ ಅಧ್ಯಕ್ಷ ಕಾಪನಹಳ್ಳಿ ಹರೀಶ್, ಪಿಡಿಓ ಹೆಚ್.ಎಸ್.ರವಿಕುಮಾರ್ ಹಾಗೂ ಭಕ್ತಾದಿಗಳು ರಥೋತ್ಸವ, ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿದ್ದರು.

ಅನಾಥಾಲಯದಲ್ಲಿ ತಾತಯ್ಯ ಸ್ಮಾರಕ ಪ್ರಥಮ ಉಪನ್ಯಾಸ

ಚಂದ್ರಯಾನ–2ರಲ್ಲಿ ಕಲಿತ ಪಾಠಗಳೇ ಚಂದ್ರಯಾನ–3ರ ಯಶಸ್ಸಿಗೆ ಮೆಟ್ಟಿಲಾದವು

ಇಸ್ರೋ ಹಿರಿಯ ವಿಜ್ಞಾನಿ ನಂದಿನಿ ಹರಿನಾಥ್ ವಿವರಣೆ



ಮೈಸೂರಿನ ಅನಾಥಾಲಯ ಆವರಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ತಾತಯ್ಯ ಸ್ಮಾರಕ ಉಪನ್ಯಾಸ ಮಾಲಿಕೆ–2024ರ ಮೊದಲ ಉಪನ್ಯಾಸ ಕಾರ್ಯಕ್ರಮದಲ್ಲಿ ಇಸ್ರೋ ಹಿರಿಯ ವಿಜ್ಞಾನಿ ನಂದಿನಿ ಹರಿನಾಥ್ ಮತ್ತು ಅವರ ಪತಿಯೂ ಆದ ಇಸ್ರೋ ಹಿರಿಯ ವಿಜ್ಞಾನಿ ಎಂ.ಹರಿನಾಥ್ ಅವರನ್ನು ಸನ್ಮಾನಿಸಲಾಯಿತು. ಅನಾಥಾಲಯದ ಸದಸ್ಯರಾದ ಡಾ.ಎನ್.ಸುರೇಶ್, ನಾಗಮಣಿ, ಉಪಾಧ್ಯಕ್ಷ ಎನ್.ವಿ.ದಿನೇಶ್, ಅಧ್ಯಕ್ಷ ಸಿ.ವಿಗೋಪಿನಾಥ್, ಸದಸ್ಯರಾದ ಡಾ.ಎಸ್.ಮುರುಳಿ, ಡಾ.ಸತ್ಯನಾರಾಯಣ, ಜಂಟಿ ಕಾರ್ಯದರ್ಶಿ ವೆಂಕಟೇಶ್ ಪದಕಿ, ಸದಸ್ಯ ಮಂಜುನಾಥ್ ಶ್ರೀವತ್ಸ, ಕಾರ್ಯದರ್ಶಿ ಹೆಚ್.ಅಶ್ವತ್ಥನಾರಾಯಣ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಫೆ.25(ಪಿಎಂ)– ಭಾರತೀಯ ಬಾಹ್ಯಾಕಾಶ ಸಂಸ್ಥೆಯ (ಇಸ್ರೋ) ಮಹಾತ್ವಾಕಾಂಕ್ಷೆಯ ಚಂದ್ರಯಾನ–3 ಯೋಜನೆ ಯಶಸ್ಸಿಗೆ ಚಂದ್ರಯಾನ–2ರಲ್ಲಿ ಕಲಿತ ಪಾಠಗಳೇ ಮೆಟ್ಟಿಲಾದವು ಎಂದು ಬೆಂಗಳೂರಿನ ಇಸ್ರೋ ಟೆಲಿಮೆಟ್ರಿ, ಟ್ರ್ಯಾಕಿಂಗ್ ಕಮಾಂಡ್ ನೆಟ್‌ವರ್ಕ್ ಸೆಂಟರ್‌ನ ಬಾಹ್ಯಾಕಾಶ ನೌಕೆ ಕಾರ್ಯಾಚರಣೆ ಘಟಕದ ಉಪ ನಿರ್ದೇಶಕರೂ ಆದ ಹಿರಿಯ ವಿಜ್ಞಾನಿ ನಂದಿನಿ ಹರಿನಾಥ್ ಹೇಳಿದರು.

ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಅನಾಥಾಲಯ ಆವರಣದಲ್ಲಿ ಅನಾಥಾಲಯದ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ತಾತಯ್ಯ ಸ್ಮಾರಕ ಉಪನ್ಯಾಸ ಮಾಲಿಕೆ–2024ರ ಮೊದಲ ಉಪನ್ಯಾಸದಲ್ಲಿ 'ಚಂದ್ರಯಾನ–3 ; ಒಂದು ಒಳನೋಟ' ಕುರಿತು ಅವರು ಉಪನ್ಯಾಸ ನೀಡಿದರು.

ಈ ಯೋಜನೆ ಸಾವಿರಾರು ಕೋಟಿ ಮೌಲ್ಯದ ಯೋಜನೆ ಮಾತ್ರವಲ್ಲದೆ, ದೇಶದ ಪ್ರತಿಷ್ಠೆಯ ವಿಷಯವಾದ್ದರಿಂದ ಇಸ್ರೋದ ಪ್ರತಿ ವಿಜ್ಞಾನಿಗಳ ಮೇಲೆ ದೊಡ್ಡ ಜವಾಬ್ದಾರಿ ಇತ್ತು ಚಂದ್ರಯಾನ–2ರ ತಪ್ಪುಗಳು 3ರ ಯೋಜನೆಯಲ್ಲಿ ಮರುಕಳಿದಂತೆ ಎಚ್ಚರ ವಹಿಸಲಾಯಿತು. ಜೊತೆಗೆ ಚಂದ್ರಯಾನ–2ರಲ್ಲಿ ಅತಿ ಹೆಚ್ಚು ರೆಸಲ್ಯೂಷನ್ ಕ್ಯಾಮರಾದಲ್ಲಿ ತೆಗೆದಿದ್ದ ಸಾವಿರಾರು ಚಿತ್ರಗಳೂ ಯಶಸ್ಸಿಗೆ ನೆರವಾದವು ಎಂದು ವಿವರಿಸಿದರು.

ಪರಿಶ್ರಮ ಹಾಗೂ ಬುದ್ಧಿವಂತಿಕೆಯೇ ಇಸ್ರೋ ಯೋಜನೆಗಳ ಯಶಸ್ಸಿನ ಹಿಂದಿರುವ ಗುಟ್ಟು. ಮಂಗಳ ಗ್ರಹಕ್ಕೆ ನೇರವಾಗಿ ಹೋಗುವ ಸಾಮರ್ಥ್ಯದ ರಾಕೆಟ್‌ಗಳು ಅಮೆರಿಕದ ನಾಸಾದಲ್ಲಿ ಮಾತ್ರ ಇವೆ. ಆದರೆ ಭಾರತದ ಇಸ್ರೋ ಮಂಗಳಯಾನದಲ್ಲಿ ಬುದ್ಧಿವಂತಿಕೆ ಉಪಯೋಗಿಸಿತು. ಉಪಗ್ರಹವು ಭೂಕಕ್ಷೆಯನ್ನು ಸುತ್ತುತ್ತ ಮಂಗಳ ಗ್ರಹವು ಹತ್ತಿರ ಬಂದಾಗ ಶಕ್ತಿ ಬಳಸಿಕೊಂಡು ಕಕ್ಷೆಗೆ ಸೇರಿತು. 500 ಕಿ.ಮೀ. ದೂರದ ಭೂ ಕಕ್ಷೆಗೆ ಹೋಗುತ್ತಿದ್ದ ನಮ್ಮ ಉಪಗ್ರಹಗಳು ಕ್ರಮೇಣ 36 ಸಾವಿರ ಕಿ.ಮೀ.ವರೆಗೆ ಹೋದವು. ನಂತರ ಮಂಗಳನ ಕಕ್ಷೆಗೂ ಹೋಗಿವೆ ಎಂದು ಹೇಳಿದರು.

ಇದಕ್ಕೂ ಮುನ್ನ ಪ್ರಸ್ತಾವಿಕವಾಗಿ ಮಾತನಾಡಿದ ಭಾರತ ಸರ್ಕಾರದ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿಯೂ ಆದ ಅನಾಥಾಲಯದ ಅಧ್ಯಕ್ಷ ಸಿ.ವಿ.ಗೋಪಿನಾಥ್, ಎಂ.ವೆಂಕಟಕೃಷ್ಣಯ್ಯ (ತಾತಯ್ಯ) ಅವರು ಈ ಅನಾಥಾಲಯ ಸ್ಥಾಪನೆ ಮಾಡಿದರು. ವಿವಿಧ ವಿದ್ಯಾಸಂಸ್ಥೆಗಳು ಕಟ್ಟಿ ಬೆಳೆಸಿದರು. ಮಹಿಳಾ ಸಬಲೀಕರಣಕ್ಕೆ ಶ್ರಮಿಸಿದರು. ತಾತಯ್ಯನವರ ಅನಾಥಾಲಯ 130 ವರ್ಷಗಳಿಗೂ ಅಧಿಕವಾದ ಇತಿಹಾಸ ಹೊಂದಿದೆ. ಮಕ್ಕಳು ಎಂ.ವೆಂಕಟಕೃಷ್ಣಯ್ಯನವರನ್ನು ಪ್ರೀತಿಯಿಂದ ತಾತಯ್ಯ ಎಂದು ಕರೆಯುತ್ತಿದ್ದರು. ಮಕ್ಕಳ ಸರ್ವಾಂಗೀಣ ಮನೋವಿಕಾಸಕ್ಕಾಗಿ 2023ರಿಂದ ತಾತಯ್ಯ ಸ್ಮಾರಕ ಉಪನ್ಯಾಸ ಮಾಲಿಕೆ ಪ್ರಾರಂಭ ಮಾಡಲಾಯಿತು. ಇಂದಿನ ಉಪನ್ಯಾಸದಲ್ಲಿ ಅನಾಥಾಲಯದ ವಿದ್ಯಾರ್ಥಿಗಳು ಸೇರಿದಂತೆ ಹೊರಗಿನ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಪಾಲ್ಗೊಂಡಿದ್ದಾರೆ ಎಂದು ತಿಳಿಸಿದರು.

ಇದೇ ವೇಳೆ ನಂದಿನಿ ಹರಿನಾಥ್ ಮತ್ತು ಅವರ ಪತಿಯವರೂ ಆದ ಇಸ್ರೋ ಹಿರಿಯ ವಿಜ್ಞಾನಿ ಎಂ.ಹರಿನಾಥ್ ಅವರನ್ನು ಸನ್ಮಾನಿಸಲಾಯಿತು. ಅನಾಥಾಲಯದ ವಿದ್ಯಾರ್ಥಿಗಳು ಸೇರಿದಂತೆ ವಿವಿಧ ಶಾಲಾ–ಕಾಲೇಜು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಮಹಾರಾಜ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅಧ್ಯಕ್ಷರೂ ಆದ ಅನಾಥಾಲಯದ ಸದಸ್ಯ ಡಾ.ಎಸ್. ಮುರಳಿ, ಅನಾಥಾಲಯದ ಉಪಾಧ್ಯಕ್ಷ ಎನ್.ವಿ. ದಿನೇಶ್, ಕಾರ್ಯದರ್ಶಿ ಹೆಚ್.ಅಶ್ವತ್ಥನಾರಾಯಣ ಮತ್ತಿತರರು ಹಾಜರಿದ್ದರು.

ಪ್ರೀತಿ ಹಂಚಿದಾಗಲೇ ಜೀವನ ಸಾರ್ಥಕ

ಅಭಿನಂದನೆ ಸ್ವೀಕರಿಸಿ ಖ್ಯಾತ ಹೃದಯ ತಜ್ಞ ಡಾ.ಸಿ.ಎನ್.ಮಂಜುನಾಥ್ ಅಭಿಪ್ರಾಯ



ಹೃದಯ ತಜ್ಞ ಡಾ.ಸಿ.ಎನ್.ಮಂಜುನಾಥ್ ಅವರನ್ನು ಅಭಿನಂದಿಸುತ್ತಿರುವುದು.

'ಜೀವನದಲ್ಲಿ ಕಣ್ಣೀರು ಮತ್ತು ಬೆವರಿಗೆ ಹೆಚ್ಚಿನ ಮಹತ್ವವಿದೆ. ಕಣ್ಣೀರಿನಲ್ಲಿ ನೋವು ಇರಲಿದೆ. ಬೆವರಿನಲ್ಲಿ ಶ್ರಮ ಇರಲಿದೆ. ಈ ಹಿಂದೆ ಅವಿಭಕ್ತ ಕುಟುಂಬ ಇದ್ದವು. ಎಲ್ಲರೂ ಒಗ್ಗೂಡಿ ಬದುಕುತ್ತಿದ್ದರು. ಒಬ್ಬರ ಕಷ್ಟವನ್ನು ಮತ್ತೊಬ್ಬರು ಅರಿಯುತ್ತಿದ್ದರು. ಆದರೆ ಇದೀಗ ಗಂಡ ಹೆಂಡತಿ ಜೊತೆಯಾಗಿ ಬದುಕುವುದೇ ಅವಿಭಕ್ತ ಕುಟುಂಬವಾಗಿದೆ. ಗ್ರಾಮೀಣ ಜನತೆ ನಗರ ಪ್ರದೇಶದತ್ತ ವಲಸೆ ಹೋಗುತ್ತಿದ್ದಾರೆ. ನಗರ ಪ್ರದೇಶದ ವಾಸಿಗಳಿಗೆ ಕಾಯಿಲೆ ಹೆಚ್ಚು ಹಳ್ಳಿಯಲ್ಲಿ ವಾಸಿಸಿದರೆ ಆರೋಗ್ಯಯುತವಾಗಿ ಬದುಕಬಹುದು. ಸಣ್ಣ–ಸಣ್ಣ ಸಂಬಳಕ್ಕೆ ನಗರಕ್ಕೆ ಹೋಗಬೇಡಿ'.

– ಡಾ.ಸಿ.ಎನ್.ಮಂಜುನಾಥ್

ಮಂಡ್ಯ, ಫೆ.25– ಜೀವನದಲ್ಲಿ ಪ್ರತಿಯೊಬ್ಬರೂ ಮತ್ತೊಬ್ಬರ ಹೃದಯ ಗೆಲ್ಲಬೇಕು. ದ್ವೇಷ, ಅಸೂಯೆ ತೊರೆದು ಪ್ರೀತಿ ಹಂಚಿದಾಗಲೇ ಜೀವನ ಸಾರ್ಥಕ ಎಂದು ಜಯದೇವ ಹೃದ್ರೋಗ ಸಂಸ್ಥೆಯ ನಿವೃತ್ತ ನಿರ್ದೇಶಕ ಹಾಗೂ ಹೃದಯ ತಜ್ಞ ಡಾ.ಸಿ.ಎನ್. ಮಂಜುನಾಥ್ ಅಭಿಪ್ರಾಯಪಟ್ಟರು.

ನಗರದ ರೈತ ಸಭಾಂಗಣದ ಆವರಣದಲ್ಲಿ ಅಖಿಲ ಕರ್ನಾಟಕ ಒಕ್ಕಲಿಗರ ಸಂಘ ಹಾಗೂ ಒಕ್ಕಲಿಗರ ಸೇವಾ ಟ್ರಸ್ಟ್ ಸಹಯೋಗದಲ್ಲಿ ನಡೆದ ಆದಿಚುಂಚನಗಿರಿ ಮಠದ ಡಾ.ಬಾಲಗಂಗಾಧರ ನಾಥಸ್ವಾಮಿ 79ನೇ ಜನ್ಮ ದಿನೋತ್ಸವ, ಪಟ್ಟಾಭಿಷೇಕದ ಸುವರ್ಣ ಮಹೋತ್ಸವ, ಡಾ.ನಿರ್ಮಲಾನಂದನಾಥ ಸ್ವಾಮೀಜಿಯವರ ಪಟ್ಟಾಭಿಷೇಕದ ದಶಮಾನೋತ್ಸವ ಹಾಗೂ ಪದ್ಮಶ್ರೀ ಪುರಸ್ಕೃತ ಡಾ.ಸಿ.ಎನ್.ಮಂಜುನಾಥ್ ಅವರಿಗೆ ಸನ್ಮಾನ, ಸಂಕ್ರಾಂತಿ ಸುಗ್ಗಿ ಸಂಭ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು.

ಭಾರತವನ್ನು ಎರಡು ದೃಷ್ಟಿಯಲ್ಲಿ ನೋಡಬಹುದಾಗಿದೆ. ವೈಮಾನಿಕವಾಗಿ ನೋಡಿದರೆ ಬಹಳ ಸುಂದರವಾಗಿ ಕಾಣಲಿದೆ. ರೈಲಿನಲ್ಲಿ ಪ್ರಯಾಣಿಸಿದರೆ ನಿಜವಾದ ಭಾರತ ಕಾಣಲಿದ್ದು, ಹಳ್ಳಿಗರು, ಬಡ ಜನರ ಕಷ್ಟ ಕಾಣಲಿದೆ. ಪದವಿ ಓದಿದವರು ಮಾತ್ರ ಜ್ಞಾನವಂತರಲ್ಲ. ಬದಲಾಗಿ ಸಂಸ್ಕಾರ ಇದ್ದವರು ಮುಖ್ಯ ಎಂದು ಅವರು ತಿಳಿಸಿದರು.

ಈ ಹಿಂದೆ ಜನರ ಮನಸ್ಸು ಬಂಗಾರವಾಗಿತ್ತು. ದೇವರ ವಿಗ್ರಹ ಕಲ್ಲಾಗಿದ್ದವು. ಆದರೆ ಇದೀಗ ಜನರ ಮನಸ್ಸು ಕಲ್ಲಾಗಿದ್ದು, ದೇವರು ಬಂಗಾರವಾಗಿದ್ದಾನೆ. ಮಹಿಳೆಯರ ಸಬಲೀಕರಣ ಕೇವಲ ಭಾಷಣವಾಗಿದೆ. ಪ್ರತಿ ಹೆಣ್ಣು ಗಂಡನ ಮನೆಗೆ ಬಂದಾಗ ತಂದೆಯ ಮನೆಯಿಂದ ಏನು ತಂದಳು ಎಂದು ಯೋಚಿಸುತ್ತೇವೆ. ಆದರೆ ಆಕೆ ಯಾರ್ಯಾರನ್ನು ಬಿಟ್ಟು ಬಂದಿದ್ದಾಳೆ ಎಂದು ಚಿಂತಿಸುವುದಿಲ್ಲ. ಹೆಣ್ಣು ಮಕ್ಕಳು ಸಂತೃಪ್ತಿಯಿಂದ ಬದುಕಿದರೆ ಸ್ವಾತಂತ್ರಕ್ಕೊಂದು ಅರ್ಥ ಬರಲಿದೆ.

ಸನ್ಮಾನ, ಗೌರವವನ್ನು ಮೌನವಾಗಿ ಸ್ವೀಕರಿಸಬೇಕು. ಸಾಧನೆ ಮಾತನಾಡಬೇಕು. ನನಗೆ ಐಶ್ವರ್ಯ ಬೇಡ. ಆದಿದ್ದರೆ ಸಮಸ್ಯೆಗಳು ಹೆಚ್ಚು ಇದಕ್ಕೆ ಬದಲಾಗಿ ಆರೋಗ್ಯ, ಆಯಸ್ಸು, ಸಂತೃಪ್ತಿ ಇರಲಿ. ಪ್ರಸ್ತುತ ಸಮಾಜದಲ್ಲಿ ಸಂತೋಷಕ್ಕಾಗಿ ಹುಡುಕಾಡುತ್ತಿರುವುದನ್ನು ಕಾಣುತ್ತಿದ್ದೇವೆ. ನಿಸ್ವಾರ್ಥ ಸೇವೆಯಿಂದ ಜನರ ನೆನಪಿನಲ್ಲಿ ಉಳಿಯುವುದೇ ಸಾಧನೆಯಾಗಿದೆ. ಸಾಧನೆಗೆ ದೊಡ್ಡದು, ಚಿಕ್ಕ ಕೆಲಸ ಎಂಬುದಿಲ್ಲ. ಯಾವುದೇ ಕೆಲಸದಲ್ಲೂ ಸಾಧನೆ ಮಾಡಬಹುದಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಸರಳತೆಯಿಂದ ದೊರಕುವ ಗೌರವ ಶಾಶ್ವತವಾಗಿದ್ದು, ಸಂಪತ್ತಿನಿಂದ ದೊರಕುವ ಗೌರವ ತಾತ್ಕಾಲಿಕವಾಗಿದೆ. ಆದರೆ ಇತ್ತೀಚೆಗೆ ಸಂಪತ್ತು ಹುಡುಕಿ ಸಂಬಂಧ ಮಾಡಲಾಗುತ್ತಿದೆ. ಸಂಬಂಧಗಳೇ ಸಂಪತ್ತಾಗಿರಲಿ ಎಂದು ಕಿವಿಮಾತು ಹೇಳಿದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಕೊಮ್ಮೇರಹಳ್ಳಿ ಶಾಖಾ ಮಠದ ಪುರುಷೋತ್ತಮನಂದನಾಥ ಸ್ವಾಮೀಜಿ, ಸಂಸದೆ ಸುಮಲತಾ ಅಂಬರೀಶ್, ಶಾಸಕ ರವಿಕುಮಾರ್‌ಗೌಡ ಗಣಿಗ, ಕಾಂಗ್ರೆಸ್ ಮುಖಂಡ ವೆಂಕಟರಮಣೇಗೌಡ (ಸ್ಟಾರ್ ಚಂದ್ರು), ಜಿಲ್ಲಾಧಿಕಾರಿ ಡಾ.ಕುಮಾರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್, ಅಪರ ಜಿಲ್ಲಾಧಿಕಾರಿ ಡಾ.ಎಚ್.ಎಲ್.ನಾಗರಾಜು, ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ಗಂಗಾಧರ ಗೌಡ, ಒಕ್ಕಲಿಗರ ಸಂಘದ ನಿರ್ದೇಶಕರಾದ ಅಶೋಕ್ ಜಯರಾಮ್, ಮೂಡ್ಯ ಚಂದ್ರು, ರಾಘವೇಂದ್ರ ಬಸರಾಳು, ನೆಲ್ಲಿಗೆರೆ ಬಾಲು, ಡಾ.ಸದಾನಂದಗೌಡ, ಎನ್.ಕೃಷ್ಣ, ಸುಜಾತಕೃಷ್ಣ ಮತ್ತಿತರರಿದ್ದರು.

ಉಚಿತ ಆರೋಗ್ಯ ತಪಾಸಣೆ ಶಿಬಿರ



ಮೈಸೂರು,ಫೆ.25(ಪಿಎಂ)– ಸಮೃದ್ಧಿ ವಾರ್ತೆ ಪತ್ರಿಕೆ ವತಿಯಿಂದ ಅನ್ನಪೂರ್ಣ ಕಣ್ಣಿನ ಆಸ್ಪತ್ರೆ ಮತ್ತು ಕ್ಲಿಯರ್ ಮೆಡಿ ರೇಡಿಯಂಟ್ ಆಸ್ಪತ್ರೆ ಸಹಯೋಗದಲ್ಲಿ ಭಾನುವಾರ ಉಚಿತ ಆರೋಗ್ಯ ತಪಾಸಣೆ ಶಿಬಿರ ನಡೆಯಿತು. ಮೈಸೂರು ಹೂಟಗಳ್ಳಿ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿರುವ ಸುದರ್ಶನ ವಿದ್ಯಾಸಂಸ್ಥೆ ಆವರಣದಲ್ಲಿ ಶಿಬಿರ ನಡೆಯಿತು. ಶಾಲೆ ಮಕ್ಕಳು ಮತ್ತು ಅವರ ಪೋಷಕರು ಹಾಗೂ ಸ್ಥಳೀಯ ನಿವಾಸಿಗಳು ಸೇರಿದಂತೆ 100ಕ್ಕೂ ಹೆಚ್ಚು ಮಂದಿ ಶಿಬಿರದ ಪ್ರಯೋಜನ ಪಡೆದರು. ಮೈಸೂರಿನ ವಿಜಯನಗರದ ಶ್ರೀಯೋಗ ನರಸಿಂಹಸ್ವಾಮಿ ದೇವಸ್ಥಾನದ ವ್ಯವಸ್ಥಾಪಕ ಎಸ್.ಶ್ರೀನಿವಾಸ್ ಶಿಬಿರಕ್ಕೆ ಚಾಲನೆ ನೀಡಿದರು.

ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಆಯೋಜಿಸಲು ಸಮೃದ್ಧಿ ವಾರ್ತೆ ಪತ್ರಿಕೆ ಉತ್ಸುಕವಾಗಿದ್ದು, ಆಸಕ್ತರು ಸಂಪರ್ಕಿಸಬಹುದು (ಮೊ.ಸಂ. 97401 76567) ಎಂದು ಪತ್ರಿಕೆ ಸಂಸ್ಥಾಪಕ ಸಹಾಗೌಡ ಹಾಗೂ ಪತ್ರಿಕೆ ಜಿಲ್ಲಾ ವರದಿಗಾರ ರಕ್ತದಾನಿ ಮಂಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಡದಹಳ್ಳಿ ರೈಲ್ವೆ ಕೆಳ ಸೇತುವೆ ಕಾಮಗಾರಿಗೆ ಚಾಲನೆ

ಮೈಸೂರು, ಫೆ.25(ಎಸ್‌ಬಿಡಿ)– ಮೈಸೂರು ತಾಲೂಕಿನ ದಡದಹಳ್ಳಿ ರಸ್ತೆ ರೈಲ್ವೆ ಕೆಳಸೇತುವೆ(ಅಂಡರ್‌ಪಾಸ್) ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ವಿಡಿಯೋ ಕಾನ್ಫರೆನ್ಸ್ ಮೂಲಕ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಅಮೃತ್ ಭಾರತ್ ಯೋಜನೆಯಡಿ ಅಶೋಕಪುರಂ–ಕಡಕೊಳ ರೈಲ್ವೆ ನಿಲ್ದಾಣಗಳ ನಡುವೆ ಸಿಂಧುವಳ್ಳಿ–ಬೀರೇಗೌಡನ ಹುಂಡಿ ಬಳಿ ದಡದಹಳ್ಳಿ ರಸ್ತೆ ಕೆಳಸೇತುವೆ(ನಂ.11)ಯನ್ನು 2.07 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿದ್ದು, ಈ ಕಾಮಗಾರಿ ಸೇರಿದಂತೆ ದೇಶಾದ್ಯಂತ 1,500 ರೈಲ್ವೆ ಸೇತುವೆ ಹಾಗೂ 554 ರೈಲ್ವೆ ನಿಲ್ದಾಣಗಳ ಪುನರಾಭಿವೃದ್ಧಿ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಲಿದ್ದಾರೆ. ದಡದಹಳ್ಳಿ ರಸ್ತೆ ಕೆಳಸೇತುವೆ ನಿರ್ಮಾಣವಾಗುವ ಸ್ಥಳದಲ್ಲಿ ಸೋಮವಾರ ಮಧ್ಯಾಹ್ನ 12ಕ್ಕೆ ಕಾರ್ಯಕ್ರಮ ಏರ್ಪಡಿಸಲಾಗಿದ್ದು ಸಂಸದ ಪ್ರತಾಪ್ ಸಿಂಹ ಮತ್ತಿತರರ ಗಣ್ಯರು ಭಾಗವಹಿಸಲಿದ್ದಾರೆ.



ಥೈಲ್ಯಾಂಡ್‌ನಲ್ಲಿ ನಡೆದ ಅಂತರಾಷ್ಟ್ರೀಯ ಮಾಸ್ಟರ್ ಅಥ್ಲೆಟಿಕ್ ಚಾಂಪಿಯನ್‌ಶಿಪ್‌ನಲ್ಲಿ ಹಾಸನ ಜಿಲ್ಲೆ, ಅರಸೀಕೆರೆ ಟೌನ್‌ನ ಸರ್ಕಲ್ ಇನ್ಸ್‌ಪೆಕ್ಟರ್ ಶಿವನಂಜಶೆಟ್ಟಿ ಅವರು ಲಾಂಗ್ ಜಂಪ್‌ನಲ್ಲಿ ಚಿನ್ನದ ಪದಕ ಹಾಗೂ ಜಾವೆಲಿನ್ ತ್ರೋನಲ್ಲಿ ಕಂಚಿನ ಪದಕ ಗಳಿಸಿದ್ದಾರೆ. ಮೂಲತಃ ಚಾಮರಾಜನಗರ ಜಿಲ್ಲೆಯವರಾದ ಇವರು ಮೈಸೂರು ಜಿಲ್ಲೆಯ ವಿವಿಧೆಡೆ ಕಾರ್ಯ ನಿರ್ವಹಿಸಿದ್ದು, ಇತ್ತೀಚೆಗೆ ಅರಸೀಕೆರೆಗೆ ವರ್ಗಾವಣೆಯಾಗಿದ್ದಾರೆ.

ಕಂಪ್ಯೂಟರ್ ಸೈನ್ಸ್‌ನಲ್ಲಿ 3ನೇ ರ್‍ಯಾಂಕ್



ಮೈಸೂರು, ಫೆ.25–ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸುಮುಖ ಅವರು ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ 3ನೇ ರ್‍ಯಾಂಕ್ ಪಡೆದು ತೇರ್ಗಡೆಯಾಗಿದ್ದಾರೆ. ಇವರು ಶಿಕ್ಷಕ ಶ್ರೀಕಂಠಶಾಸ್ತ್ರಿ ಹಾಗೂ ಮೈಸೂರು ಜಿಲ್ಲಾ ನ್ಯಾಯಾಲಯದ ಜಡ್ಜ್‌ಮೆಂಟ್ ರೈಟರ್ ಶ್ರೀಮತಿ ಮಧುರಾ ಅವರ ಪುತ್ರ

ಸ್ವಾದ ಕಳೆದುಕೊಳ್ಳುತ್ತಿರುವ ಕೊಡಗಿನ ಕಿತ್ತಳೆ

• ಇದರ ಪರಿಮಳ, ಗುಣಮಟ್ಟ ಇತರೆಡೆ ಎಲ್ಲೂ ಸಿಗುವುದಿಲ್ಲ • ವರ್ಷದಿಂದ ವರ್ಷಕ್ಕೆ ಕ್ಷೀಣ



'ಕೊಡಗು ಕಿತ್ತಳೆ' ಇತಿಹಾಸ

1830ರ ಅವಧಿಯಲ್ಲಿ ಬ್ರಿಟಿಷರು ಕೊಡಗಿನ ಪರ್ವತ ಪ್ರದೇಶದ ಬಾಣೆ ಜಾಗದಲ್ಲಿ ಕಿತ್ತಳೆ ಬೆಳೆದರು. 1940ರಲ್ಲಿ 10 ಎಕರೆ ಪ್ರದೇಶದಲ್ಲಿ ಮಾತ್ರ ಬೆಳೆದಿದ್ದ ಕೊಡಗಿನ ಕಿತ್ತಳೆ 1960–70ರ ವೇಳೆಗೆ 50 ಸಾವಿರ ಎಕರೆ ಪ್ರದೇಶಕ್ಕೆ ವ್ಯಾಪಿಸಿತ್ತು. ಅಲ್ಲದೆ, 1942–43ರಲ್ಲಿ ಜಿಲ್ಲೆಯಲ್ಲಿ 'ಕೊಡಗು ಕಿತ್ತಳೆ ಬೆಳೆಗಾರರ ಸಹಕಾರ ಸಂಘ' ಕೂಡ ಸ್ಥಾಪನೆಯಾಯಿತು. ಕೊಡಗಿನ ಕಿತ್ತಳೆ ಬೆಳೆ ಅಭಿವೃದ್ಧಿಪಡಿಸಲು ಹಾಗೂ ಸಂಶೋಧಿಸಲು 1947ರಲ್ಲಿ ಚೆಟ್ಟಳ್ಳಿಯಲ್ಲಿ ಕಿತ್ತಳೆ ಸಂಶೋಧನಾ ಕೇಂದ್ರ ಸ್ಥಾಪನೆ ಮಾಡಲಾಗಿದ್ದು, ಈ ಕೇಂದ್ರವನ್ನು ನಂತರ 'ಕೇಂದ್ರೀಯ ತೋಟಗಾರಿಕಾ ಸಂಶೋಧನಾ ಕೇಂದ್ರ'ವಾಗಿ ಮಾರ್ಪಡಿಸಲಾಯಿತು.

ಮಡಿಕೇರಿ, ಫೆ.25–ಬದಲಾಗುತ್ತಿರುವ ಕಾಲಘಟ್ಟದಲ್ಲಿ ಪಶ್ಚಿಮಘಟ್ಟ ಕೊಡಗು ಜಿಲ್ಲೆಯ ವಿಶೇಷ ಕೃಷಿಯ ಭಾಗವಾದ ರಸಭರಿತ ಸುವಾಸನೆಯ 'ಕಿತ್ತಳೆ' ಬೆಳೆ ತನ್ನ ವಿಶ್ವವಿಖ್ಯಾತಿಯಿಂದ ನಿಧಾನವಾಗಿ ಮರೆಯಾಗುತ್ತಿರುವುದು ಆತಂಕಕ್ಕೆ ಕಾರಣವಾಗಿದೆ.

ಕೊಡಗಿನ ಆರ್ಥಿಕ ಬೆನ್ನೆಲುಬಾಗಿರುವ ಕಾಫಿ ಕೃಷಿಯೊಂದಿಗೆ ಮಿಶ್ರ ಬೆಳೆಯಾಗಿ ಕಿತ್ತಳೆಯನ್ನು ಶತಮಾನಗಳಿಂದ ಬೆಳೆಯಲಾಗುತಿತ್ತು. ಕಿತ್ತಳೆ ಇಲ್ಲದ ಕಾಫಿ ತೋಟಗಳನ್ನು ಊಹಿಸಲೂ ಅಸಾಧ್ಯ ಎನ್ನುವ ಮಟ್ಟಿಗೆ ಕೊಡಗಿನ ಬೆಳೆಗಾರರು ಕಿತ್ತಳೆ ಬೆಳೆಯುತ್ತಿದ್ದರು. ಜೊತೆಗೆ ಅದರ ಸವಿಯನ್ನು ಇತರರಿಗೂ ಉಣಬಡಿಸುತ್ತಿದ್ದು ಇಂದಿಗೆ ನೆನಪು ಮಾತ್ರವಾಗುತ್ತಿದೆ.

ವೈಜ್ಞಾನಿಕವಾಗಿ 'ಸಿಟ್ರಸ್' ಪಂಗಡಕ್ಕೆ ಒಳಪಡುವ ಕಿತ್ತಳೆ, ಸಮುದ್ರ ಮಟ್ಟದಿಂದ ಸುಮಾರು 3300 ಅಡಿ ಎತ್ತರದ ಕೊಡಗಿನ ದಟ್ಟ ಹರಿದ್ವರ್ಣದ ಗಿರಿ ಶ್ರೇಣಿಗಳ ಕಾಫಿ ತೋಟಗಳಲ್ಲಿ ಇಲ್ಲಿನ ವಾತಾವರಣಕ್ಕೆ ಪೂರಕವಾಗಿ ಬೆಳೆಯಲಾಗುತಿತ್ತು. ವಿಶ್ವದ ಮತ್ತೆಲ್ಲೂ ದೊರಕದ ಸ್ವಾದ ಹಾಗೂ ಪರಿಮಳವನ್ನು ಹೊಂದಿ ಪ್ರಖ್ಯಾತಿಯನ್ನು ಪಡೆದಿತ್ತು. ಇಂತಹ ಅಪರೂಪದ 'ಕೊಡಗಿನ ಕಿತ್ತಳೆ' ಇಂದು ಮರೆಯಾಗುತ್ತಿದೆ.

ಅವನತಿಯ ಹಾದಿಗೆ: ಕೊಡಗಿನ ಕಿತ್ತಳೆ, ಏಲಕ್ಕಿ, ಕಾಫಿ, ಕರಿಮೆಣಸನ್ನು ಇತರೆಡೆಗಳಲ್ಲೂ ಬೆಳೆಯಬಹುದು. ಆದರೆ, ಇವುಗಳ ಸ್ವಾದ, ಪರಿಮಳ, ಗುಣಮಟ್ಟ ಇತರೆಡೆಗಳಲ್ಲಿ ಸಿಗುವುದಿಲ್ಲ. ಅದಕ್ಕೆ ಕಾರಣ ಇಲ್ಲಿನ ಹಸಿರು ಪರಿಸರ. ಇಂತಹ ಹಸಿರು ಪರಿಸರಕ್ಕೆ ಆಧುನೀಕತೆಯಿಂದ ತೀವ್ರ ಧಕ್ಕೆ ಆಗಿರುವುದು, ಮತ್ತದನ್ನು ನಿಯಂತ್ರಿಸುವಲ್ಲಿ ಆಡಳಿತ ವ್ಯವಸ್ಥೆ ಸಂಪೂರ್ಣ ವಿಫಲವಾಗಿರುವುದು 'ಕೊಡಗಿನ ಕಿತ್ತಳೆ' ಮರೆಯಾಗುತ್ತಿರುವುದಕ್ಕೆ ಪ್ರಮುಖ ಕಾರಣ ಎನ್ನಬಹುದು.

ಕೊಡಗಿಗೆ ಮಾರಕವಾದ ನಾಗಪುರ!: ಪ್ರಕೃತಿಯ ಮೇಲಿನ ದೌರ್ಜನ್ಯ ಒಂದೆಡೆಯಾದರೆ, ದಶಕಗಳ ಹಿಂದೆ ನಡೆದ ಒಂದು ವಿದ್ಯಮಾನ ಕೊಡಗಿನ ಕಿತ್ತಳೆ ತಳಿಗೆ ಮಾರಕವಾಗಿ ಪರಿಣಮಿಸಿರುವುದು ತೀವ್ರ ಆಘಾತಕಾರಿ ವಿಚಾರವಾಗಿದೆ.

ಸರ್ಕಾರದ ಯೋಜನೆಯೊಂದರ ಅಡಿಯಲ್ಲಿ ಕೊಡಗಿನಲ್ಲಿ ಕಿತ್ತಳೆ ಕೃಷಿ ಅಭಿವೃದ್ಧಿಪಡಿಸುವುದಾಗಿ ಬೆಳೆಗಾರರಿಗೆ 'ನಾಗಪುರ ಕಿತ್ತಳೆ ಸಸಿ'ಗಳನ್ನು ವಿತರಿಸಲಾಯಿತು. ಆ ಸಂದರ್ಭ ಇದಕ್ಕೆ ವಿರೋಧ ವ್ಯಕ್ತವಾಯಿತಾದರೂ ಅಂದಿನ ರಾಜಕೀಯ ನಾಯಕರಿಗೆ ಅವರ ಪ್ರತಿಷ್ಠೆ ಮುಖ್ಯವಾಯಿತೇ ಹೊರತು, ಕೊಡಗಿನ ಕಿತ್ತಳೆಯ ಹಿತಾಸಕ್ತಿ ಅಲ್ಲ ಎಂಬುದು ಸ್ಪಷ್ಟವಾಗಿದೆ. ನಾಗಪುರ ಕಿತ್ತಳೆ ಸಸಿಗಳನ್ನು ಯಾವ ಮುಂದಾಲೋಚನೆಯೂ ಇಲ್ಲದೆ ಜಿಲ್ಲೆಯ ಬಹುತೇಕ ಭಾಗದ ಬೆಳೆಗಾರರು ತಮ್ಮ ತೋಟಗಳಲ್ಲಿ ನೆಟ್ಟು ಬೆಳೆಸಿದರು. ಆದರೆ, ನಾಗಪುರ ಕಿತ್ತಳೆಯ ರುಚಿ ಕೊಡಗಿನ ಕಿತ್ತಳೆಯ ರುಚಿಯ ಸಮೀಪಕ್ಕೂ ಸುಳಿಯಲಿಲ್ಲ ಎಂಬುದು ವಾಸ್ತವ. ಇದರ ನಡುವೆ ಕೊಡಗಿನ ಮೂಲ ಕಿತ್ತಳೆ ತಳಿಯ ಗಿಡಗಳು ಮಾಯವಾಗಿ ನಾಗಪುರ ಕಿತ್ತಳೆ ಕಂಡು ಬರಲಾರಂಭಿಸಿತು. ಪರಿಣಾಮ 'ಕೊಡಗಿನ ಕಿತ್ತಳೆ' ಮೂಲ ತಳಿಯೇ ಬಹುತೇಕ ವಿನಾಶದ ಅಂಚಿಗೆ ಸರಿದು ನಿಲ್ಲುವಂತಾಗಿದೆ.

> 1950ರಲ್ಲಿ 50 ಸಾವಿರ ಎಕರೆ ಪ್ರದೇಶದಲ್ಲಿ ಬೆಳೆಯುತ್ತಿದ್ದ ಕಿತ್ತಳೆ ಪ್ರಸ್ತುತ ವರ್ಷಗಳಲ್ಲಿ 3 ಸಾವಿರ ಎಕರೆ ಪ್ರದೇಶಗಳಿಗೆ ಸೀಮಿತವಾಗಿದೆ. ಕೊಡಗು ಕಿತ್ತಳೆ ಪುನಶ್ಚೇತನಕ್ಕಾಗಿ 'ರಾಷ್ಟ್ರೀಯ ಕೃಷಿ ವಿಕಾಸ್' ಅಡಿಯಲ್ಲಿ 2 ಕೋಟಿ ರೂ. ಕ್ರಿಯಾ ಯೋಜನೆ ತಯಾರಿಸಿ ಸರ್ಕಾರಕ್ಕೆ ಶಿಫಾರಸು ಮಾಡಿದ್ದೇವೆ. ಕೊಡಗಿನ ಕಿತ್ತಳೆ ಗಿಡಗಳನ್ನು ಅಭಿವೃದ್ಧಿಪಡಿಸಿ ಕೊಡಗು, ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಬೆಳೆಗಾರರಿಗೆ ವಿತರಿಸುವ ಮೂಲಕ ಕೊಡಗಿನ ಕಿತ್ತಳೆಯನ್ನು ಪುನಶ್ಚೇತನಗೊಳಿಸಲು ಸಿದ್ಧತೆ ಕೈಗೊಳ್ಳಲಾಗಿದೆ.
> –ಬಿ.ಎಂ.ಮುರಳೀಧರ್, ವಿಜ್ಞಾನಿ, ಕೇಂದ್ರೀಯ ತೋಟಗಾರಿಕಾ ಪ್ರಾಯೋಗಿಕಾ ಕೇಂದ್ರ ಚೆಟ್ಟಳ್ಳಿ

> ಜಿಲ್ಲೆಯ ವಿವಿಧ ಕಡೆಗಳಲ್ಲಿ ಇಂದಿಗೂ ಎಲ್ಲೋ ಅಪರೂಪಕ್ಕೆ ಎಂಬಂತೆ ಕೊಡಗಿನ ಕಿತ್ತಳೆ ಮರಗಳಿವೆ. ಕೆಲವು ಬೆಳೆಗಾರರು ಆ ಕಿತ್ತಳೆ ಹಣ್ಣಿನ ಬೀಜಗಳನ್ನು ಸಂರಕ್ಷಿಸಿ ತೋಟಗಳಲ್ಲಿ ಗಿಡಗಳನ್ನು ಬೆಳೆಸಿದ್ದಾರೆ. ನಾಗಪುರ ಕಿತ್ತಳೆ ಬೆಳೆದ ಮೇಲೆ ಮೂಲ ಕೊಡಗಿನ ಕಿತ್ತಳೆಯನ್ನು ಗುರುತಿಸುವುದು, ಅವುಗಳ ಆಧಾರದಲ್ಲಿ ಮೂಲ ತಳಿಯ ಸಂವರ್ಧನೆ ಮಾಡುವುದು ಅಷ್ಟು ಸುಲಭದ ಮಾತಲ್ಲ.
> –ಮಾಜಿ ಕಿತ್ತಳೆ ಬೆಳೆಗಾರ, ಮಡಿಕೇರಿ ತಾಲೂಕು

ಪುನಶ್ಚೇತನಕ್ಕೆ ಕ್ರಮ: ಈ ಎಲ್ಲಾ ಬೆಳವಣಿಗೆಗಳ ನಡುವೆ ಚೆಟ್ಟಳ್ಳಿ ಕೇಂದ್ರೀಯ ತೋಟಗಾರಿಕಾ ಪ್ರಾಯೋಗಿಕ ಕೇಂದ್ರ ಹೊಸ ಯೋಜನೆಯನ್ನು ರೂಪಿಸಿದ್ದು, 2 ಕೋಟಿ ರೂ. ವೆಚ್ಚದಲ್ಲಿ ಕೊಡಗಿನ ಕಿತ್ತಳೆಗೆ ಮರುಜೀವ ತುಂಬಲು ಸಿದ್ಧತೆ ನಡೆಸಿದೆ.

ಕಿತ್ತಳೆ ಪುನಶ್ಚೇತನಕ್ಕಾಗಿ ಚೆಟ್ಟಳ್ಳಿಯ ಕೇಂದ್ರೀಯ ತೋಟಗಾರಿಕಾ ಪ್ರಾಯೋಗಿಕ ಕೇಂದ್ರದ ವಿಜ್ಞಾನಿಗಳು ರಾಷ್ಟ್ರೀಯ ಕೃಷಿ ವಿಕಾಸ್ ಅಡಿಯಲ್ಲಿ ಕ್ರಿಯಾ ಯೋಜನೆ ತಯಾರಿಸಿ ಸರ್ಕಾರಕ್ಕೆ ಶಿಫಾರಸು ಮಾಡಿದ್ದಾರೆ. ಕಿತ್ತಳೆಯನ್ನು ಅಭಿವೃದ್ಧಿಪಡಿಸಲು ಹಾಗೂ ಬೆಳೆಯಲು ಕೊಡಗು, ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದ್ದು, 3 ಜಿಲ್ಲೆಯ ಬೆಳೆಗಾರರಿಗೆ ಉಚಿತವಾಗಿ ಚೆಟ್ಟಳ್ಳಿ ಕೇಂದ್ರಿಯ ತೋಟಗಾರಿಕಾ ಪ್ರಾಯೋಗಿಕ ಕೇಂದ್ರ ಕಿತ್ತಳೆ ಗಿಡಗಳನ್ನು ಉಚಿತವಾಗಿ ವಿತರಿಸಿ ಅವರಿಗೆ ಕಿತ್ತಳೆ ಬೆಳೆಯ ಬಗ್ಗೆ ಅರಿವು ಹಾಗೂ ಆಸಕ್ತಿ ಮೂಡಿಸುವ ಉದೇಶವಾಗಿದೆ.

ಕೊಡಗಿನ ಕಿತ್ತಳೆ ಗಾತ್ರದಲ್ಲಿ ಸ್ವಲ್ಪ ಸಣ್ಣದಾಗಿದ್ದರೂ, ಉತ್ಕೃಷ್ಟ ರುಚಿ ಹೊಂದಿದೆ. ಕೊಡಗಿನ ಕಿತ್ತಳೆಯನ್ನು ದಕ್ಷಿಣ ಭಾರತದ ವಿವಿಧೆಡೆಗಳಲ್ಲಿ ಬೆಳೆಯುತ್ತಿದ್ದರೂ ನಿರೀಕ್ಷಿತ ಮಟ್ಟದಲ್ಲಿ ಯಶಸ್ಸು ಕಂಡಿಲ್ಲ. ಕೊಡಗಿನ ಹವಾಮಾನದಲ್ಲಿ ಮಾತ್ರ ಕೊಡಗಿನ ಕಿತ್ತಳೆ ಬೆಳೆಯಲು ಸಾಧ್ಯ. ಕೊಡಗಿನ ಕಿತ್ತಳೆಗೆ 2005–06ರಲ್ಲಿ ಭೌಗೋಳಿಕವಾಗಿ ಸೂಚಕ ಸ್ಥಾನಮಾನ ದೊರಕಿದೆ. ಹೀಗಿದ್ದರೂ ಕೂರ್ಗ್ ಮ್ಯಾಂಡರಿನ್ ಬೆಳೆಯುವ ಪ್ರದೇಶಗಳು ಕೊಡಗಿನಲ್ಲಿ ವರ್ಷದಿಂದ ವರ್ಷಕ್ಕೆ ಕ್ಷೀಣಿಸುತ್ತಿವೆ. ಒಂದು ಕಾಲಕ್ಕೆ 50 ಸಾವಿರ ಎಕರೆ ಪ್ರದೇಶದಲ್ಲಿದ್ದ ಕೊಡಗಿನ ಕಿತ್ತಳೆಯನ್ನು, ಈಗ ಸುಮಾರು 3 ಸಾವಿರ ಎಕರೆಯಲ್ಲಷ್ಟೇ ಬೆಳೆಯಲಾಗುತ್ತಿದೆ.

ಅರಣ್ಯ ವಿದ್ಯಾರ್ಥಿಗಳ ಬೇಡಿಕೆ ಈಡೇರಿಕೆಗೆ ಕ್ರಮ

ಮಡಿಕೇರಿ, ಫೆ25–ಪೊನ್ನಂಪೇಟೆ ಅರಣ್ಯ ಕಾಲೇಜಿನ ವಿದ್ಯಾರ್ಥಿಗಳ ಕೆಲ ಬೇಡಿಕೆಗಳು ನ್ಯಾಯ ಸಮ್ಮತವಾಗಿದ್ದು, ಸರ್ಕಾರದೊಂದಿಗೆ ಚರ್ಚಿಸಿ ಸಮಸ್ಯೆ ಪರಿಹಾರಕ್ಕೆ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಭರವಸೆ ನೀಡಿದರು.

ಪೊನ್ನಂಪೇಟೆ ಅರಣ್ಯ ಕಾಲೇಜಿಗೆ ಭೇಟಿ ನೀಡಿದ ಶಾಸಕರು, ಕಳೆದ 17 ದಿನಗಳಿಂದ ನಿರಂತರವಾಗಿ ಪ್ರತಿಭಟನೆ ನಡೆಸುತ್ತಿರುವ ವಿದ್ಯಾರ್ಥಿಗಳ ಸಮಸ್ಯೆ ಹಾಗೂ ಬೇಡಿಕೆಗಳನ್ನು ಆಲಿಸಿ ಮಾತನಾಡಿದರು. ಆಡಳಿತ ಮತ್ತು ಬದಲಾವಣೆ ಸಮಿತಿ ಅಧ್ಯಕ್ಷರಾಗಿದ್ದ ವಿಜಯ್ ಭಾಸ್ಕರ್ ಅವರು ಅರಣ್ಯ ಇಲಾಖೆ ನೇಮಕಾತಿಗೆ ಸಂಬಂಧಿಸಿದಂತೆ ಕೆಲವು ತಿದ್ದುಪಡಿಗಳನ್ನು ಸೂಚಿಸಿ ವರದಿ ನೀಡಿದ್ದಾರೆ. ಈ ವರದಿಯನ್ನು ಸರ್ಕಾರ ಅಂಗೀಕರಿಸದಂತೆ ಅರಣ್ಯ ಕಾಲೇಜು ವಿದ್ಯಾರ್ಥಿಗಳು ಒತ್ತಾಯಿಸಿದ್ದಾರೆ. ಇದರಿಂದ ಅವರ ಸೇವಾ ಸೌಲಭ್ಯ ಹಾಗೂ ಅವಕಾಶಗಳಿಂದ ವಂಚಿತರಾಗುತ್ತೇವೆ ಎಂದು ವಿದ್ಯಾರ್ಥಿಗಳು ಆತಂಕ ವ್ಯಕ್ತಪಡಿಸಿದ್ದಾರೆ. ಅರಣ್ಯ ಇಲಾಖೆಯ ನೇಮಕಾತಿಯಲ್ಲಿ ಬಿಎಸ್ಸಿ ಅರಣ್ಯಶಾಸ್ತ್ರ ಅಧ್ಯಯನ ಮಾಡಿದವರಿಗೆ ಹೆಚ್ಚಿನ ಆದ್ಯತೆ ನೀಡುವಂತೆ ಬೇಡಿಕೆ ಮುಂದಿಟ್ಟಿದ್ದಾರೆ ಎಂದು ಹೇಳಿದರು.



ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯಕ್ಕೆ ಭೇಟಿ ನೀಡಿದ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ, ವಿದ್ಯಾರ್ಥಿಗಳ ಸಮಸ್ಯೆ ಆಲಿಸಿದರು.

ಕಾನೂನಾತ್ಮಕ ಪರಿಹಾರ: ಕಳೆದ 25 ವರ್ಷಕ್ಕೂ ಹೆಚ್ಚು ಕಾಲ ತಾವು ವಕೀಲರಾಗಿ ಸೇವೆ ಸಲ್ಲಿಸಿದ್ದೇನೆ. 2 ಸರ್ಕಾರಗಳ ಅವಧಿಯಲ್ಲಿ 6 ವರ್ಷವರೆಗೆ ಸರ್ಕಾರದ ಅಡ್ವಕೇಟ್ ಜನರಲ್ ಆಗಿಯೂ ಕಾನೂನಾತ್ಮಕ ಆಡಳಿತ ನಡೆಸಿದ ಸುದೀರ್ಘ ಅನುಭವ ಇದೆ. ಕೆಲ ವಿಚಾರಗಳನ್ನು ಪರಿಹರಿಸಲು ಸಮಯವೂ ಹಿಡಿಯಲಿದೆ ಎಂದರು.

ವಿದ್ಯಾರ್ಥಿಗಳ ಪ್ರತಿಭಟನೆಗೆ ಪ್ರತಿಫಲವೂ ದೊರೆಯಬೇಕಿದೆ. ಅರಣ್ಯ ವಿದ್ಯಾರ್ಥಿಗಳ ಎಲ್ಲಾ ಬೇಡಿಕೆಗಳನ್ನು ಅರಣ್ಯ ಸಚಿವರು ಮತ್ತು ಮುಖ್ಯಮಂತ್ರಿಗಳ ಗಮನಕ್ಕೆ ತಂದು ಚರ್ಚೆ ನಡೆಸಿ, ಸಮಸ್ಯೆ ಪರಿಹರಿಸುವುದಾಗಿ ತಿಳಿಸಿದರು.

ನಿಯೋಗ ಭೇಟಿಗೆ ಅವಕಾಶ: ರಾಜ್ಯದ 3 ಅರಣ್ಯ ಕಾಲೇಜುಗಳ ವಿದ್ಯಾರ್ಥಿಗಳು ನಾಳೆಯಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಲು ಮುಂದಾಗಿದ್ದಾರೆ. ಆ ಸಂದರ್ಭ ವಿದ್ಯಾರ್ಥಿಗಳ ನಿಯೋಗವನ್ನು ಅರಣ್ಯ ಸಚಿವರ ಬಳಿಗೆ ಕರೆದೊಯ್ದು ಅವರ ಬೇಡಿಕೆ ಮತ್ತು ಸಮಸ್ಯೆ ಪರಿಹಾರದ ಕುರಿತು ಚರ್ಚಿಸಲು ಅವಕಾಶ ಮಾಡಿಕೊಡುವುದಾಗಿ ಶಾಸಕರು ಭರವಸೆ ನೀಡಿದರು.

ಕಳೆದ 17 ದಿನಗಳಿಂದ ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗದೇ ಪ್ರತಿಭಟನೆ ನಡೆಸುತ್ತಿರುವುದು ಚಿಂತಿಸಬೇಕಾದ ವಿಚಾರವಾಗಿದೆ. ಈ ಹಿನ್ನೆಲೆಯಲ್ಲಿ ತಕ್ಷಣ ಪ್ರತಿಭಟನೆ ಕೈ ಬಿಡುವಂತೆ ವಿದ್ಯಾರ್ಥಿಗಳಲ್ಲಿ ಮನವಿ ಮಾಡಿದರು. ಬಳಿಕ ವಿದ್ಯಾರ್ಥಿಗಳು ಮನವಿಯನ್ನು ಶಾಸಕ ಎ.ಎಸ್.ಪೊನ್ನಣ್ಣ ಅವರಿಗೆ ಸಲ್ಲಿಸಿದರು.

ಈ ಸಂದರ್ಭ ಅರಣ್ಯ ಮಹಾವಿದ್ಯಾಲಯದ ಡೀನ್ ಡಾ.ಜಿ.ಎಂ.ದೇವಗಿರಿ, ನಿವೃತ್ತ ಡೀನ್ ಡಾ.ಸಿ.ಜೆ.ಕುಶಾಲಪ್ಪ, ಅರಣ್ಯ ಮಹಾವಿದ್ಯಾಲಯದ ವಿದ್ಯಾರ್ಥಿಗಳಾದ ಸುಹಾಸ್, ವಿದ್ಯಾರ್ಥಿನಿ ಗೀತಾ, ಹೇಮಂತ್ ಕುಮಾರ್ ಮತ್ತಿತರ ವಿದ್ಯಾರ್ಥಿಗಳು ಹಾಜರಿದ್ದರು.

ಗೋಣಿಕೊಪ್ಪಲಿನಲ್ಲಿ ಮಾಜಿ ಸೈನಿಕರ ಸಮಾವೇಶ

ಮಡಿಕೇರಿ, ಫೆ.25–ಮಾಜಿ ಸೈನಿಕರ ಸಬಲೀಕರಣ ಮತ್ತು ಪುನರ್ವಸತಿಗೆ ಅನುಕೂಲವಾಗುವಂತೆ ಮಾಜಿ ಸೈನಿಕರು ಮತ್ತು ಅವರ ಅವಲಂಬಿತರಿಗೆ ಗೋಣಿಕೊಪ್ಪಲಿನ ಕಾವೇರಿ ಕಾಲೇಜಿನಲ್ಲಿ ಸಮಾವೇಶ ಆಯೋಜಿಸಲಾಗಿತ್ತು.

ಕರ್ನಾಟಕ ಮತ್ತು ಕೇರಳ ಉಪ ಪ್ರದೇಶದ ಕೇಂದ್ರ ಕಚೇರಿಯ ಆಶ್ರಯದಲ್ಲಿ ಎಂಇಜಿ ಸೆಂಟರ್‌ನಿಂದ ಆಯೋಜಿಸಿದ್ದ ಸಮಾವೇಶದಲ್ಲಿ 600ಕ್ಕೂ ಹೆಚ್ಚು ಮಾಜಿ ಸೈನಿಕರು ಮತ್ತು ಅವಲಂಬಿತರು ಭಾಗವಹಿಸಿದ್ದರು. ಸಮರ ಸಂಪ್ರದಾಯ ಮತ್ತು ಭಾರತೀಯ ಸಶಸ್ತ್ರ ಪಡೆಗಳಲ್ಲಿ ಸೇವೆ ಮತ್ತು ಶೌರ್ಯದ ಶ್ರೀಮಂತ ಪರಂಪರೆ ಹೊಂದಿರುವ ಕೊಡಗು ಜಿಲ್ಲೆಯ ಯೋಧರಿಗೆ ಇದೇ ಸಂದರ್ಭ ವಿವಿಧ ಸೌಲಭ್ಯಗಳನ್ನು ನೀಡಲಾಯಿತು.

ಸ್ಪರ್ಶ ಪಿಂಚಣಿ ವಿತರಣಾ ವ್ಯವಸ್ಥೆ ಮತ್ತು ಇಸಿಹೆಚ್‌ಎಸ್ ವ್ಯವಹಾರಗಳಿಗಾಗಿ ಹೊಸದಾಗಿ ನವೀಕರಿಸಲಾದ ಮೊಬೈಲ್ ಅಪ್ಲಿಕೇಶನ್, ಮಾಜಿ ಸೈನಿಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಕಂಟ್ರೋಲರ್ ಡಿಫೆನ್ಸ್ ಅಕೌಂಟ್(ಸಿಡಿಎ) ಪ್ರತಿನಿಧಿಗಳು, ಭಾರತೀಯ ಸೇನಾ ದಾಖಲೆಗಳ ಕಚೇರಿಗಳು ಮತ್ತು ಬ್ಯಾಂಕ್ ಸಹಾಯ ಕೇಂದ್ರಗಳು ಸ್ಥಾಪಿಸಿದ ಸ್ಟಾಲ್‌ಗಳ ಮೂಲಕ ತಮ್ಮ ಪಿಂಚಣಿ ಮತ್ತು ದಾಖಲಾತಿಗೆ ಮಾಜಿ ಸೈನಿಕರು ಸಿಬ್ಬಂದಿಯೊಂದಿಗೆ ನೇರವಾಗಿ ಸಂವಹನ ನಡೆಸಿದರು.



ಗೋಣಿಕೊಪ್ಪಲಿನ ಕಾವೇರಿ ಕಾಲೇಜಿನಲ್ಲಿ ಆಯೋಜಿಸಿದ್ದ ಸಮಾವೇಶದಲ್ಲಿ ಮಾಜಿ ಸೈನಿಕರು ಮತ್ತು ಅವರ ಅವಲಂಬಿತರು ಭಾಗವಹಿಸಿದ್ದರು.

ತಕ್ಷಣದ ಪರಿಹಾರಕ್ಕಾಗಿ ಕುಂದುಕೊರತೆ ನೀಗಿಸಲು ಮತ್ತು ಇತ್ತೀಚಿನ ನೀತಿಗಳ ಮಾಹಿತಿಯನ್ನು ಪಡೆಯಲು ಅವಕಾಶ ನೀಡಲಾಯಿತು. ಸಮಾವೇಶದಲ್ಲಿ ಮಾಜಿ ಯೋಧರಿಗಾಗಿ ಕಣ್ಣು, ದಂತ ಮತ್ತು ಕ್ಯಾನ್ಸರ್ ತಪಾಸನೆ ಶಿಬಿರವನ್ನು ಆಯೋಜಿಸಲಾಗಿತ್ತು.

ಇದೇ ವೇಳೆ ಮಾತನಾಡಿದ ದಕ್ಷಿಣ ಭಾರತ ಏರಿಯಾ ಕಮಾಂಡಿಂಗ್ ಜನರಲ್ ಲೆಫ್ಟಿನೆಂಟ್ ಕೆ.ಎಸ್.ಬ್ರಾರ್, ರಾಷ್ಟ್ರದ ಹಿತಾಸಕ್ತಿಯ ಸೇವೆ ಮತ್ತು ತ್ಯಾಗಗಳಿಗಾಗಿ ಹಾಜರಿದ್ದ ಮಾಜಿ ಯೋಧರು ಮತ್ತವರ ಅವಲಂಭಿತರಿಗೆ ಕೃತಜ್ಞತೆ ಸಲ್ಲಿಸಿದರು. ಸೈನಿಕ ಕಲ್ಯಾಣ ಇಲಾಖೆ ಮಾಜಿ ಸೈನಿಕರು ಹಿತಾಸಕ್ತಿ ಮತ್ತವರ ಅವಲಂಭಿತರ ಕಲ್ಯಾಣವನ್ನು ಬಯಸುತ್ತದೆ ಎಂದು ಭರವಸೆ ನೀಡಿದರು.

ಬೀದಿ ನಾಯಿಗಳಿಗೆ ರೇಬಿಸ್ ಲಸಿಕೆ



ಚಾಮರಾಜನಗರದ ನಗರಸಭೆಯಿಂದ ಬೀದಿನಾಯಿಗಳಿಗೆ ರೇಬಿಸ್ ಲಸಿಕೆ ಹಾಕಿಸಲಾಯಿತು.

ಚಾಮರಾಜನಗರ, ಫೆ.25–ನಗರಸಭೆಯಿಂದ 20 ಬೀದಿನಾಯಿಗಳಿಗೆ ರೇಬಿಸ್ ಲಸಿಕೆ ಹಾಕಿಸಲಾಯಿತು.

ನಗರಸಭೆಯ ಎಲ್ಲಾ ವಾರ್ಡ್‌ನ ಬೀದಿನಾಯಿಗಳ ಹಾವಳಿ ಹೆಚ್ಚಾಗಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಕಂಡುಬಂದಿತ್ತು ಇದನ್ನು ಮನಗೊಂಡ ನಗರಸಭೆ ಅಧಿಕಾರಿಗಳು ಬೀದಿ ನಾಯಿಗಳಿಗೆ ರೇಬಿಸ್ ಲಸಿಕೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ನಗರಸಭೆ ಪೌರಾಯುಕ್ತ ರಾಮದಾಸ್, ನಗರದ ಎಲ್ಲಾ ವಾರ್ಡ್‌ಗಳಲ್ಲಿ ಬೀದಿನಾಯಿಗಳು ಹೆಚ್ಚಾಗಿವೆ. ದಾರಿಯಲ್ಲಿ ಓಡಾಡುವವರಿಗೆ ತೊಂದರೆ ಕೊಡುತ್ತಿವೆ ಎಂದು ಸಾರ್ವಜನಿಕರು ದೂರು ನೀಡಿದ್ದರು. ಜಿಲ್ಲಾಧಿಕಾರಿ ಹಾಗೂ ನ್ಯಾಯಾಧೀಶರ ಆದೇಶದ ಮೇರೆಗೆ ಬೀದಿನಾಯಿಗಳನ್ನು ಹಿಡಿದು ಲಸಿಕೆ ನೀಡಿ, ಮತ್ತೆ ಅದೇ ಸ್ಥಳದಲ್ಲಿ ಬಿಡಲಾಗಿದೆ ಎಂದು ಹೇಳಿದರು.

ನಾಯಿಗಳ ಸಂತಾನಹರಣ ಶಸ್ತ್ರಚಿಕಿತ್ಸೆಗಾಗಿ 3 ಬಾರಿ ಟೆಂಡರ್ ಕರೆದರು ಯಾರು ಬಂದಿಲ್ಲ. ಮತ್ತೆ 4 ನಾಲ್ಕನೇ ಬಾರಿಗೆ ಟೆಂಡರ್ ಕರೆಯಲಾಗಿದೆ. ಟೆಂಡರ್ ಪ್ರಕಿಯೆ ಮುಗಿಯುವವರೆಗೆ ಬೀದಿನಾಯಿಗಳಿಂದ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ತಡೆಯಲು ರೇಬಿಸ್ ಲಸಿಕೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ಇದೇ ವೇಳೆ ಪುರಸಭೆಯ ಕಿರಿಯ ಪಶು ವೈದ್ಯಕೀಯ ಪರೀಕ್ಷಕ ಎಸ್.ಪುನೀತ್‌ಕುಮಾರ್, ಪ್ರವೀಣ್ ಕುಮಾರ್, ಬಿ.ಎಸ್.ಭವ್ಯ ಹಾಗೂ ಆರೋಗ್ಯ ನಿರೀಕ್ಷಕರಾದ ಮಂಜುನಾಥ್, ನಾರಾಯಣಸ್ವಾಮಿ, ಆರೋಗ್ಯ ಶಾಖೆಯ ಸಿದ್ದರಾಜ ನಾಯಕ, ಮಣಿಕಂಠ ಹಾಜರಿದ್ದರು.

ಮತ್ತೆ ಮೋದಿ ಸರ್ಕಾರ ಬಂದರೆ ಸಂವಿಧಾನ ನಾಶ

• ಜ್ಞಾನಪ್ರಕಾಶಸ್ವಾಮೀಜಿ ಹೇಳಿಕೆ • ಚಾ.ನಗರದಲ್ಲಿ ಅಂಬೇಡ್ಕರ್ ಜನ್ಮದಿನಾಚರಣೆ

ಚಾಮರಾಜನಗರ, ಫೆ.25–ದೇಶದಲ್ಲಿ ಮತ್ತೆ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಅಧಿಕಾರಕ್ಕೆ ಬಂದರೆ ಸಂವಿಧಾನವನ್ನು ಶಾಶ್ವತವಾಗಿ ನಾಶ ಮಾಡಲಿದ್ದಾರೆ ಎಂದು ಮೈಸೂರಿನ ಉರಿಲಿಂಗಿ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶಸ್ವಾಮೀಜಿ ಹೇಳಿದರು.

ನಗರದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ರಾಜ್ಯ ಸರ್ಕಾರಿ ಎಸ್ಸಿ, ಎಸ್ಟಿ ನೌಕರರ ಸಮನ್ವಯ ಸಮಿತಿ ಜಿಲ್ಲಾ ಘಟಕದ ವತಿಯಿಂದ ನಡೆದ ಡಾ. ಬಿ.ಆರ್.ಅಂಬೇಡ್ಕರ್ ಅವರ 133ನೇ ಜನ್ಮದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದೇಶದಲ್ಲಿ ಆಡಳಿತ ನಡೆಸುತ್ತಿರುವ ನರೇಂದ್ರ ಮೋದಿ ಸರ್ಕಾರ ಸಂವಿಧಾನಕ್ಕೆ ಡ್ಯಾಮೇಜ್ ಮಾಡಿದ್ದಾರೆ. ಸಂವಿಧಾನದಲ್ಲಿ ಐಪಿಸಿ ಸೆಕ್ಷನ್, ಸಿಆರ್‌ಪಿ ಸೆಕ್ಷನ್ ತೆಗೆದುಹಾಕಿದ್ದಾರೆ. ಈ ಬಾರಿ ಮತ್ತೆ ಮೋದಿ ಅಧಿಕಾರಕ್ಕೆ ಬಂದರೆ ಸಂವಿಧಾನವನ್ನು ನಾಶ ಮಾಡಲಿದ್ದಾರೆ. ಹಾಗಾಗಿ ಅಂಬೇಡ್ಕರ್ ಜೀವಂತವಿರುವ ಚುನಾವಣೆಯಲ್ಲಿ ಬೆರಳಿಗೆ ಇಂಕು ಹಾಕಿಸಿಕೊಳ್ಳುವಾಗ ಜಾಗೃತರಾಗಬೇಕಿದೆ ಎಂದರು.

ಮದ್ಯ, ಮೌಢ್ಯದಿಂದ ಹೊರಬರದಿದ್ದರೆ ಸಮಾಧಿ: ಡಾ.ಬಿ.ಆರ್.ಅಂಬೇಡ್ಕರ್ ಅಂತಹ ಅದ್ಭುತ ಮಹಾಜ್ಞಾನಿ ಮತ್ತೆ ಹುಟ್ಟಲ್ಲ. ಮುಂದೆಯೂ ಜನಿಸುವುದಿಲ್ಲ. ಅಂತಹ ಶೀಲವಂತ ಯಾರೂ ಇಲ್ಲ. ನೀವು ಮದ್ಯ, ಮೌಢ್ಯದಿಂದ ಹೊರಬರದಿದ್ದರೆ ಶಾಶ್ವತ ಸಮಾಧಿಯಾಗಿ ಬಿಡುತ್ತಿದ್ದೀರಿ. ಹಾಗಾಗಿ ಮದ್ಯ, ಮೌಢ್ಯದಿಂದ ಹೊರಬೇಕು ಎಂದು ತಿಳಿಸಿದರು.

ಸರ್ಕಾರಿ ನೌಕರರ ನಡೆ ಹಳ್ಳಿಯ ಕಡೆ: ರಾಜ್ಯ ಸರ್ಕಾರಿ ಎಸ್ಸಿ, ಎಸ್ಟಿ ನೌಕರರ ಸಮನ್ವಯ ಸಮಿತಿ ಪದಾಧಿಕಾರಿಗಳು, ಸದಸ್ಯರು ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ ಕನಸು ನನಸು ಮಾಡಬೇಕಾದರೆ ಹಳ್ಳಿಗಳ ಕಡೆ ತಿಂಗಳೊಮ್ಮೆಯಾದರು ಹೋಗಬೇಕು. ಸಮಾಜದ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳನ್ನು ಹುಟ್ಟುಹಾಕುವ ಕೆಲಸ ಮಾಡಿದರೆ ಅಂಬೇಡ್ಕರ್ ಅವರು ಜೀವಂತ ಇರುತ್ತಾರೆ ಎಂದರು.



ಚಾಮರಾಜನಗರದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ರಾಜ್ಯ ಸರ್ಕಾರಿ ಎಸ್ಸಿ, ಎಸ್ಟಿ ನೌಕರರ ಸಮನ್ವಯ ಸಮಿತಿ ಜಿಲ್ಲಾ ಘಟಕದ ವತಿಯಿಂದ ನಡೆದ ಅಂಬೇಡ್ಕರ್ ಜನ್ಮದಿನಾಚರಣೆ ಸಮಾರಂಭದಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿರುವ ಸರ್ಕಾರಿ ಅಧಿಕಾರಿಗಳನ್ನು ಸನ್ಮಾನಿಸಲಾಯಿತು.

ಸಾನಿಧ್ಯ ವಹಿಸಿದ್ದ ತಿ.ನರಸೀಪುರದ ಕೂಡ್ಲೂರು ಬೌದ್ಧ ಮಹಾಸಂಸ್ಥಾನ ಬೋಧಿರತ್ನ ಬಂತೇಜಿ ಮಾತನಾಡಿ, ಅಂಬೇಡ್ಕರ್ ಅವರ ಮನೆಯೇ ಗ್ರಂಥಾಲಯವಾಗಿತ್ತು. ಪ್ರತಿದಿನ ಹೆಚ್ಚು ಓದಿನ ಕಡೆಗೆ ಗಮನ ನೀಡುತ್ತಿದ್ದರು. ಅವರಿಗೆ ರಾಜಕೀಯದಲ್ಲಿ ಬೇಸರವಾಗಿ ಬೌದ್ಧ ಧರ್ಮಕ್ಕೆ ಸೇರಿ ಜ್ಞಾನದ ಕಡೆಗೆ ಮನಸ್ಸು ಮಾಡಿದರು. ಅವರು ಬಡಜನರಿಗೆ ನೀಡಿರುವ ಕೊಡುಗೆ ಬಹಳಷ್ಟಿದೆ.

> ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ ಮೀಸಲಾತಿ ಋಣದಿಂದ ನಾನು ಕೂಡ ಶಾಸಕನಾಗಿದ್ದೇನೆ. ಅವರು ಕೊಟ್ಟ ಮೀಸಲಾತಿ ಭಿಕ್ಷೆಯಿಂದ ಜನಪ್ರತಿನಿಧಿಗಳು, ಅಧಿಕಾರಿಗಳು ಅವರ ಆಶಯಗಳಿಗೆ ಪೂರಕವಾಗಿ ಕೆಲಸ ಮಾಡುವ ಮೂಲಕ ಸಮಾಜಕ್ಕೆ ಕೊಡುಗೆ ನೀಡಬೇಕಿದೆ.
> –ಸಿ.ಪುಟ್ಟರಂಗಶೆಟ್ಟಿ, ಶಾಸಕ

ಹೊರದೇಶಗಳಲ್ಲೂ ಅಂಬೇಡ್ಕರ್ ಅವರನ್ನು ಪೂಜಿಸುತ್ತಾರೆ ಎಂದು ಹೇಳಿದರು.

ಕೊಳ್ಳೇಗಾಲದ ಶಿಶು ಅಭಿವೃದ್ಧಿ ಯೋಜನಾಧಿಕಾರಿ ನಂಜಮಣಿ, ಸರ್ಕಾರಿ ಚಾಮರಾಜನಗರ ಎಸ್ಟಿ ನೌಕರರ ಸಮಿತಿ ಅಧ್ಯಕ್ಷ ಎಂ.ಶಿವಕುಮಾರ್ ಕಣ್ಣೇಗಾಲ, ಸರ್ಕಾರಿ ನೌಕರರ ಸಮನ್ವಯ ಸಮಿತಿಯ ಚಾಮರಾಜನಗರ ಘಟಕದ ಪ್ರಧಾನ ಕಾರ್ಯದರ್ಶಿ ಸಿ.ಎಂ. ಶಿವಕುಮಾರ್ ಮಾತನಾಡಿದರು.

ಜಿಲ್ಲಾ ಸಮಿತಿ ಅಧ್ಯಕ್ಷ ಎ.ಶಿವಣ್ಣ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿರುವ ಸರ್ಕಾರಿ ಅಧಿಕಾರಿಗಳನ್ನು ಸನ್ಮಾನಿಸಲಾಯಿತು. ಬೆಂಗಳೂರಿನ ಕರ್ನಾಟಕ ರಾಜ್ಯ ಸರ್ಕಾರಿ ಎಸ್ಸಿ, ಎಸ್ಟಿ ನೌಕರರ ಸಮನ್ವಯ ಸಮಿತಿ ವತಿಯಿಂದ ಪುಟ್ಟಸ್ವಾಮಿ, ಪ್ರಕಾಶ್, ಗೌರವಾಧ್ಯಕ್ಷ ದೇವರಾಜು, ಖಜಾಂಚಿ ರಾಜು, ಲೆಕ್ಕ ಪರಿಶೋಧಕರಾದ ಮಲ್ಲಿಕಾರ್ಜುನ, ಉಪಾಧ್ಯಕ್ಷ ಶಿವಮೂರ್ತಿ, ಸಂಘಟನಾ ಕಾರ್ಯದರ್ಶಿ ರವಿ,ಶಿವಮಲ್ಲಯ್ಯ, ಸಂಘಟಕರು ಮಹದೇವಸ್ವಾಮಿ, ರೇವಣ್ಣ, ಕಾಳಸ್ವಾಮಿ, ಮಹೇಶ್.ಜಿ, ಮಹದೇವಯ್ಯ (ಆಪು ಮೇಸ್ತ್ರು) ನಟರಾಜು, ಸದಸ್ಯರು ಹಾಜರಿದ್ದರು

ಜಿ.ಎಂ. ಕಾಂತರಾಜು ನಿಧನ

ಚಾಮರಾಜನಗರ: ತಾಲೂಕಿನ ಹೊಮ್ಮ ಗ್ರಾಮದ ಲೇಟ್ ಗುರಿಕಾರ್ ಮಹದೇವಪ್ಪ ಅವರ ಮಗ ಜಿ.ಎಂ. ಕಾಂತರಾಜು(57) ಭಾನುವಾರ ನಿಧನರಾದರು.



ಮೃತರು ಪತ್ನಿ, ಸಹೋದರರು, ಸಹೋದರಿ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಸ್ವಗ್ರಾಮ ಹೊಮ್ಮದಲ್ಲಿ ಸೋಮವಾರ ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪಪಂ ಸದಸ್ಯ ಮಲ್ಲಯ್ಯ

ಯಳಂದೂರು: ಪಟ್ಟಣ ಪಂಚಾಯಿತಿ ಸದಸ್ಯ ಹಾಗೂ ಗೌತಮ್ ಬಡಾವಣೆ ನಿವಾಸಿ ಮಲ್ಲಯ್ಯ(75) ಅನಾರೋಗ್ಯದಿಂದ ಭಾನುವಾರ ನಿಧನರಾದರು.



ಮೃತರು ಪತ್ನಿ, ಇಬ್ಬರು ಪುತ್ರಿಯರು, ಇಬ್ಬರು ಪುತ್ರರು ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಮೃತರ ಜಮೀನಿನಲ್ಲಿ ಸೋಮವಾರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಾಮರಾಜನಗರದಲ್ಲಿ ಹುಣ್ಣಿಮೆ ರಥೋತ್ಸವ



ಚಾಮರಾಜನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದಲ್ಲಿ ಹುಣ್ಣಿಮೆ ರಥೋತ್ಸವ ನಡೆಯಿತು.

ಚಾಮರಾಜನಗರ, ಫೆ.25–ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದಲ್ಲಿ ಹುಣ್ಣಿಮೆ ರಥೋತ್ಸವ ನಡೆಯಿತು.

ಶುಭಕೃತ್ ನಾಮಸಂವತ್ಸರ ಮಾಘಶುದ್ಧ ಪೂರ್ಣಿಮೆ ಅಂಗವಾಗಿ ಶ್ರೀ ಚಾಮರಾಜೇಶ್ವರ ಸ್ವಾಮಿಗೆ ಪಂಚಾಮೃತ ಅಭಿಷೇಕ, ಹೂವಿನ ಅಲಂಕಾರ ನೆರವೇರಿಸಲಾಯಿತು. ವಿಶೇಷ ಪೂಜೆ ಬಳಿಕ ರಥೋತ್ಸವ ನಡೆಯಿತು.

ದೇವಸ್ಥಾನ ಮುಂಭಾಗ ಸುಮಾರು 3000ಕ್ಕೂ ಹೆಚ್ಚು ಭಕ್ತರಿಗೆ ಸಾಮೂಹಿಕ ಭೋಜನ ವ್ಯವಸ್ಥೆ ಮಾಡಲಾಗಿತ್ತು. ದೇವಸ್ಥಾನ ಆಗಮಿಕ ದರ್ಶನ್ ಹಾಗೂ ಅರ್ಚಕರಾದ ರಾಮಕೃಷ್ಣ ಭಾರದ್ವಾಜ್, ಅನಿಲ್ ಕುಮಾರ್ ದೀಕ್ಷಿತ್, ಉತ್ಸವ ಸಮಿತಿ ಸದಸ್ಯರು ಭಾಗವಹಿಸಿದ್ದರು.

ಸ್ಕೂಟರ್‌ಗೆ ಗೂಡ್ಸ್ ವಾಹನ ಡಿಕ್ಕಿ: ಸವಾರ ಸಾವು

ಚಾಮರಾಜನಗರ, ಫೆ.25–ಎಳನೀರು ತುಂಬಿದ ಗೂಡ್ಸ್ ವಾಹನ ಸ್ಕೂಟರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಸ್ಕೂಟರ್ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದು, ಮತ್ತೊಬ್ಬ ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಸಂತೆಮರಹಳ್ಳಿ ಸಮೀಪದ ಮಹತಾಳಪುರ ಗೇಟ್ ಬಳಿ ಭಾನುವಾರ ಸಂಜೆ ನಡೆದಿದೆ.

ಕೊಳ್ಳೇಗಾಲ ತಾಲೂಕಿನ ಸಿಲುಕನಪುರ ಗ್ರಾಮದ ರಾಜಣ್ಣ (60) ಮೃತಪಟ್ಟಿದ್ದು, ಯಳಂದೂರು ತಾಲೂಕಿನ ಗೌಡಹಳ್ಳಿ ಗ್ರಾಮದ ರಾಜಣ್ಣ ಗಂಭೀರವಾಗಿ ಗಾಯಗೊಂಡು ನಗರದ ಸಿಮ್ಸ್ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಸಿಲುಕನಪುರ ಗ್ರಾಮದ ರಾಜಣ್ಣ ಹಾಗೂ ಗೌಡಹಳ್ಳಿ ಗ್ರಾಮದ ರಾಜಣ್ಣ ಸಂಬಂಧಿಕರಾಗಿದ್ದು, ಇಬ್ಬರ ಸಂತೆಮರಹಳ್ಳಿಯಿಂದ ಚಾಮರಾಜನಗರಕ್ಕೆ ಸ್ಕೂಟರ್‌ನಲ್ಲಿ ಹೋಗುತ್ತಿದ್ದರು. ಇದೇ ವೇಳೆ ಎಳನೀರು ತುಂಬಿಕೊಂಡು ಚಾಮರಾಜನಗರದಿಂದ ಸಂತೆಮರಹಳ್ಳಿ ಕಡೆಗೆ ಬರುತ್ತಿದ್ದ ವಾಹನ ಮಹತಾಳಪುರ ಗೇಟ್ ಬಳಿ ಡಿಕ್ಕಿ ಹೊಡೆದಿದೆ. ಪರಿಣಾಮ ಸ್ಕೂಟರ್ ಓಡಿಸುತ್ತಿದ್ದ ರಾಜಣ್ಣ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಹಿಂಬದಿ ಕುಳಿತ್ತಿದ್ದ ಗೌಡಹಳ್ಳಿ ಗ್ರಾಮದ ರಾಜಣ್ಣ ಗಂಭೀರವಾಗಿ ಗಾಯಗೊಂಡಿದ್ದಾರೆ.


ಚಾಮರಾಜನಗರ ಸಂಚಾರಿ ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಇಂದು ಮಾರಮ್ಮ ದೇವಸ್ಥಾನ ವಾರ್ಷಿಕೋತ್ಸವ

ಆಲೂರು: ಚಾಮರಾಜನಗರ ತಾಲೂಕಿನ ಆಲೂರು ಗ್ರಾಮದ ಹೊಸಹಳ್ಳಿ ಮಾರಮ್ಮ ದೇವಸ್ಥಾನದ 14ನೇ ವಾರ್ಷಿಕೋತ್ಸವ ಸೋಮವಾರ ನಡೆಯಲಿದೆ.

ಬೆಳಗ್ಗೆ ದೇವರಿಗೆ ವಿವಿಧ ಪೂಜಾ ಕೈಂಕರ್ಯ, ಹೋಮ ಹವನ ಜರುಗಲಿದ್ದು, ನಂತರ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ಹೊಸಹಳ್ಳಿ ಮಾರಮ್ಮ ಒಕ್ಕಲಿನವರು ಹಾಗೂ ಆಲೂರು ಮತ್ತು ಹಂಡ್ರಕಳ್ಳಿ ಮೋಳೆ ಗ್ರಾಮಸ್ಥರು ತಿಳಿಸಿದ್ದಾರೆ.

ಕಾರು ಡಿಕ್ಕಿ : ಬಾಲಕಿ ಸಾವು



ಹನೂರು, ಫೆ.25–ಚಾಲಕಿಯ ನಿರ್ಲಕ್ಷ್ಯತನದಿಂದ ಕಾರು ಡಿಕ್ಕಿ ಹೊಡೆದು, ಆಟವಾಡುತ್ತಿದ್ದ 7 ವರ್ಷದ ಬಾಲಕಿ ಮೃತಪಟ್ಟಿರುವ ಘಟನೆ ಹನೂರು ತಾಲೂಕಿನ ಶ್ರೀ ಮಲೆಮಹದೇಶ್ವರ ಬೆಟ್ಟದಲ್ಲಿ ಭಾನುವಾರ ನಡೆದಿದೆ.

ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಉಳ್ಳಾಂಗ ಕೊಟ್ಟಾಯ ಗ್ರಾಮದ ಸುಶ್ಮಿತಾ(7) ಮೃತಪಟ್ಟ ಬಾಲಕಿ. ತಾತ ಮತ್ತು ಅಜ್ಜಿಯೊಂದಿಗೆ ಬಂದಿದ್ದ ಬಾಲಕಿ ಪಾಲಾರ್ ರಸ್ತೆಯ ಪಾರ್ಕಿಂಗ್‌ನಲ್ಲಿ ಆಟವಾಡುತ್ತಿದ್ದಾಗ ಪಾರ್ಕಿಂಗ್‌ನಲ್ಲಿ ನಿಲ್ಲಿಸಿದ್ದ ಕಾರನ್ನು ಚಾಲಕಿ ಡ್ರೈಸಿ ಏಕಾಏಕಿ ಚಲಾಯಿಸಿದ್ದಾರೆ. ಇದರಿಂದ ಬಾಲಕಿಯ ಎದೆಯ ಮೇಲೆ ಕಾರು ಹರಿದು ಮುಂದೆ ನಿಂತಿದ್ದ ಮತ್ತೊಂದು ಕಾರಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಬಾಲಕಿ ಮೃತಪಟ್ಟಿದ್ದಾಳೆ.

ಮಲೆಮಹದೇಶ್ವರಬೆಟ್ಟದ ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿದ್ದಾರೆ.

4ನೇ ಟೆಸ್ಟ್: ಗೆಲುವಿನ ಸನಿಹದಲ್ಲಿ ಭಾರತ



ರಾಂಚಿ, ಫೆ.25– ರವಿಚಂದ್ರನ್ ಅಶ್ವಿನ್ ಹಾಗೂ ಕುಲದೀಪ್ ಯಾದವ್ ಅವರ ಸ್ಪಿನ್ ಮೋಡಿ ನೆರವಿನಿಂದ ಭಾರತ ಇಂಗ್ಲೆಂಡ್ ವಿರುದ್ಧದ 4ನೇ ಟೆಸ್ಟ್ ಪಂದ್ಯದ ಗೆಲುವಿನ ಸನಿಹದಲ್ಲಿದೆ. ಇಂದು 7 ವಿಕೆಟ್ ನಷ್ಟಕ್ಕೆ 219 ರನ್‌ಗಳಿಂದ ಮೂರನೇ ದಿನದಾಟ ಆರಂಭಿಸಿದ ಭಾರತ ಪ್ರಥಮ ಇನ್ನಿಂಗ್ಸ್‌ನಲ್ಲಿ 307 ರನ್ ಗಳಿಗೆ ಆಲೌಟಾಯಿತು. ಇಂದು ಆಟ ಮುಂದುವರೆಸಿದ ಧ್ರುವ್ ಜುರೆಲ್ 90 ರನ್ ಗಳಿಸಿ ಔಟಾದರೆ, ಕುಲದೀಪ್ ಯಾದವ್ 28, ಆಕಾಶ್ ದೀಪ್ 9 ರನ್ ಗಳಿಸಿದರು.

46 ರನ್‌ಗಳ ಮುನ್ನಡೆಯೊಂದಿಗೆ 2ನೇ ಇನ್ನಿಂಗ್ಸ್ ಆರಂಭಿಸಿದ ಇಂಗ್ಲೆಂಡ್ ಉತ್ತಮ ಪ್ರದರ್ಶನ ನೀಡುವ ಉತ್ಸಾಹದಲ್ಲಿತ್ತು. ಆದರೆ ಭಾರತೀಯ ಸ್ಪಿನ್ ಬೌಲರ್‌ಗಳ ಮಾರಕ ದಾಳಿಗೆ ತತ್ತರಿಸಿ ಕೇವಲ 145 ರನ್‌ಗಳಿಗೆ ಆಲೌಟಾಯಿತು. ತಂಡದ ಪರ ಝಾಕ್ ಕ್ರಾಲಿ 60, ಜಾನಿ ಬೈರ್‌ಸ್ಟೋವ್ 30, ಬೆನ್ ಡಕೆಟ್ 15, ಜೋ ರೂಟ್ 11, ಫೋಕ್ಸ್ 17ರನ್ ಗಳಿಸಿದ್ದು ಬಿಟ್ಟರೆ ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗಲಿಲ್ಲ. ಭಾರತದ ಪರ ರವಿಚಂದ್ರನ್ ಅಶ್ವಿನ್ 5, ಕುಲದೀಪ್ ಯಾದವ್ 4 ಹಾಗೂ ರವೀಂದ್ರ ಜಡೇಜಾ 1 ವಿಕೆಟ್ ಉರುಳಿಸಿದರು.

192 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಭಾರತ ತನ್ನ 2ನೇ ಇನ್ನಿಂಗ್ಸ್‌ನಲ್ಲಿ 3ನೇ ದಿನದ ಅಂತ್ಯಕ್ಕೆ 40 ರನ್ ಗಳಿಸಿದ್ದು, ಗೆಲುವಿಗಾಗಿ ಇನ್ನೂ 152ರನ್ ಗಳಿಸಬೇಕಿದೆ. ತಂಡದ ಪರ ರೋಹಿತ್ ಶರ್ಮಾ 24, ಯಶಸ್ವಿ ಜೈಸ್ವಾಲ್ 16 ರನ್ ಗಳಿಸಿ ನಾಲ್ಕನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ.

ಒಂದನೇ ಪುಟದಿಂದ

ಚುನಾವಣೆ ಮತದಾನದಲ್ಲಿ ಪಾಲ್ಗೊಳ್ಳಿ

ಕೊಡುಗೆಗಳಿಗಾಗಿ ವಂದಿಸಲು ಲಭ್ಯವಾಗುವ ಒಂದು ಅವಕಾಶವಾಗಿದೆ. ಮಹಾಕವಿ ಭಾರತಿಯಾರ್ ಜೀ ಅವರು, ಮಹಿಳೆಯರಿಗೆ ಸಮಾನ ಅವಕಾಶಗಳ ಸಿಕ್ಕಾಗ ಮಾತ್ರ ಜಗತ್ತು ಅಭಿವೃದ್ಧಿ ಹೊಂದುತ್ತದೆ ಎಂದು ಹೇಳಿದ್ದಾರೆ. ಪ್ರತಿಯೊಂದು ಕ್ಷೇತ್ರ ದಲ್ಲೂ ಮಹಿಳೆಯರ ಶಕ್ತಿ ಹೊಸ ಎತ್ತರವನ್ನು ಮುಟ್ಟುತ್ತಿದೆ ಎಂದು ಹೇಳಿದರು.

ಕಳೆದ ವರ್ಷ ಪ್ರಧಾನಿ ಮೋದಿಯವರು ಪ್ರಾರಂಭಿಸಿದ 'ನಮೋ ಡ್ರೋನ್ ದೀದಿ' ಯೋಜನೆ ಬಗ್ಗೆ ಮಾತನಾಡಿದ ಪ್ರಧಾನಿ, ಈ ಉಪಕ್ರಮವು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಮಹಿಳೆಯರ ಜೀವನದಲ್ಲಿ ಬದಲಾವಣೆಗಳನ್ನು ತಂದಿದೆ ಎಂದು ಹೇಳಿದರು. ನಮ್ಮ ದೇಶದಲ್ಲಿ ಹಳ್ಳಿಗಳಲ್ಲಿ ವಾಸಿಸುವ ಮಹಿಳೆಯರೂ ಡ್ರೋನ್‌ಗಳನ್ನು ಹಾರಿಸುತ್ತಾರೆ ಎಂದು ಕೆಲವು ವರ್ಷಗಳ ಹಿಂದೆ ಯಾರು ಭಾವಿಸಿದ್ದರು? ಎಂದು ಪ್ರಶ್ನಿಸಿದ ಅವರು, ಇಂದು ಇದು ಸಾಧ್ಯವಾಗುತ್ತಿದೆ. ಇಂದು ಪ್ರತಿ ಹಳ್ಳಿಯಲ್ಲಿ ಡ್ರೋನ್ ದೀದಿ ಬಗ್ಗೆ ಸಾಕಷ್ಟು ಚರ್ಚೆಯಾಗುತ್ತಿದೆ. ಎಲ್ಲರ ಬಾಯಲ್ಲೂ ನಮೋ ಡ್ರೋನ್ ದೀದಿ ಬಗ್ಗೆ ಕೇಳಿಬರುತ್ತಿದೆ. ಎಲ್ಲರೂ ಅವರ ಬಗ್ಗೆಯೇ ಮಾತನಾಡುತ್ತಿದ್ದಾರೆ ಎಂದರು.

ಬಾಗಲಕೋಟೆಯ ಜಾನಪದ ಗಾಯಕನಿಗೆ ಪ್ರಧಾನಿ ಮೋದಿ ಬಹುಪರಾಕ್: ಪ್ರಧಾನಿ ಮೋದಿ ಬಾಗಲಕೋಟೆ ಮೂಲದ ಗೊಂದಲಿ ಪದ ಹಾಡುಗಾರನ ಗುಣಗಾನ ಮಾಡುವ ಮೂಲಕ ಎಲೆಮರೆಕಾಯಿಯಂತಿದ್ದ ಕಲಾವಿದನನ್ನು ಮುಖ್ಯವಾಹಿನಿಗೆ ತಂದಿದ್ದಾರೆ. ಬಾಗಲಕೋಟೆಯ ನವನಗರದ ನಿವಾಸಿ ಜಾನಪದ ಗಾಯಕ ವೆಂಕಪ್ಪ ಅಂಬಾಜಿ ಸುಗಟೇಕರ್ ಬಗ್ಗೆ ಪ್ರಧಾನಿ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದರು. ಭಾರತದ ಸಂಸ್ಕೃತಿ, ಗಾಯನಗಳಿಗೆ ಲಕ್ಷಾಂತರ ಜನ ಕೊಡುಗೆ ನೀಡಿದ್ದಾರೆ. ಅವರಲ್ಲಿ ಕರ್ನಾಟಕದ ಬಾಗಲಕೋಟೆಯ ವೆಂಕಪ್ಪ ಅಂಬಾಜಿ ಸುಗಟೇಕರ್ ಕೂಡ ಒಬ್ಬರು. ಸಾವಿರಕ್ಕೂ ಅಧಿಕ ಜನಪದ (ಗೊಂದಲಿ) ಹಾಡುಗಳನ್ನು ಹಾಡಿ ಜನಪ್ರಿಯರಾಗಿದ್ದಾರೆ. ಹಾಗೆಯೇ ಸಾವಿರಾರು ಜನರಿಗೆ ಇವರು ಒಂದು ರೂಪಾಯಿಯನ್ನೂ ಪಡೆಯದೆ ಜನಪದ ಹಾಡುಗಳನ್ನು ಹಾಡುವುದನ್ನು ಕಲಿಸಿದ್ದಾರೆ. ಇವರ ಸೇವೆ ನಿಜಕ್ಕೂ ಶ್ಲಾಘನೀಯವಾಗಿದೆ ಎಂದು ಪ್ರಧಾನಿ ಮೋದಿ ಹೊಗಳಿದರು.

ಸರ ಕದ್ದಿದ್ದ ಕಳ್ಳರ ಗ್ಯಾಂಗ್ ಬಂಧನ

ಫೆ.10ರಂದು ಕರ್ನಾಟಕ ಹಾಗೂ ತಮಿಳುನಾಡಿನಿಂದ ಅಯೋಧ್ಯೆಗೆ ಬಾಲರಾಮನ ದರ್ಶನಕ್ಕೆ ತೆರಳಿದ್ದ ಪ್ರವಾಸಿಗರ ಸರಗಳನ್ನು ರಾಮ ಮಂದಿರ ಹಾಗೂ ಹನುಮಾನ್‌ಗಢಿಯಲ್ಲಿ ಕದಿಯಲಾಗಿತ್ತು ಈ ಸಂಬಂಧ ಸಂತ್ರಸ್ತರು ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಹನುಮಾನ್‌ಗಢಿ ಮಂದಿರದ ಬಳಿಯಲ್ಲಿ ಹೆಚ್ಚು ಸರಗಳ್ಳತನದ ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಅತುಲ್ ಕುಮಾರ್ ಸೋನ್‌ಕರ್ ತಿಳಿಸಿದ್ದಾರೆ.

ಸಂಪೂರ್ಣ ಹಕ್ಕು ಮತದಾರರಿಗಿದೆ

ಜಾರಿ ಸಂಸ್ಥೆಗಳಿಗೆ ಸಿಇಸಿ ಸೂಚನೆ ನೀಡಿದ್ದಾರೆ. ಇದೇ ವೇಳೆ, 'ಯುಪಿಐ' ಮೂಲಕ ನಡೆ ಯುವ ಆನ್‌ಲೈನ್ ವಹಿವಾಟುಗಳ ಮೇಲೂ ಕಣ್ಣಿರಿಸುವ ಹೊಣೆಯನ್ನು 'ಭಾರತದ ರಾಷ್ಟ್ರೀಯ ಪಾವತಿ ನಿಗಮ'ಕ್ಕೆ ಚುನಾವಣಾ ಆಯೋಗ ನೀಡಿದೆ. ಕರ್ನಾಟಕದಲ್ಲಿ ಕಾಂಗ್ರೆಸ್ ನೀಡಿದ್ದ ಪಂಚ ಗ್ಯಾರಂಟಿ ಅದನ್ನು ಅಧಿಕಾರಕ್ಕೆ ತರುವಲ್ಲಿ ಮಹತ್ವದ ಪಾತ್ರ ವಹಿಸಿತ್ತು ಎಂದು ವಿಶ್ಲೇಷಣೆ ಮಾಡಲಾಗಿದೆ. ಅದೇ ರೀತಿಯಲ್ಲಿ ಆ ಬಳಿಕ ತೆಲಂಗಾಣ ವಿಧಾನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಇದನ್ನು ಅನುಸರಿಸಿತ್ತು. ಇನ್ನು ಬಿಜೆಪಿಯು ಸಹ ರಾಜಸ್ಥಾನ, ಮಧ್ಯಪ್ರದೇಶಗಳಲ್ಲೂ ಫ್ರೀಬಿಗಳನ್ನು ಘೋಷಿಸಿಯೇ ಅಧಿಕಾರ ಹಿಡಿದಿದೆ ಎಂದು ಚರ್ಚೆಯಾಗಿತ್ತು.

ಪ್ರಜಾಪ್ರಭುತ್ವಕ್ಕೆ ಉಳಿಗಾಲವಿಲ್ಲ

ಈ ಎಲ್ಲಾ ಸಮುದಾಯಗಳು ಮರಳಿ ಗುಲಾಮಗಿರಿಗೆ ದೂಡಲ್ಪಡುತ್ತಾರೆ. ಸಂವಿಧಾನ ಇಲ್ಲದ ಸಂದರ್ಭದಲ್ಲಿ ಶೂದ್ರ, ದಲಿತ ಮತ್ತು ಶ್ರಮಿಕರನ್ನು ಹೇಗೆ ನಡೆಸಿಕೊಳ್ಳಲಾಗುತ್ತಿತ್ತು ಎನ್ನುವುದನ್ನು ಸ್ಮರಿಸಿಕೊಳ್ಳಿ ಎಂದರು. ಕಾರ್ಯಕ್ರಮದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಮಾಜ ಕಲ್ಯಾಣ ಇಲಾಖೆ ಸಚಿವ ಹೆಚ್.ಸಿ.ಮಹದೇವಪ್ಪ ಐಎನ್‌ಡಿಐಎ ಒಕ್ಕೂಟದ ಮುಖಂಡರಾದ ಫಾರೂಕ್ ಅಬ್ದುಲ್ಲಾ, ಸೀತಾರಾಮ್ ಯೆಚೂರಿ ಸೇರಿದಂತೆ 18 ರಾಜ್ಯಗಳ 40 ಮಂದಿ ಮುಖಂಡರು, 12 ಪಕ್ಷಗಳ ನಾಯಕರು ಪಾಲ್ಗೊಂಡಿದ್ದರು.

ಅಧಿವೇಶನ ಬುಧವಾರದವರೆಗೆ ವಿಸ್ತರಣೆ

ಸೋಮವಾರ ಅಧಿವೇಶನವನ್ನು ಸಂತಾಪ ಸೂಚಕವಾಗಿ ಒಂದು ದಿನ ಮುಂದೂಡ ಲಾಗುವುದು. ಮಂಗಳವಾರ ರಾಜ್ಯಸಭಾ ಚುನಾವಣೆ ಇರುವುದರಿಂದ ಕಲಾಪ ನಡೆಯುವುದಿಲ್ಲ. ಹೀಗಾಗಿ ಅಧಿವೇಶನವನ್ನು ಬುಧವಾರದವರೆಗೆ ವಿಸ್ತರಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಮೃತ ವ್ಯಕ್ತಿ ಆಸ್ತಿ ಲಪಟಾಯಿಸಲು ಯತ್ನ

ಪಡುವಾರಹಳ್ಳಿ ನೋಂದಾಯಿತ ಜಿಪಿಎ ಪ್ರತಿನಿಧಿಯಾದ ಎಂ.ಈಶ್ವರಯ್ಯ ಅವರು ಇಲಿಯಾಸ್ ಅಹಮ್ಮದ್ ಅಬೂಬಕರ್ ಕೆಸರೆ ಗ್ರಾಮದ ಸರ್ವೆ ನಂ.609ರ 0.14 ಗುಂಟೆ ಜಮೀನನ್ನು ಇವರಿಗೆ ಕ್ರಯಕ್ಕೆ ನೀಡಿರುವುದು ಕಂಡುಬರುತ್ತದೆ ಹಾಗೂ ನೋಂದಾಯಿತ ಜಿಪಿಎ ಪತ್ರವನ್ನು ಪರಿಶೀಲಿಸಿದ್ದಾಗ ಕುಳ್ಳಯ್ಯ ಅವರು ಎಂ.ಈಶ್ವರಯ್ಯ ಅವರಿಗೆ ಸದರಿ ಜಮೀನಿಗೆ ಸಂಬಂಧಿಸಿದಂತೆ ಮಾರಾಟ ಮಾಡಲು ಮತ್ತು ಇತರ ಅಧಿಕಾರವನ್ನು ನೀಡಿರುವುದು ಕಂಡು ಬರುತ್ತದೆ.

ಆದರೆ ಕುಳ್ಳಯ್ಯ ಅವರ ಹೆಸರಿನಲ್ಲಿ ವಂಶವೃಕ್ಷ ತಿದ್ದುಪಡಿಯಾಗಿರುವುದು ಮೇಲ್ನೋಟಕ್ಕೆ ಕಂಡು ಬಂದ ಕಾರಣ ಆನ್‌ಲೈನ್‌ನಲ್ಲಿ ಪರಿಶೀಲಿಸಿದಾಗ ವಂಶವೃಕ್ಷ ಆರ್‌ಡಿ5018882464752ವು ವಾಸಸ್ಥಳ ದೃಢೀಕರಣ ಪತ್ರಕ್ಕೆ ಸಂಬಂಧಿಸಿದಾಗಿದ್ದು, ಕುಳ್ಳಯ್ಯ ಅವರ ಹೆಸರಿಗೆ ಆರ್‌ಆರ್3082, ಅಂದರೆ, 1930ರ ಆಸುಪಾಸಿನ ಅವಧಿಯಲ್ಲಿ ಖಾತೆಯಾಗಿದ್ದು, ಮೃತ ಕುಳ್ಳಯ್ಯನ ಹೆಸರಿನಲ್ಲಿ ಬೇರೆ ವ್ಯಕ್ತಿ ನೋಂದಾಯಿತ ಸಾಮಾನ್ಯ ಅಧಿಕಾರ ಪತ್ರ(ಜಿಪಿಎ) ಸಂಖ್ಯೆ 188/2021–22 ದಿನಾಂಕ 11–11–21ರಲ್ಲಿ ನೊಂದಣಿ ಮಾಡಿಸಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ ಎಂದಿರುವ ರಕ್ಷಿತ್ ಅವರು, ನಕಲಿ ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಜಮೀನಿನ ಖಾತೆ ದಾಖಲಿಸುವಂತೆ ಅಬೂಬಕರ್ ಮತ್ತು ಇಲಿಯಾಸ್ ಅಹಮ್ಮದ್ ಅರ್ಜಿ ಸಲ್ಲಿಸಿರುವುದು ಧೃಡಪಟ್ಟಿದೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಸದರಿಯವರು ಸಲ್ಲಿಸಿರುವ ವಂಶವೃಕ್ಷ ಪತ್ರಗಳಲ್ಲಿ ಒಂದು ಪಾಂಡವಪುರ ತಾಲೂಕು ಉಪ ತಹಸಿಲ್ದಾರ್ ಪ್ರಮೋದ್ ಎಲ್.ಪಾಟೀಲ್ ಅವರು ನೀಡಿದ್ದಾಗಿದ್ದು, ಮತ್ತೊಂದು ಮೈಸೂರು ತಾಲೂಕಿನ ಕಸಬಾ ಹೋಬಳಿಯ ಉಪ ತಹಸಿಲ್ದಾರ್ ಕೆ.ಎಸ್. ರೂಪ ನೀಡಿದಂತೆಯೂ ನಕಲಿ ವಂಶವೃಕ್ಷವಾಗಿದೆ. ಆದ್ದರಿಂದ ಕುಳ್ಳಯ್ಯ ಅವರ ಹೆಸರಿನಲ್ಲಿ ನೊಂದಣಿ ಮಾಡಿರುವ ವ್ಯಕ್ತಿ ಮತ್ತು ಜಿಪಿಎ ಅಧಿಕಾರವನ್ನು ಪಡೆದಿರುವ ಎಂ. ಈಶ್ವರಯ್ಯ ಹಾಗೂ ಕ್ರಯದಾರರಾದ ಅಬೂಬಕರ್ ಮತ್ತು ಇಲಿಯಾಸ್ ಅಹಮ್ಮದ್ ರವರುಗಳ ವಿರುದ್ಧ ಪ್ರಕರಣ ದಾಖಲಿಸಿ ಬಂಧಿಸುವಂತೆ ಹಾಗೂ ತನಿಖೆ ನಡೆಸುವಂತೆ ಅವರು ದೂರಿನಲ್ಲಿ ಕೋರಿದ್ದಾರೆ. ಸದರಿ ದೂರನ್ನು ಸ್ವೀಕರಿಸಿರುವ ಮೈಸೂರಿನ ಎನ್.ಆರ್.ಠಾಣಾ ಪೊಲೀಸರು ರಕ್ಷಿತ್ ಅವರು ಸಲ್ಲಿಸಿರುವ ದಾಖಲೆ ಪತ್ರಗಳನ್ನು ಕೂಲಂಕುಷವಾಗಿ ಪರಿಶೀಲಿಸುತ್ತಿದ್ದು, ಒಂದೆರಡು ದಿನಗಳಲ್ಲಿ ಆರೋಪಿತರ ವಿರುದ್ಧ ಅಗತ್ಯ ಕಾನೂನು ಕ್ರಮ ಜರುಗಿಸಲು ಮುಂದಾಗಿದ್ದಾರೆ.

ಸಹಕಾರ ಕ್ಷೇತ್ರ ಸೇರಿದಂತೆ ಎಲ್ಲ ಸಂಸ್ಥೆಗಳೂ ಮೇಲ್ವರ್ಗದವರ ಹಿಡಿತದಲ್ಲಿವೆ

ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಅಧ್ಯಕ್ಷ ವಿ.ರಾಜು ವಿಷಾದ

ಮೈಸೂರು,ಫೆ.25(ಎಂಟಿವೈ)– ಸಹಕಾರ ಕ್ಷೇತ್ರ ಸೇರಿದಂತೆ ಬಹುತೇಕ ಎಲ್ಲ ಸಂಸ್ಥೆಗಳೂ ಮೇಲ್ವರ್ಗಗಳ ಹಿಡಿತದಲ್ಲಿವೆ ಎಂದು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾ ಮಂಡಳದ ಅಧ್ಯಕ್ಷ ವಿ.ರಾಜು ವಿಷಾದಿಸಿದ್ದಾರೆ.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಭಾನುವಾರ ಬ್ರಹ್ಮಶ್ರೀ ನಾರಾಯಣಗುರು ಧರ್ಮ ಪರಿಪಾಲನಾ ಸಂಘ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಂಡ್ಯ ಜಿಲ್ಲೆಯ ನಾಗಮಂಗಲದ ಎನ್.ಬಿ.ಕುಮಾರ್ ಅವರಿಗೆ 'ಜೆ.ಪಿ.ನಾರಾಯಣ ಸ್ವಾಮಿ ಸಹಕಾರ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಭಾನುವಾರ ಬ್ರಹ್ಮಶ್ರೀ ನಾರಾಯಣಗುರು ಧರ್ಮ ಪರಿಪಾಲನಾ ಸಂಘ ಆಯೋಜಿಸಿದ್ದ ಜೆ.ಪಿ.ನಾರಾಯಣ ಸ್ವಾಮಿ ಜಯಂತಿ ಹಾಗೂ ಈಡಿಗ, ಬಿಲ್ಲವ, ನಾಮಧಾರಿ, ದೀವರು, ತೀಯಾ, ಇಳವ, ನಾಡರ್, ಜೈಸ್ವಾಲ್, ಗೌಡ್ ಹಾಗೂ ಇತರೆ ಸಮಾಜದ 26 ಒಳಪಂಗಡಗಳ ಸಹಕಾರ ಸಂಘಗಳ ಮುಖಂಡರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಹಿಂದುಳಿದ ವರ್ಗಗಳು ಸ್ವಾವಲಂಬಿಗಳಾಗುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಬೇಕು. ಹಿಂದುಳಿದ ವರ್ಗಗಳಿಗೆ ಅವಕಾಶಗಳು ಸುಲಭವಾಗಿ ಸಿಗುವುದಿಲ್ಲ. ನಾನು ರಾಜ್ಯದಲ್ಲಿ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವನ್ನು ಸ್ಥಾಪಿಸಿದ್ದೇನೆ. ನಾನು ಈ ಸಂಘದ ಸಂಸ್ಥಾಪಕ. ಆದರೆ, ಇದುವರೆಗೂ ನಾನು ಅಧ್ಯಕ್ಷನಾಗಲು ಸಾಧ್ಯವಾಗಲೇ ಇಲ್ಲ. ಸಂಘದ ಆಡಳಿತ ಮಂಡಳಿಯ ಚುನಾವಣೆಯ ಕೊನೆ ಅವಧಿಯಲ್ಲಿರುವುದರಿಂದ, ನನ್ನ ಹಿರಿತನವನ್ನು ಮನಗಂಡು ಕೇವಲ ಒಂದು ವರ್ಷದ ಅವಧಿಗೆ ಸಂಘದ ಅಧ್ಯಕ್ಷನನ್ನಾಗಿ ಎಲ್ಲರೂ ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ. ಚುನಾವಣೆ ನಡೆದಿದ್ದರೆ, ನಾನು ಆಯ್ಕೆಯಾಗಲು ಸಾಧ್ಯವಾಗುತ್ತಿರಲಿಲ್ಲ. ರಾಜ್ಯದಲ್ಲಿ ಬಹುತೇಕ ಎಲ್ಲಾ ಸಂಸ್ಥೆಗಳು ಮೇಲ್ವರ್ಗಗಳ ಹಿಡಿತದಲ್ಲಿರುವುದರಿಂದ ಹಿಂದುಳಿದ ವರ್ಗಗಳಿಗೆ ಅವಕಾಶಗಳು ಮರೀಚಿಕೆಯಾಗುತ್ತಿವೆ. ಈ ನಿಟ್ಟಿನಲ್ಲಿ ಹಿಂದುಳಿದ ವರ್ಗಗಳು ಸಂಘಟಿತರಾಗಿ, ತಮಗೆ ಸಲ್ಲಬೇಕಾದ ಅವಕಾಶಗಳನ್ನು ಗಿಟ್ಟಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಬ್ರಹ್ಮಶ್ರೀ ನಾರಾಯಣ ಗುರು ಧರ್ಮ ಪರಿಪಾಲನಾ ಸಂಘದ ರಾಜ್ಯಾಧ್ಯಕ್ಷ ಸೈದಪ್ಪ ಕೆ.ಗುತ್ತೇದಾರ್ ಮಾತನಾಡಿ, ಈಡಿಗ ಸಮುದಾಯ ಸೇರಿದಂತೆ ಇನ್ನಿತರ ಒಳಪಂಗಡಗಳ ಏಳಿಗೆಗೆ ಸರ್ಕಾರ ಹೆಚ್ಚಿನ ಆದ್ಯತೆ ನೀಡಬೇಕು. ಈ ಹಿಂದೆ ಈಡಿಗ ಸಮುದಾಯ ಈಚಲು ಮರದಿಂದ ನೀರಾ ಇಳಿಸಿ ಸರಬರಾಜು ಮಾಡುತ್ತಿತ್ತು. ನೀರಾ ಆರೋಗ್ಯಕರ ಪೇಯವಾಗಿದ್ದು, ಮಹಿಳೆಯರು, ಟಿಬಿ, ಕ್ಯಾನ್ಸರ್ ನಂತಹ ರೋಗಿಗಳಿಗೂ ಔಷಧೀಯ ಪಾನೀಯದಂತೆ ಇತ್ತು. ಆದರೆ, ಸರ್ಕಾರಗಳು ನೀರಾ ಇಳಿಸಲು ಪ್ರೋತ್ಸಾಹ ನೀಡಲಿಲ್ಲ. ಇದರಿಂದ ಈಡಿಗ ಸಮುದಾಯ ಹಾಗೂ ಇನ್ನಿತರ ಹಿಂದುಳಿದ ವರ್ಗಗಳ ಸಮುದಾಯಗಳು ನೀರಾ ಇಳಿಸುವ ಕಾಯಕದಿಂದ ವಿಮುಖವಾಗುತ್ತಿದೆ. ಆದರೆ, ಮೇಲ್ವರ್ಗಗಳು ನೀರಾ ಇಳಿಸುವ ಕಾರ್ಯದಲ್ಲಿ ತೊಡಗಿವೆ. ಅಲ್ಲದೆ, ನೀರಾ ಉತ್ಪನ್ನಗಳನ್ನು ಮಾರುಕಟ್ಟೆಗೆ ತಂದ ಆದಾಯಗಳಿಸುತ್ತಿದ್ದರೆ, ಈಡಿಗ ಸಮುದಾಯ ನಿರಾಸಕ್ತಿ ತಾಳುತ್ತಿರುವುದು ವಿಪರ್ಯಾಸ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದಾರೆ. ಈ ಹಿಂದೆ ಡಿ.ದೇವರಾಜ ಅರಸ್ ಹಾಗೂ ಎಸ್.ಬಂಗಾರಪ್ಪ, ಎಂ.ವೀರಪ್ಪ ಮೊಯ್ಲಿ ಅವರ ನಂತರ ಹಿಂದುಳಿದ ವರ್ಗಗಳ ನಾಯಕರು ಮುಖ್ಯಮಂತ್ರಿಯಾಗಿರಲಿಲ್ಲ. ಇದೀಗ ಎರಡನೇ ಬಾರಿಗೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಈಡಿಗ, ಬಿಲ್ಲವ, ನಾಮಧಾರಿ, ದೀವರು, ತೀಯಾ, ಇಳವ, ನಾಡರ್, ಜೈಸ್ವಾಲ್, ಗೌಡ್ ಹಾಗೂ ಇತರೆ ಸಮಾಜದ 26 ಒಳಪಂಗಡಗಳ ಅಭಿವೃದ್ಧಿಗಾಗಿ ಯೋಜನೆ ಜಾರಿಗೊಳಿಸಬೇಕು. ಬಜೆಟ್‌ನಲ್ಲಿ ನಮ್ಮ ಸಮುದಾಯಗಳ ಏಳಿಗೆಗಾಗಿ ಅನುದಾನ ಮೀಸಲಿಡುತ್ತಾರೆ ಎಂಬ ನಿರೀಕ್ಷೆಯಲ್ಲಿದ್ದೆವು. ಆದರೆ, ಯಾವುದೇ ಅನುದಾನ ನೀಡಿಲ್ಲ. ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡಿದರೆ, ಹಿಂದುಳಿದ ವರ್ಗದ ಮುಖ್ಯಮಂತ್ರಿ ವಿರುದ್ಧ ನಮ್ಮ ಸಮುದಾಯ ಪ್ರತಿಭಟನೆ ಮಾಡಿದೆ ಎಂಬ ಮಾತು ಬರುತ್ತದೆ ಎಂಬ ಕಾರಣದಿಂದ ಸರ್ಕಾರದ ಗಮನ ಸೆಳೆಯಲು ಈ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.


ಈ ಹಿಂದೆ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಸಮುದಾಯದ 6 ಶಾಸಕರಿದ್ದರು. ಆದರೆ, ಸಮುದಾಯಕ್ಕೆ ಯಾವುದೇ ಪ್ರಯೋಜನವಾಗಲಿಲ್ಲ. ಕೇವಲ ನಾಮಕಾವಸ್ಥೆಗೆ ಪ್ರಾಧಿಕಾರ ರಚಿಸುವುದಾಗಿ ಹೇಳಿದರು. ಆದರೆ, ಅನುದಾನ ನೀಡಲಿಲ್ಲ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಮ್ಮ ಸಮುದಾಯಗಳಿಗೆ ಸಾಮಾಜಿಕ ನ್ಯಾಯ, ಅವಕಾಶ ದೊರಕಿಸಿಕೊಡುವುದರೊಂದಿಗೆ ಸಮುದಾಯ ಏಳಿಗೆಗೆ ಅನುದಾನ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ ಕಳೆದ 45 ವರ್ಷಗಳಿಂದ ವಿವಿಧ ಸಹಕಾರ ಸಂಘಗಳಲ್ಲಿ ವಿವಿಧ ಜವಾಬ್ದಾರಿಯುತ ಹುದ್ದೆಯಲ್ಲಿ ತೊಡಗಿಸಿಕೊಂಡಿರುವ ಮಂಡ್ಯ ಜಿಲ್ಲೆಯ ನಾಗಮಂಗಲದ ಎನ್.ಬಿ.ಕುಮಾರ್ ಅವರಿಗೆ 'ಜೆ.ಪಿ.ನಾರಾಯಣ ಸ್ವಾಮಿ ಸಹಕಾರ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಮಂಗಳೂರಿನ ಕುಳಾಯಿ ಫೌಂಡೇಷನ್ ಅಧ್ಯಕ್ಷೆ ಪ್ರತಿಭಾ ಕುಳಾಯಿ, ಬ್ರಹ್ಮಶ್ರೀ ನಾರಾಯಣ ಗುರು ಧರ್ಮ ಪರಿಪಾಲನಾ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂತರಾಜ್ ಆರ್ಯ, ಎಸ್‌ಎನ್‌ಡಿಪಿ ಅಧ್ಯಕ್ಷ ರಾಜೇಂದ್ರನ್, ವಿವಿಧ ಸಂಘಟನೆಗಳ ಮುಖಂಡರಾದ ಶ್ರೀಕಾಂತ್ ವಿರಾಜ್, ರಾಜಲಕ್ಷ್ಮಿ, ಇ.ಮಂಜುನಾಥ್, ವನೀನ್ ಚಂದ್ರ ಬಿ.ಪೂಜಾರಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ವಿರೋಧಿಗಳಿದ್ದಾಗಲೇ ನಮ್ಮ ಬೆಳವಣಿಗೆ ಸಾಧ್ಯ

ಉಪ್ಪಾರ ಸ್ನೇಹ ಬಳಗದ ಸಮಾರಂಭದಲ್ಲಿ ಶಾಸಕ ಪುಟ್ಟರಂಗಶೆಟ್ಟಿ ಅಭಿಪ್ರಾಯ



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಉಪ್ಪಾರ ಸ್ನೇಹ ಬಳಗದಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಉಪ್ಪಾರ ಸಮುದಾಯದ ಪ್ರಮುಖರನ್ನು ಅಭಿನಂದಿಸಲಾಯಿತು.

ಮೈಸೂರು, ಫೆ.25(ಜಿಎ)–ಸಮಾಜದಲ್ಲಿ ಯಾರೂ ಅಷ್ಟು ಸುಲಭವಾಗಿ ಬೆಳೆಯಲು ಬಿಡುವುದಿಲ್ಲ. ವಿರೋಧಿಗಳಿದ್ದಾಗಲೇ ನಮ್ಮ ಬೆಳವಣಿಗೆ ಸಾಧ್ಯ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದ್ದಾರೆ.

ಉಪ್ಪಾರ ಸ್ನೇಹ ಬಳಗದಿಂದ ನಗರದ ಖಾಸಗಿ ಹೋಟೆಲಿನಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ವಿರೋಧಿಗಳಿಗೆ ನಾವು ಛಲದಿಂದ ಬೆಳೆದು ತೋರಿಸಬೇಕು. ನಾನು ಶಾಸಕ ಸ್ಥಾನಕ್ಕೆ ಟಿಕೆಟ್ ಕೇಳಿದಾಗ ಜಿಲ್ಲಾ ಪಂಚಾಯಿತಿ ನೋಡಿಕೊಳ್ಳಿ ಸಾಕು ಎನ್ನುವ ಮಾತುಗಳು ಕೇಳಿಬಂದಿದ್ದವು. ಆದರೆ, ಛಲ ಬಿಡದೆ ಮುನ್ನುಗ್ಗುವ ಉತ್ಸಾಹ ನಮ್ಮಲ್ಲಿರಬೇಕು. ಛಲ ಮತ್ತು ಉತ್ಸಾಹ ನಮ್ಮಲ್ಲಿ ಇದ್ದರೆ ಎಂತಹ ಸಮಸ್ಯೆಯನ್ನಾದರೂ ಎದುರಿಸಬಹುದು. ನಮ್ಮಲ್ಲಿ ಒಗ್ಗಟ್ಟಿದ್ದರೆ, ನಿಯತ್ತು, ಹೋರಾಟದಿಂದ ಗೆಲುವು ಸಾಧ್ಯ ಎಂದರು.

ಕಾಂಗ್ರೆಸ್‌ನಿಂದ ಮಾತ್ರ ನಮ್ಮ ಸಮುದಾಯದ ಬೆಳವಣಿಗೆ ಸಾಧ್ಯ. ರಾಜಕೀಯ ಸ್ಥಾನ ಪಡೆಯಲು ನಾವೆಲ್ಲ ಒಗ್ಗಟ್ಟಾಗಿ ಹೋರಾಟ ಮಾಡಬೇಕು. ಉತ್ತರ ಕರ್ನಾಟಕದಲ್ಲಿ ಸಮುದಾಯದ ಸಮಸ್ಯೆ ಭೀಕರವಾಗಿದೆ. ಮೈಸೂರು ಭಾಗದಲ್ಲಿ ಸ್ವಲ್ಪ ರಾಜಕೀಯ ಮತ್ತು ಸಾಮಾಜಿಕ ಅಭಿವೃದ್ಧಿ ಸಾಧಿಸಿದ್ದೇವೆ. ಎಂಎಸ್‌ಐಎಲ್ ಅಧ್ಯಕ್ಷ ಸ್ಥಾನ ನೀಡಿದಾಗ, ಕೇಂದ್ರದಿಂದ ಕರೆ ಮಾಡಿ ತಿರಸ್ಕರಿಸದಂತೆ ಒತ್ತಾಯಿಸಿದರು. ಅವಕಾಶ ಸಿಗುವುದಿಲ್ಲ ಎಂದು ಎಚ್ಚರಿಸಿದರು. ಸಮಾಜದ ಸೇವೆಗೆ ಎಲ್ಲವೂ ಮುಖ್ಯ ಎಂದು ತೆಗೆದುಕೊಂಡೆ ಎಂದು ತಿಳಿಸಿದರು.

ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ ಮಾತನಾಡಿ, ಸಣ್ಣ ಸಮುದಾಯಗಳು ಪ್ರಾತಿ ಹೊಂದಲು ರಾಜಕೀಯ ಶಕ್ತಿ ಅಗತ್ಯ. ರಾಜಕಾರಣಕ್ಕೆ ನಮ್ಮವರು ಹೆಚ್ಚಿನ ಸಂಖ್ಯೆಯಲ್ಲಿ ಬರಬೇಕು. ಪುಟ್ಟರಂಗಶೆಟ್ಟಿ ಅವರು ಸತತ ನಾಲ್ಕನೇ ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಸಮುದಾಯದ ನಾಯಕನಿಗೆ ಸಚಿವ ಸ್ಥಾನ ನೀಡಬೇಕು. ಎಲ್ಲರೂ ಈ ಕುರಿತು ಧ್ವನಿಯೆತ್ತಬೇಕು ಎಂದು ಹೇಳಿದರು.

ರಾಜ್ಯ ಉಪ್ಪಾರ ಸಂಘದ ಪ್ರಧಾನ ಕಾರ್ಯದರ್ಶಿ ಯು.ವೆಂಕೋಬ ಮಾತನಾಡಿ, ನಮ್ಮಲ್ಲಿನ ಒಡಕಿನಿಂದಾಗಿ ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ತಪ್ಪಿ ಹೋಗಿದೆ. ಅನೇಕ ಸಂಘಗಳನ್ನು ಮಾಡಿಕೊಂಡು ಅವಕಾಶ ವಂಚಿತರಾಗಬೇಡಿ, ಉಪ್ಪಾರರು ಒಂದಾಗುವ ಅನಿವಾರ್ಯತೆ ಇದೆ ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಸಮುದಾಯದ ಪ್ರಮುಖರಾದ ನಟರಾಜು, ನಾಗರಾಜು, ಮಹದೇವಸ್ವಾಮಿ, ಶಿವನಂಜಶೆಟ್ಟಿ, ಶಿವಕುಮಾರ್, ಕೆ.ಎಂ.ಶಿವಕುಮಾರಸ್ವಾಮಿ ಅವರನ್ನು ಸನ್ಮಾನಿಸಲಾಯಿತು. ಮಳವಳ್ಳಿ ತಾಲೂಕು ಅಯ್ಯನ ಸರಗೂರು ಮಠದ ಮಹದೇವಸ್ವಾಮಿ, ಸಾಹಿತಿ ಸಿ.ಚಾಮಶೆಟ್ಟಿ, ಸಂಘದ ಉಪಾಧ್ಯಕ್ಷ ಎಸ್.ಎನ್.ಕಲ್ಲೇಶ್, ರಾಜ್ಯ ಉಪ್ಪಾರ ಅಭಿವೃದ್ಧಿ ನಿಗಮ ಮಂಡಳಿ ಮಾಜಿ ಅಧ್ಯಕ್ಷ ಶಿವಕುಮಾರ್ ಉಪಸ್ಥಿತರಿದ್ದರು.



ಐಸಿಐಸಿಐ ಫೌಂಡೇಷನ್ ವತಿಯಿಂದ ಮೈಸೂರಿನ ಪಿಕೆಟಿಬಿ ಮತ್ತು ಸಿಟಿ ಆಸ್ಪತ್ರೆಗೆ ಅಲ್ಟ್ರಾಸೌಂಡ್ ಮತ್ತು ತೋರಾಸ್ಕೋಪ್ ಯಂತ್ರವನ್ನು ಕೊಡುಗೆಯಾಗಿ ನೀಡಲಾಯಿತು. ಎಂಎಂಸಿ ಅಂಡ್ ಆರ್‌ಐ ಡೀನ್ ಅಂಡ್ ಡೈರೆಕ್ಟರ್ ಡಾ|| ಕೆ.ಆರ್. ದಾಕ್ಷಾಯಿಣಿ, ವೈದ್ಯಕೀಯ ಅಧೀಕ್ಷಕ ಡಾ|| ಸಿ.ಪ್ರಶಾಂತ್, ಸಮತ, ಐಸಿಸಿಸಿಐ ಫೌಂಡೇಷನ್ ಪ್ರಮುಖರಾದ ಮಹದೇವಸ್ವಾಮಿ, ಸತ್ಯಶ್ರೀ, ಮಂಜುನಾಥ, ಮಜಿರ್ ಜಾಕೀರ, ಜನಾರ್ಧನ, ಶುಶ್ರೂಷಕರಾದ ವನಜಾಕ್ಷಿ, ನಂದಿನಿ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು

ವಿದ್ಯಾರ್ಥಿ ಮುತ್ತುರಾಜ್ ಸಾವು ಪ್ರಕರಣ ಸಿಬಿಐಗೆ ವಹಿಸಲು ಶಾಸಕ ಜಿ.ಡಿ.ಹರೀಶ್‌ಗೌಡ ಸಹಮತ

ಹುಣಸೂರು, ಫೆ.25– ತಾಲೂಕಿನ ದಾಸನಪುರ ಗ್ರಾಮದ ವಿದ್ಯಾರ್ಥಿ ಮುತ್ತುರಾಜ್ ಅಸಹಜ ಸಾವು ಪ್ರಕರಣದ ತನಿಖೆಯನ್ನು ಎಸ್‌ಐಟಿ ಅಥವಾ ಸಿಬಿಐಗೆ ವಹಿಸಬೇಕೆಂಬ ಈಡಿಗ ಸಮುದಾಯದ ಶ್ರೀಗಳಾದ ಡಾ.ಪ್ರಣವಾನಂದ ಸ್ವಾಮೀಜಿಯವರ ಒತ್ತಾಯಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ ಎಂದು ಶಾಸಕ ಜಿ.ಡಿ.ಹರೀಶ್ ಗೌಡ ತಿಳಿಸಿದ್ದಾರೆ.



ಮೃತ ವಿದ್ಯಾರ್ಥಿ ಮನೆಗೆ ಭಾನುವಾರ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದ ಶಾಸಕರು, ವೈಯಕ್ತಿಕವಾಗಿ ಆರ್ಥಿಕ ನೆರವು ನೀಡಿದರು.


ಬಳಿಕ ಮಾತನಾಡಿದ ಅವರು, ಸಿಬಿಐ ಅಥವಾ ಎಸ್‌ಐಟಿ ಈ ಪ್ರಕರಣದ ತನಿಖೆ ನಡೆಸಬೇಕೆಂದು ಶ್ರೀಗಳು ಒತ್ತಾಯಿಸಿದ್ದಾರೆ. ಈ ಬಗ್ಗೆ ದೂರವಾಣಿ ಮೂಲಕವೂ ನನ್ನೊಂದಿಗೆ ಮಾತನಾಡಿದ್ದಾರೆ. ಮುತ್ತುರಾಜ್ ಪೋಷಕರಿಗೆ 50 ಲಕ್ಷ ರೂ. ಪರಿಹಾರ ಹಾಗೂ ಆತನ ತಂದೆ ರವಿಕುಮಾರ್‌ಗೆ ಸರ್ಕಾರಿ ಉದ್ಯೋಗ ನೀಡಬೇಕೆಂದು ಒತ್ತಾಯಿಸಿದ್ದಾರೆ. ಶ್ರೀಗಳ ಆಗ್ರಹಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ. ಸದನದಲ್ಲೂ ಈ ಬಗ್ಗೆ ಪ್ರಸ್ತಾಪಿಸುತ್ತೇನೆ. ಈಡಿಗ ಸಮಾಜದ ನಿಯೋಗ ಮುಖ್ಯಮಂತ್ರಿಗಳನ್ನು ಭೇಟಿ ಮಾಡಲು ಉದ್ದೇಶಿಸಿದ್ದು, ನಾನೂ ಜೊತೆಗೂಡುತ್ತೇನೆ. ಕುಟುಂಬಕ್ಕೆ ಸರ್ಕಾರದ ಎಲ್ಲಾ ಸವಲತ್ತುಗಳನ್ನೂ ದೊರಕಿಸಲು ಕ್ರಮ ವಹಿಸುತ್ತೇನೆ. ಎಂದಿಗೂ ನೊಂದ ಕುಟುಂಬಕ್ಕೆ ಬೆಂಬಲವಾಗಿರುತ್ತೇನೆ ಎಂದು ತಿಳಿಸಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಗೆ ನಿತ್ಯ ಪುಷ್ಪಾರ್ಚನೆ



ಮೈಸೂರು, ಫೆ. 25(ಆರ್‌ಕೆ)– ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (MMC & RI) ಆವರಣದಲ್ಲಿ ಹಳೇ ವಿದ್ಯಾರ್ಥಿಗಳಿಂದ ಪ್ರತಿಷ್ಠಾಪಿಸಿರುವ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಗೆ ಪ್ರತೀನಿತ್ಯ ಹೂವಿನ ಹಾರ ಧಾರಣೆ ಮಾಡಲಾಗುತ್ತಿದೆ. ಸಂಸ್ಥೆಯ ಡೀನ್ ಅಂಡ್ ಡೈರೆಕ್ಟರ್ ಡಾ. ಕೆ.ಆರ್. ದಾಕ್ಷಾಯಿಣಿ ಅವರ ಸಲಹೆಯಂತೆ ಸಿಬ್ಬಂದಿಗಳು ನಿತ್ಯ ಪ್ರತಿಮೆ ಬಳಿ ಸ್ವಚ್ಛಗೊಳಿಸಿ ಹಳೇ ಹಾರ ತೆಗೆದು ಹೊಸ ಹಾರ ಹಾಕುತ್ತಿದ್ದಾರೆ. ಕಾಲೇಜಿನ ವೈದ್ಯಕೀಯ ಮಹಿಳಾ ವಿದ್ಯಾರ್ಥಿಗಳು ಪ್ರತಿಮೆಗೆ ಕೈ ಮುಗಿದು ಪಾದದ ಬಳಿ ಸಮರ್ಪಿಸುವ ಬಿಡಿ ಗುಲಾಬಿ ಹೂಗಳನ್ನು ತೆಗೆದು ಭಕ್ತಿಪೂರ್ವಕವಾಗಿ ಇರಿಸಿ ತರಗತಿಗೆ ಹಾಜರಾಗುತ್ತಿರುವುದು ವಿಶೇಷ ಎನಿಸಿದೆ.

ಕೇವಲ ಜಯಂತಿಗಳು, ವಿಶೇಷ ದಿನಗಳಂದು ಮಹಾತ್ಮರ ಪ್ರತಿಮೆಗಳನ್ನು ಸ್ವಚ್ಛಗೊಳಿಸಿ ಪುಷ್ಪಾರ್ಚನೆ ಮಾಡಲಾಗುತ್ತದೆ. ಉಳಿದ ದಿನಗಳಲ್ಲಿ ಅವುಗಳತ್ತ ಯಾರೂ ಸುಳಿಯುವುದೂ ಇಲ್ಲ. ಆದರೆ, ಸಾಧನೆಯ ಹರಿಕಾರರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಗೆ ಪ್ರತೀನಿತ್ಯ ಹೂವಿನ ಹಾರ ಸಮರ್ಪಿಸುವ ಮೂಲಕ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯು ಸಂಸ್ಥಾಪಕರಿಗೆ ಗೌರವ ಸಲ್ಲಿಸುತ್ತಿರುವುದನ್ನು ಹಳೇ ವಿದ್ಯಾರ್ಥಿಗಳು ಸ್ವಾಗತಿಸಿದ್ದಾರೆ.



ಜಯಪುರ ಸಮೀಪದ ಹಾರೋಹಳ್ಳಿ(ಜ) ಅಂಗನವಾಡಿ ಕೇಂದ್ರಕ್ಕೆ ಸಮಾಜ ಸೇವಕ ಎಸ್.ಶ್ರೀಕಾಂತ್ 30ಸಾವಿರ ಮೌಲ್ಯದ ಡೆಸ್ಕ್, ಟೇಬಲ್ ಮತ್ತು ಬೀರು ಕೊಡುಗೆ ನೀಡಿದರು. ಈ ವೇಳೆ ಅಂಗನವಾಡಿ ಕಾರ್ಯಕರ್ತೆ ಅನಿತಾ, ಶ್ರೀಕಾಂತ್ ಅವರನ್ನು ಅಭಿನಂದಿಸಿದರು. ಅಖಿಲ ಕರ್ನಾಟಕ ಶ್ರೀಕಾಂತ್ ಅಭಿಮಾನಿಗಳ ಬಳಗದ ಅಧ್ಯಕ್ಷ ಸಂತೋಷ್ ಕುಮಾರ್, ಮುಖಂಡ ಶಿವರಾಜು, ಹಾರೋಹಳ್ಳಿ ಗ್ರಾಪಂ ಅಧ್ಯಕ್ಷೆ ಜ್ಯೋತಿ, ಮಾಜಿ ಅಧ್ಯಕ್ಷೆ ಚೆಲುವಮ್ಮ, ಅಂಗನವಾಡಿ ಸಹಾಯಕಿ ಶಿಲ್ಪಾ ಉಪಸ್ಥಿತರಿದ್ದರು.

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆ

10,300 ಅಭ್ಯರ್ಥಿಗಳ ಪೈಕಿ 4,075 ಮಂದಿ ಗೈರು

ಮೈಸೂರು, ಫೆ. 25(ಆರ್‌ಕೆ)– ಮೈಸೂರಿನ 21 ಕೇಂದ್ರಗಳಲ್ಲಿ ಇಂದು ನಡೆದ ಸಿವಿಲ್ ಪೊಲೀಸ್ ಕಾನ್‌ಸ್ಟೇಬಲ್‌ಗಳ ನೇಮಕಾತಿ ಪರೀಕ್ಷೆಗೆ 6,225 ಮಂದಿ ಅಭ್ಯರ್ಥಿಗಳು ಹಾಜರಾಗಿದ್ದರು.



ಒಟ್ಟು 10,300 ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದರಾದರೂ, ಆ ಪೈಕಿ ಕೇವಲ 6,225 ಮಂದಿ ಹಾಜರಾಗಿ ಲಿಖಿತ ಪರೀಕ್ಷೆ ಎದುರಿಸಿದ್ದು, 4,075 ಅಭ್ಯರ್ಥಿಗಳು ಗೈರು ಹಾಜರಾದರು. ಬೆಳಗ್ಗೆ 11ರಿಂದ ಮಧ್ಯಾಹ್ನ 12.30 ಗಂಟೆವರೆಗೆ ನಡೆದ ಪರೀಕ್ಷೆಗೆ ಭಾರಿ ಪೊಲೀಸ್ ಭದ್ರತೆ ಒದಗಿಸಿ ಕಟ್ಟೆಚ್ಚರ ವಹಿಸಲಾಗಿತ್ತು.

ಪ್ರತೀ ಪರೀಕ್ಷಾ ಕೇಂದ್ರಗಳಲ್ಲಿ 20 ಅಭ್ಯರ್ಥಿಗೊಬ್ಬರಂತೆ ಕೊಠಡಿ ಮೇಲ್ವಿಚಾರಕರು, ಓರ್ವ ಪ್ರಾಂಶುಪಾಲ, ಕಚೇರಿ ಸಹಾಯಕರು ಹಾಗೂ ಮಿನಿಸ್ಟೀರಿಯಲ್ ಸಿಬ್ಬಂದಿಯನ್ನು ನೇಮಿಸಿ ಯಾವುದೇ ಅಕ್ರಮಗಳು ನಡೆಯದಂತೆ ಕಟ್ಟುನಿಟ್ಟಾಗಿ ಪಾರದರ್ಶಕತೆಯಿಂದ ಪರೀಕ್ಷೆ ನಡೆಸಲಾಯಿತು.

ನೋಂದಾಯಿತ ಎಲ್ಲಾ ಅಭ್ಯರ್ಥಿಗಳ ಬಯೋಮೆಟ್ರಿಕ್ ಮಾಹಿತಿ ಪಡೆದು ಕೇಂದ್ರಕ್ಕೆ ಪ್ರವೇಶ ನೀಡಿ ಸಿಸಿ ಕ್ಯಾಮರಾ ಕಣ್ಗಾವಲಿನಲ್ಲಿ ನಡೆದ ಪರೀಕ್ಷಾ ಪ್ರಕ್ರಿಯೆಗೆ ಓಎಂಆರ್ ಶೀಟ್ ತಂದು ವಾಪಸ್ ಖಜಾನೆಗೆ ಹಿಂದಿರುಗುವವರೆಗೂ ವಿಡಿಯೋ ರೆಕಾರ್ಡ್ ಮಾಡಲಾಯಿತು.

ಅರ್ಧ ತೋಳಿನ ಶರ್ಟ್, ಚಪ್ಪಲಿ ತೊಟ್ಟು ಬರುವುದು ಕಡ್ಡಾಯ ಎಂದು ಮೊದಲೇ ಪ್ರಕಟಿಸಿದ್ದರಿಂದ ಯಾರೂ ತುಂಬು ತೋಳಿನ ಶರ್ಟ್ ಧರಿಸಿ ಬಂದಿರಲಿಲ್ಲ. ಮಹಿಳಾ ಅಭ್ಯರ್ಥಿಗಳು ಮಾಂಗಲ್ಯ ಸರ ಮತ್ತು ಕಾಲುಂಗುರ ಹೊರತುಪಡಿಸಿ ಬೇರೆ ಆಭರಣ ತೊಟ್ಟು ಪರೀಕ್ಷೆಗೆ ಬರುವುದನ್ನು ನಿಷೇಧಿಸಲಾಗಿತ್ತಲ್ಲದೇ, ಇಎನ್‌ಟಿ ತಜ್ಞರು ಪ್ಯಾರಾ ಮೆಡಿಕಲ್ ಸಿಬ್ಬಂದಿ ಅಭ್ಯರ್ಥಿಗಳ ಕಿವಿ, ಕುತ್ತಿಗೆ ಭಾಗ ಪರೀಕ್ಷಿಸಿ ಬ್ಲೂಟೂತ್ ಹಾಗೂ ಇನ್ನಿತರ ಉಪಕರಣ ಅಳವಡಿಸಿಕೊಳ್ಳುವುದನ್ನು ತಪಾಸಣೆ ಮಾಡಿದರು.

ಮೊಬೈಲ್ ಫೋನ್, ವಾಚು, ಉಂಗುರ, ಶೂ, ಆಭರಣ ಇತ್ಯಾದಿ ಬೆಲೆಬಾಳುವ ವಸ್ತು ಡೆಪಾಸಿಟ್ ಮಾಡುವುದನ್ನು ಕಾಯಲು ಪ್ರತೀ ಪರೀಕ್ಷಾ ಕೇಂದ್ರಗಳಲ್ಲಿ ಸುರಕ್ಷತಾ ವ್ಯವಸ್ಥೆ ಮಾಡಲಾಗಿತ್ತು.

ಇದೇ ಪ್ರಥಮ ಬಾರಿ ಓಎಂಆರ್ ಶೀಟ್‌ಗಳಲ್ಲಿ ಅಭ್ಯರ್ಥಿಗಳ ನೋಂದಣಿ ಸಂಖ್ಯೆ ಮುದ್ರಿಸಲಾಗಿತ್ತಲ್ಲದೇ, ಖಾಲಿ ಬಾಕ್ಸ್‌ನಲ್ಲೂ ಆ ಅಭ್ಯರ್ಥಿಯು ನೋಂದಣಿ ಸಂಖ್ಯೆ ಬರೆಯಬೇಕೆಂದು ಕಡ್ಡಾಯಗೊಳಿಸಲಾಗಿತ್ತು. ಪರೀಕ್ಷಾ ಕರ್ತವ್ಯಕ್ಕೆ ನಿಯೋಜನೆಗೊಂಡ ಅಧಿಕಾರಿಗಳು, ಸಿಬ್ಬಂದಿಗಳಿಂದ "ಸದರಿ ಕೇಂದ್ರದಲ್ಲಿ ನಮ್ಮ ಮಕ್ಕಳು, ಸಂಬಂಧಿಗಳು ಪೊಲೀಸ್ ಕಾನ್‌ಸ್ಟೇಬಲ್ ಪರೀಕ್ಷೆ ಬರೆಯುತ್ತಿಲ್ಲ" ಎಂದು ಮುಚ್ಚಳಿಕೆ ಬರೆಸಿಕೊಳ್ಳಲಾಗಿತ್ತು.

ಪ್ರತೀ ಪರೀಕ್ಷಾ ಕೇಂದ್ರಗಳ ಮುಂದೆ "ಪಾರದರ್ಶಕತೆಯಿಂದ ಕಟ್ಟುನಿಟ್ಟಾಗಿ ಸಿವಿಲ್ ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆ ನಡೆಸಲಾಗುತ್ತಿದೆ. ಆದಾಗ್ಯೂ ಹಣ ಪಡೆದು ಅಕ್ರಮ, ಭ್ರಷ್ಟಾಚಾರದಲ್ಲಿ ತೊಡಗಿದ ವಿಷಯ ತಿಳಿದುಬಂದಲ್ಲಿ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತರಬೇಕು" ಎಂಬ ಫಲಕ ಅಳವಡಿಸಲಾಗಿತ್ತು.

ಒಟ್ಟಾರೆ ನಗರ ಪೊಲೀಸ್ ಆಯುಕ್ತ ಬಿ. ರಮೇಶ್, ಡಿಸಿಪಿಗಳಾದ ಎಂ. ಮುತ್ತುರಾಜ್, ಎಸ್. ಜಾಹ್ನವಿ, ಎಸಿಪಿಗಳಾದ ಎಸ್.ಜಿ. ಗಜೇಂದ್ರಪ್ರಸಾದ್, ಶಾಂತಮಲ್ಲಪ್ಪ, ಸಂದೇಶ್‌ಕುಮಾರ್ ಅವರ ಮೇಲ್ವಿಚಾರಣೆಯಲ್ಲಿ ಪ್ರತೀ ಕೇಂದ್ರಕ್ಕೆ ಒಬ್ಬರು ಇನ್ಸ್‌ಪೆಕ್ಟರ್, ಇಬ್ಬರು ಸಬ್ ಇನ್ಸ್‌ಪೆಕ್ಟರ್‌ಗಳು ಕಟ್ಟುನಿಟ್ಟಾಗಿ ಯಾವುದೇ ಗೊಂದಲವಿಲ್ಲದಂತೆ ಶಾಂತಿಯುತವಾಗಿ ಪರೀಕ್ಷೆ ಮುಕ್ತಾಯಗೊಂಡಿತು.

ಪರಸ್ಪರ ಅರ್ಥ ಮಾಡಿಕೊಂಡರೆ ಮಾತ್ರ ಸುಖೀ ದಾಂಪತ್ಯ

ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ



ನೂತನ ದಾಂಪತ್ಯಕ್ಕೆ ಕಾಲಿಟ್ಟ ದಂಪತಿಗಳನ್ನು ಸುತ್ತೂರು ಶ್ರೀಗಳು ಆಶೀರ್ವದಿಸಿದರು.

ಸರಗೂರು, ಫೆ.25– ಪರಸ್ಪರ ಅರ್ಥ ಮಾಡಿಕೊಂಡರೇ ಮಾತ್ರ ಸುಖೀ ದಾಂಪತ್ಯ ಸಾಧ್ಯ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಬಿಡಗಲು ಪಡವಲು ವಿರಕ್ತ ಮಠದಲ್ಲಿ ಭಾನುವಾರ ಶ್ರೀಕಾಳ ಒಡೆಯ ಗುರುಗಳ ಆರಾಧನೆ, ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ವೀರಶೈವ ಲಿಂಗಾಯತ ಮಠಾಧಿಪತಿಗಳ ಗೋಷ್ಠಿಯ ಸಹಯೋಗದಲ್ಲಿ ನಡೆದ ವೀರಶೈವ ಲಿಂಗಾಯತ ವಧು–ವರರ ಉಚಿತ ಸಾಮೂಹಿಕ ವಿವಾಹ ಮತ್ತು ಧಾರ್ಮಿಕ ಸಭೆಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಸಾಮರಸ್ಯ ದಾಂಪತ್ಯದಿಂದ ಕುಟುಂಬದ ಏಳಿಗೆ ಸಾಧ್ಯ ಎಂದ ಅವರು, ಯಶಸ್ವಿ ಬದುಕಿನೊಂದಿಗೆ ಸಮಾಜದ ಶ್ಲಾಘನೆಗೆ ಪಾತ್ರರಾಗಬಹುದು. ಶರಣರಾದ ಅಲ್ಲಮ ಪ್ರಭುಗಳು ಹೇಳಿದಂತೆ ಉಭಯರ ದೃಷ್ಟಿಯಲ್ಲಿ ಏಕದೃಷ್ಟಿ ಇದ್ದಾಗ ಯಾವುದೇ ಸಮಸ್ಯೆಗೂ ಪರಿಹಾರ ಕಂಡುಕೊಳ್ಳಬಹುದು. ದಾಂಪತ್ಯ ಜೀವನಕ್ಕೆ ಕಾಲಿಟ್ಟವರು ಈ ವಿಚಾರ ಅರ್ಥ ಮಾಡಿಕೊಳ್ಳಬೇಕು ಎಂದರು.

ಧಾರ್ಮಿಕ ಹಾಗೂ ಆಧ್ಯಾತ್ಮಿಕ ಕಾರ್ಯಕ್ರಮಗಳೊಂದಿಗೆ ಮಠ ಮಾನ್ಯಗಳು ಸಾಮಾಜಿಕ ಸೇವಾ ಕಾರ್ಯಗಳಿಗೂ ಹೆಚ್ಚು ಆದ್ಯತೆ ನೀಡುತ್ತಿವೆ. ಪ್ರತಿಯೊಬ್ಬರೂ ಯೋಗ, ಧ್ಯಾನ ಹಾಗೂ ಪ್ರಾಣಾಯಾಮಗಳಿಗೆ ಹೆಚ್ಚಿನ ಗಮನ ನೀಡಬೇಕು. ಆರೋಗ್ಯದ ದೃಷ್ಟಿಯಿಂದ ಇವುಗಳನ್ನು ಅನುಸರಿಸುವುದು ಅಗತ್ಯ ಎಂದರು.

ಬೆಟ್ಟದಪುರದ ಸಲಿಲಾಖ್ಯಾ ಮಠದ ಶ್ರೀಚನ್ನಬಸವ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಪ್ರಸ್ತುತ ಮೂಢ ನಂಬಿಕೆಗೆ ಬಿಟ್ಟು, ದಂದುವೆಚ್ಚಗಳಿಗೆ ಕಡಿವಾಣ ಹಾಕಿ ಸಾಮೂಹಿಕ ವಿವಾಹಕ್ಕೆ ಪ್ರೋತ್ಸಾಹ ನೀಡಬೇಕು ಎಂದರು.

ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿ, ಮಠಗಳು ಜಾತಿ, ಮತ ಭೇದವಿಲ್ಲದೇ ಬಡ ಮಕ್ಕಳಿಗೆ ಅನ್ನ, ಅಕ್ಷರ, ವಸತಿ ದಾಸೋಹ ಮಾಡುತ್ತಿರುವುದು ಶ್ಲಾಘನೀಯ ಎಂದರು. ಸಮಾಜ ಸೇವಕ ಯು.ಎಸ್. ಶೇಖರ್ ಮಾತನಾಡಿ, ಮಠದಲ್ಲಿ ಆಯೋಜಿಸಿರುವ ಸಾಮೂಹಿಕ ವಿವಾಹ ಗ್ರಾಮೀಣ ಜನರಿಗೆ ಅನುಕೂಲವಾಗಿದೆ. ಇಂತಹ ಸೇವಾ ಕಾರ್ಯದಲ್ಲಿ ಮಠ ತೊಡಗಿಸಿಕೊಂಡಿರುವುದು ಸಂತಸದ ವಿಚಾರ. ಭಗವಂತ ಕೊಟ್ಟಿರುವುದರಲ್ಲಿ ಅಲ್ಪ ಪ್ರಮಾಣವನ್ನು ಭಗವಂತನಿಗೆ ನೀಡಿದ್ದೇನೆ. ಭಕ್ತರಿಗಾಗಿ ಶ್ರೀವೀರಭದ್ರೇಶ್ವರ ದೇವಾಲಯ ನಿರ್ಮಿಸಲಾಗಿದೆ ಎಂದರು. ಬಿಡಗಲು ವಿರಕ್ತ ಮಠದ ಮಹದೇವಸ್ವಾಮೀಜಿ, ದೇವನೂರು ಮಠದ ಮಹಾಂತ ಸ್ವಾಮೀಜಿ, ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಹಂಚೀಪುರದ ತೋಂಟದಾರ್ಯಸ್ವಾಮೀಜಿ, ಪುರ ಮಠದ ಚಂದ್ರಶೇಖರ ಸ್ವಾಮೀಜಿ, ಮಾದಾಪುರ ಮಠದ ಮಲ್ಲಿಕಾರ್ಜುನ ಸ್ವಾಮೀಜಿ ಸೇರಿದಂತೆ ವಿವಿಧ ಮಠಾಧೀಶರು ಆಶೀರ್ವಚನ ನೀಡಿದರು.

ಈ ವೇಳೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಡಿ.ಜಿ.ಶಿವರಾಜು, ಕೋಟೆ ತಾಲೂಕು ಅಧ್ಯಕ್ಷ ಬಸವರಾಜು, ಕಸಾಪ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ, ಗುರುಸ್ವಾಮಿ, ಎಸ್.ಎನ್. ಮೋಹನ್‌ಕುಮಾರ್, ಪಪಂ ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷ ವಿನಾಯಕ ಪ್ರಸನ್ನ ಹಾಗೂ ಸದಸ್ಯರು, ಶ್ರೀಕಾಳ ಒಡೆಯ ಗುರುಗಳ ಮಹಾ ವಿದ್ಯಾಪೀಠ ಟ್ರಸ್ಟ್ ಅಧ್ಯಕ್ಷ ಶ್ರೀಮಹದೇವ ಸ್ವಾಮೀಜಿ, ಕಾರ್ಯದರ್ಶಿ ಶ್ರೀಕಂಠಸ್ವಾಮಿ, ಖಜಾಂಚಿ ಗಣಪತಿ, ನಿರ್ದೇಶಕರಾದ ಗುರುಸ್ವಾಮಿ, ಪ್ರಕಾಶ್, ಶಿವಣ್ಣ, ಶಿವಕುಮಾರ್, ರಾಜಶೇಖರ್, ಸೂರ್ಯ ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಮತ್ಸ್ಯಗಂಧ (ಕ)2 ಪ್ರದರ್ಶನಗಳು, ಪ್ರೇತ (ಕ) 2 ಪ್ರದರ್ಶನಗಳು	
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರಾಕ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮತ್ಸ್ಯಗಂಧ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಒಂದು ಸರಳ ಪ್ರೇಮಕಥೆ (ಕ)	4 ಪ್ರದರ್ಶನಗಳು
ರಾಜಕಮಲ್	
ಆರ್ಟಿಕಲ್ 370 (ಹಿಂ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
ಧೈರ್ಯಂ ಸರ್ವತ್ರ ಸಾಧನಂ	4 ಪ್ರದರ್ಶನಗಳು
ತಿಬ್ಬಾದೇವಿ	
ಲಾಲ್ ಸಲಾಮ್ (ತ)	4 ಪ್ರದರ್ಶನಗಳು
ಪ್ರಭಾ	
ಕ್ರಾಕ್(ಹಿಂ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಶಾಖಾಹಾರಿ (ಕ): ಬೆ.10.15ಕ್ಕೆ, ಕೆಟಿಎಂ (ಕ): ಮ.1.10ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಸಂ.4.15ಕ್ಕೆ, ಅಬ್ಬಬ್ಬ (ಕ): ರಾ.7.05ಕ್ಕೆ, ಭ್ರಮಯುಗಂ (ಮ): ರಾ.10ಕ್ಕೆ.
ಸ್ಕ್ರೀನ್ 2	ತುಂಡು (ಮ): ಬೆ.10.50ಕ್ಕೆ, ಬಾಬ್ ಮಾರ್ಲೆ: ಒನ್ ಲವ್ (ಇಂ): ಮ.1.40ಕ್ಕೆ, ರಾ.10.10ಕ್ಕೆ, ಕುಚ್ ಖಟ್ಟಾ ಹೋ ಜಾಯ್ (ಹಿಂ): ಸಂ.4.20ಕ್ಕೆ, ಪ್ರೇಮಲು (ಮ): ರಾ.7ಕ್ಕೆ.
ಸ್ಕ್ರೀನ್ 3	ಮಂಡ್ಯ ಹೈದ (ಕ): ಬೆ.10.15ಕ್ಕೆ, ಸೈರನ್ (ತ): ಮ.1.15ಕ್ಕೆ, ಮೇಡಮ್ ವೆಬ್ (ಇಂ): ಸಂ.4.35ಕ್ಕೆ, ರಾ.10ಕ್ಕೆ, ಭ್ರಮಯುಗಂ (ಮ): ರಾ.7.10ಕ್ಕೆ.
ಸ್ಕ್ರೀನ್ 4	ಸಾರಾಂಶ (ಕ): ರಾ.10.20ಕ್ಕೆ, ಉಪಾಧ್ಯಕ್ಷ (ಕ): ಮ.1.05ಕ್ಕೆ, ಫೈಟರ್ (ಹಿಂ): ಸಂ.4.10ಕ್ಕೆ, ಒಂದು ಸರಳ ಪ್ರೇಮಕಥೆ (ಕ): ರಾ.7.20ಕ್ಕೆ, ಊರು ಪೇರು ಭೈರವಕೋಣ (ತೆ): ರಾ.10.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಉಪಾಧ್ಯಕ್ಷ (ಕ): ಬೆ.10.05ಕ್ಕೆ, ಮೇಡಮ್ ವೆಬ್ (ಇಂ): ಮ.1.20ಕ್ಕೆ, ರಾ.7.05ಕ್ಕೆ, ರಾ.9.40ಕ್ಕೆ, ಊರು ಪೇರು ಭೈರವಕೋಣ (ತೆ): ಮ.3.55ಕ್ಕೆ
ಸ್ಕ್ರೀನ್ 2	ಮೇಡಮ್ ವೆಬ್ (ಇಂ): ಬೆ.9.55ಕ್ಕೆ, ಸೈರನ್ 108 (ತ): ಸಂ.4ಕ್ಕೆ, ರಾ.10.30ಕ್ಕೆ, ಉಪಾಧ್ಯಕ್ಷ (ಕ): ರಾ.7.15ಕ್ಕೆ.
ಸ್ಕ್ರೀನ್ 3	ಸೈರನ್ 108 (ತ): ಮ.12.15ಕ್ಕೆ, ಬಾಬ್ ಮಾರ್ಲೆ: ಒನ್ ಲವ್ (ಇಂ): ಸಂ.4.10ಕ್ಕೆ, ಪ್ರೇಮಲು (ಮ): ಸಂ.6.45ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಒಂದು ಸರಳ ಪ್ರೇಮಕಥೆ (ಕ): ಬೆ.10.05ಕ್ಕೆ, ಸಂ.4.20ಕ್ಕೆ, ಅಬ್ಬಬ್ಬ (ಕ): ಮ.1.15ಕ್ಕೆ, ತುಂಡು (ಮ): ರಾ.7.30ಕ್ಕೆ, ಭ್ರಮಯುಗಂ (ಮ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಫೈಟರ್ (2ಡಿ)(ಹಿಂ): ಸಂ.6.35ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.9.30ಕ್ಕೆ, ಮ.3.55ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ, ಉಪಾಧ್ಯಕ್ಷ (ಕ): ಮ.3.25ಕ್ಕೆ, ಅನ್ವೇಶಿಪಿನ್ ಕಂಡೆತುಂ (ಮ): ಸಂ.4.05ಕ್ಕೆ, ಸಾರಾಂಶ (ಕ): ಮ.1.15ಕ್ಕೆ, ಒಂದು ಸರಳ ಪ್ರೇಮಕಥೆ (ಕ): ಮ.12.15ಕ್ಕೆ, ಸೈರನ್ 108 (ತ): ಬೆ.10.10ಕ್ಕೆ, ಸಂ.4.20ಕ್ಕೆ, ರಾ.10.30ಕ್ಕೆ, ಮೇಡಮ್ ವೆಬ್ (ಇಂ): ಬೆ.10.50ಕ್ಕೆ, ಮ.1.25ಕ್ಕೆ, ಸಂ.4.35ಕ್ಕೆ, ರಾ.7.10ಕ್ಕೆ, ರಾ.9.45ಕ್ಕೆ, ಪ್ರೇಮಲು (ಮ): ಮ.12.40ಕ್ಕೆ, ರಾ.7.05ಕ್ಕೆ, ರಾ.10.20ಕ್ಕೆ, ಭ್ರಮಯುಗಂ (ಮ): ರಾ.10ಕ್ಕೆ, ಅಬ್ಬಬ್ಬ (ಕ): ಮ.2.55ಕ್ಕೆ, ವಾರನಂ ಆಯಿರಂ (ತ): ಸಂ.6ಕ್ಕೆ, ರವಿಕೆ ಪ್ರಸಂಗ (ಕ): ರಾ.9.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ವಿಜೃಂಭಣೆಯ ಹೇಮಾದ್ರಂಭ ರಥೋತ್ಸವ



ಬನ್ನೂರಿನಲ್ಲಿ ಹೇಮಾದ್ರಂಭ ದೇವಿ ರಥೋತ್ಸವ ನಡೆಯಿತು.

ಬನ್ನೂರು, ಫೆ.25– ಪಟ್ಟಣದಲ್ಲಿ ಹೇಮಾದ್ರಂಭ ದೇವಿ ರಥೋತ್ಸವ ಭಾನುವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ದೇವಾಲಯದಲ್ಲಿ ದೇವಿ ಮಂತ್ರಘೋಷ ಆರಂಭವಾದ ನಂತರ ರಥ ಸಾಗುವ ರಾಜಬೀದಿಯಲ್ಲಿ ಮುಂಜಾನೆ 6 ಗಂಟೆಗೆ ಹೇಮಾದ್ರಂಭ ದೇವಿ ತೀರ್ಥ ಹಾಕುವ ಮೂಲಕ ರಸ್ತೆ ಶುದ್ಧೀಕರಿಸಲಾಯಿತು. ಬಳಿಕ ಬಣ್ಣ ಬಣ್ಣದ ಪತಾಕೆಗಳಿಂದ ಕಂಗೊಳಿಸುತ್ತಿದ್ದ ರಥಕ್ಕೆ ಕಳಸ ಪ್ರತಿಷ್ಠಾಪಿಸಿ, ನಂತರ ಅಲಂಕೃತಗೊಂಡ ಹೇಮಾದ್ರಂಭ ದೇವಿ ಉತ್ಸವ ಮೂರ್ತಿಯನ್ನು ರಥದ ಸುತ್ತ ಪ್ರದಕ್ಷಿಣೆ ಮಾಡಿ ರಥದಲ್ಲಿ ಪ್ರತಿಷ್ಠಾಪಿಸಲಾಯಿತು. ಈ ವೇಳೆ ನೆರೆದಿದ್ದ ಸಾವಿರಾರು ಭಕ್ತರ ಸಮ್ಮುಖದಲ್ಲಿ 'ಹೇಮಾದ್ರಂಭ ಚೌಕೆ 'ಹೇಮಾದ್ರಂಭ ಚೌಕೆ ಎಂದು ಕೂಗುತ್ತ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ಈ ವೇಳೆ ದೇವಿ ಕರಗ ಹೊತ್ತ ಭಕ್ತರು ಹೆಬ್ಬರೆ ನಾದಕ್ಕೆ ಹೆಜ್ಜೆ ಹಾಕುತ್ತಿದ್ದರೆ, ಮತ್ತೊಂದೆಡೆ ಮಂಗಳವಾದ್ಯದ ಮೆರವಣಿಗೆ ರಥೋತ್ಸವಕ್ಕೆ ಭವ್ಯ ಮೆರಗು ನೀಡಿತು. ರಥೋತ್ಸವ ಸಾಗುತ್ತಿದ್ದ ಮಾರ್ಗದಲ್ಲಿ ಯುವಕರು ನೃತ್ಯ ಮಾಡುವ ಮೂಲಕ ಸಾರ್ವಜನಿಕರ ಗಮನ ಸೆಳೆದರು. ತೇರಿನ ಬೀದಿ ಮೂಲಕ ಹೊರಟ ರಥ ದೊಡ್ಡಂಗಡಿ ಬೀದಿ ಮೂಲಕ ಸಾಗಿ ಸ್ವಸ್ಥಾನ ಸೇರಿತು. ರಥೋತ್ಸವ ವೇಳೆ ಭಕ್ತರಿಗೆ ವಿವಿಧ ಸಂಘಟನೆಗಳು ಮಜ್ಜಿಗೆ, ಪಾನಕ ವಿತರಿಸಿದರು. ಅಲ್ಲದೇ ಹರಕೆ ಹೊತ್ತ ಭಕ್ತರು ಪ್ರಸಾದ ವಿತರಿಸಿದರು. ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸರು ಬಿಗಿ ಬಂದೋಬಸ್ತ್ ಕೈಗೊಂಡಿದ್ದರು.

ತೆಪ್ಪೋತ್ಸವ: ಸೋಮವಾರ ಮಾಕನಹಳ್ಳಿಯ ಹೆಗ್ಗೆರೆಯಲ್ಲಿ ದೇವಿ ತೆಪ್ಪೋತ್ಸವದ ಹಮ್ಮಿಕೊಂಡಿದ್ದು, ಗ್ರಾಮದಲ್ಲಿ ರಸ್ತೆಗಳನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿದೆ.

ಪಿ.ಪಟ್ಟಣದಲ್ಲಿ ಅಶ್ವಮೇಧ ಸಾರಿಗೆ ಬಸ್‌ಗಳಿಗೆ ಚಾಲನೆ



ಪಿರಿಯಾಪಟ್ಟಣದಲ್ಲಿ ಅಶ್ವಮೇಧ ಸಾರಿಗೆ ಬಸ್‌ಗೆ ಸಚಿವ ವೆಂಕಟೇಶ್ ಚಾಲನೆ ನೀಡಿದರು.

ಪಿರಿಯಾಪಟ್ಟಣ, ಫೆ.25– ಪಟ್ಟಣದಲ್ಲಿ ಪಿರಿಯಾಪಟ್ಟಣದಿಂದ ಬೆಂಗಳೂರಿಗೆ ಸಂಚರಿಸುವ ಐದು ಅಶ್ವಮೇಧ ಸಾರಿಗೆ ಬಸ್‌ಗಳಿಗೆ ಸಚಿವ ಕೆ.ವೆಂಕಟೇಶ್ ಚಾಲನೆ ನೀಡಿದರು.

ಡಿಪೋ ಮ್ಯಾನೇಜರ್ ದರ್ಶನ್ ಮಾತನಾಡಿ, ಈ ಬಸ್ ಎಲ್ಲಾ ರೀತಿಯ ಅತ್ಯಾಧುನಿಕ ವ್ಯವಸ್ಥೆ ಒಳಗೊಂಡಿದೆ. ನಿತ್ಯ ಪಿರಿಯಾಪಟ್ಟಣದಿಂದ ಬೆಳಗ್ಗೆ 5.15ಕ್ಕೆ ಹೊರಡುವ ಬಸ್ ಹುಣಸೂರು ಮೂಲಕ ಮೈಸೂರು ತಲುಪಲಿದೆ. ನಂತರ ಅಲ್ಲಿಂದ ಎಕ್ಸ್‌ಪ್ರೆಸ್ ವೇ ಮೂಲಕ ಯಾವುದೇ ನಿಲುಗಡೆ ಮಾಡದೇ ಬೆಂಗಳೂರನ್ನು 9 ಗಂಟೆಗೆ ತಲುಪಲಿದೆ. ಅದೇ ರೀತಿ ಬೆಳಗ್ಗೆ 7, 7.30, 8 ಗಂಟೆಗೆ ಪಿರಿಯಾಪಟ್ಟಣದಿಂದ ಬಸ್‌ಗಳು ಬೆಂಗಳೂರಿಗೆ ಹೊರಡಲಿವೆ. ಈ ಬಸ್‌ಗಳಲ್ಲಿ ಸಂಚರಿಸಲು ಮಾಮೂಲಿ ಸಾರಿಗೆ ಬಸ್‌ನಷ್ಟೇ ದರ ನಿಗದಿಪಡಿಸಲಾಗಿದೆ. ಮಹಿಳೆಯರಿಗೆ ಉಚಿತ ವ್ಯವಸ್ಥೆ ಇರುತ್ತದೆ ಎಂದರು.

ಈ ವೇಳೆ ತಾಲೂಕು ಆಶ್ರಯ ಕಮಿಟಿ ಅಧ್ಯಕ್ಷ ನಿತಿನ್ ವೆಂಕಟೇಶ್, ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರೆಹಮತ್ ಜಾನ್ ಬಾಬು, ಡಿ.ಟಿ.ಸ್ವಾಮಿ, ಇಲಾಖೆ ತಾಂತ್ರಿಕ ಮೇಲ್ವಿಚಾರಕ ಪ್ರಕಾಶ್, ಸಿಬ್ಬಂದಿ ಶ್ರೀಧರ್, ಶಿವಕುಮಾರ್ ಇನ್ನಿತರಿದ್ದರು.

ದೆಹಲಿ ಹೋರಾಟದಲ್ಲಿ ಬಲಿಯಾದ ರೈತರಿಗೆ ಶ್ರದ್ಧಾಂಜಲಿ



ದೆಹಲಿ ಹೋರಾಟದಲ್ಲಿ ಸಾವನ್ನಪ್ಪಿದ ರೈತರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ತಿ.ನರಸೀಪುರ ಫೆ.25– ದೆಹಲಿಯಲ್ಲಿ ನಡೆಯುತ್ತಿರುವ ಹೋರಾಟದಲ್ಲಿ ಪೊಲೀಸರ ಗೋಲಿಬಾರ್‌ನಿಂದ ಸಾವನ್ನಪ್ಪಿದ ರೈತರಿಗೆ ಭಾನುವಾರ ಸಂಜೆ ಬನ್ನೂರಿನ ಸಂತೇಮಾಳದ ಮೈಸೂರು–ಮಳವಳ್ಳಿ ಮುಖ್ಯ ರಸ್ತೆಯಲ್ಲಿ ರಾಜ್ಯ ರೈತ ಸಂಘಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಈ ವೇಳೆ ಮಾತನಾಡಿದ ಮುಖಂಡರು, ಸಮಸ್ಯೆ ಬಗೆಹರಿಸುವಂತೆ ಹೋರಾಟ ಮಾಡುತ್ತಿದ್ದ ರೈತರ ಮೇಲೆ ಪೊಲೀಸರು ಗೋಲಿಬಾರ್ ನಡೆಸಿ ಹತ್ಯೆ ಮಾಡಲಾಗಿದೆ. ಗೋಲಿಬಾರ್‌ನಲ್ಲಿ ಸಾವನ್ನಪ್ಪಿದ ಯುವ ರೈತನ ಕುಟುಂಬಕ್ಕೆ ಪಂಜಾಬ್ ಸರ್ಕಾರ ಒಂದು ಕೋಟಿ ರೂ. ಪರಿಹಾರ ನೀಡಿದೆ. ಅಲ್ಲದೇ ಅವರ ಕುಟುಂಬಕ್ಕೆ ಸರ್ಕಾರಿ ಉದ್ಯೋಗ ನೀಡುವ ಭರವಸೆ ನೀಡಿದೆ. ಅದೇ ರೀತಿ ರಾಜ್ಯ ಸರ್ಕಾರವೂ ಪರಿಹಾರ ನೀಡಬೇಕು ಎಂದ ಅವರು ಗೋಲಿಬಾರ್ ನಡೆಸಿದ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಎಂದು ಒತ್ತಾಯಿಸಿದರು.

ರೈತರ ಹೋರಾಟ ಇದೇ ರೀತಿ ನಿರ್ಲಕ್ಷಿಸಿದರೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಹಾಲಿ ಇರುವ ಸಂಸದರನ್ನು ಸೋಲಿಸುವ ಕೆಲಸ ಮಾಡಬೇಕಾಗುತ್ತದೆ ಎಂದರು. ಇದೇ ವೇಳೆ ರೈತರ ಹೋರಾಟದ ಬಗ್ಗೆ ಕೇಂದ್ರ ಸರ್ಕಾರದ ಗಮನ ಸೆಳೆಯುವಂತೆ ಸಂಸದ ಪ್ರತಾಪ್ ಸಿಂಹ ಅವರ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು ಎಂದರು.

ಶ್ರದ್ಧಾಂಜಲಿ ಸಭೆಯಲ್ಲಿ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ದೇವರಾಜ್, ಸೂರಿ, ಕಾರ್ಮಿಕ ಮುಖಂಡ ಶಿವರಾಜ್, ಮೆಡಿಕಲ್ ಮಹೇಶ್, ನಟೇಶ್, ಲೋಕೇಶ್, ಸ್ವಾಮಿ, ಹೊನ್ನಯ್ಯ, ಲೋಕೇಶ್, ವಿನಯ್, ಜಗದೀಶ್, ಕರಗೇಗೌಡ, ರಮೇಶ್ ಇನ್ನಿತರಿದ್ದರು.

ಮುತ್ತುರಾಜ್ ಸಾವು ಪ್ರಕರಣ: ಸಿಬಿಐಗೆ ವಹಿಸಲು ಒತ್ತಾಯ



ಸುದ್ದಿಗೋಷ್ಠಿಯಲ್ಲಿ ಬ್ರಹ್ಮರ್ಷಿ ಶ್ರೀನಾರಾಯಣಗುರು ಶಕ್ತಿಪೀಠದ ಡಾ.ಪ್ರಣವಾನಂದ ಸ್ವಾಮೀಜಿ ಮಾತನಾಡಿದರು.

ಹುಣಸೂರು, ಫೆ.25– ತಾಲೂಕಿನ ದಾಸನಪುರದ ವಿದ್ಯಾರ್ಥಿ ಮುತ್ತುರಾಜ್ ಅನುಮಾನಾಸ್ಪದ ಸಾವು ಪ್ರಕರಣವನ್ನು ಸರ್ಕಾರ ಸಿಬಿಐಗೆ ಒಪ್ಪಿಸಬೇಕು ಹಾಗೂ ಮೃತನ ಕುಟುಂಬಕ್ಕೆ 50 ಲಕ್ಷ ರೂ. ಪರಿಹಾರ ನೀಡುವಂತೆ ಈಡಿಗ ಸಮುದಾಯದ ಬ್ರಹ್ಮರ್ಷಿ ಶ್ರೀ ನಾರಾಯಣಗುರು ಶಕ್ತಿಪೀಠದ ಡಾ.ಪ್ರಣವಾನಂದ ಸ್ವಾಮೀಜಿ ಒತ್ತಾಯಿಸಿದರು.

ಮುತ್ತುರಾಜ್ ಮನೆಗೆ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರಾವಳಿ ಜಿಲ್ಲೆಯಲ್ಲಿ ಈವರೆಗೆ 21 ಮಂದಿ ಬಿಲ್ಲವ ಮತ್ತು ಈಡಿಗ ಸಮುದಾಯದ ಯುವಕರ ಹತ್ಯೆಯಾಗಿದೆ. ಇದೀಗ ಮುಖ್ಯಮಂತ್ರಿಗಳ ತವರು ಜಿಲ್ಲೆಯಲ್ಲೇ ಯುವಕ ಅನುಮಾನಾಸ್ಪದವಾಗಿ ಸಾವನ್ನಪ್ಪಿದ್ದು, ಇದು ಹೀಗೆ ಮುಂದುವರೆಯಲು ಬಿಡುವುದಿಲ್ಲವೆಂದ ಅವರು, ಮೃತ ವಿದ್ಯಾರ್ಥಿ ಕುಟುಂಬಕ್ಕೆ ಹಿಂದೂಪರ ಸಂಘಟನೆಗಳು, ವಿವಿಧ ಪಕ್ಷಗಳ ಮುಖಂಡರು ಬಂದು ಧೈರ್ಯ ತುಂಬಿದ್ದಾರೆ. ಅವರೆಲ್ಲರಿಗೂ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದ ಸ್ವಾಮೀಜಿಗಳು, ನಿಷ್ಪಕ್ಷಪಾತವಾಗಿ ತನಿಖೆಯಾಗಬೇಕಾದಲ್ಲಿ ತನಿಖಾ ತಂಡ ರಚಿಸಿ ಪ್ರಕರಣವನ್ನು ತಂಡಕ್ಕೆ ವಹಿಸುವ ಅಗತ್ಯತೆ ಇದೆ. ಮೃತರ ಮನೆಗೆ ಮುಖ್ಯಮಂತ್ರಿಗಳು ಭೇಟಿ ನೀಡಿ ಸಾಂತ್ವನ ಹೇಳಬೇಕು. 50 ಲಕ್ಷ ರೂ. ಪರಿಹಾರ ಘೋಷಿಸಬೇಕು ಎಂದು ಒತ್ತಾಯಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ನೊಂದ ಕುಟುಂಬದ ಒಬ್ಬರಿಗೆ ಸರ್ಕಾರಿ ಕೆಲಸ ಅಥವಾ ಯಾವುದಾದರೊಂದು ಇಲಾಖೆಯಲ್ಲಿ ಗುತ್ತಿಗೆ ಆಧಾರದ ಕೆಲಸ ಕಲ್ಪಿಸಬೇಕು. ಇನ್ನು 10 ದಿನದಲ್ಲಿ ನಮ್ಮ ಈ ಬೇಡಿಕೆ ಈಡೇರದಿದ್ದರೆ ಈಡಿಗ ಸಮುದಾಯ, ಇತರೆ ಹಿಂದುಳಿದ ಸಮುದಾಯ ಹಾಗೂ ಹಿಂದೂಪರ ಸಂಘಟನೆಗಳೊಂದಿಗೆ ರಾಜ್ಯಾದ್ಯಂತ ಬೀದಿಗಿಳಿದು ಹೋರಾಟ ನಡೆಸುವ ಜೊತೆಗೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಸುವುದಾಗಿ ಎಚ್ಚರಿಸಿದರು.

ಬಸವ ನಾಗಿದೇವ ಶರಣ ಸ್ವಾಮೀಜಿ ಮಾತನಾಡಿದರು. ಗೋಷ್ಠಿಯಲ್ಲಿ ಬಸವಮೂರ್ತಿ ಸ್ವಾಮಿಜಿ, ಈಡಿಗರ ಸಂಘದ ರಾಜ್ಯ ಕಾರ್ಯದರ್ಶಿ ವಸಂತ್‌ಕುಮಾರ್, ಹಿಂದೂ ಜಾಗರಣ ವೇದಿಕೆ ಜಿಲ್ಲಾಧ್ಯಕ್ಷ ಲಕ್ಷ್ಮೀನಾರಾಯಣ, ಲೋಹಿತ್ ಅರಸ್, ತಾಲೂಕು ಈಡಿಗರ ಸಂಘದ ಕಾರ್ಯದರ್ಶಿ ಶ್ಯಾಮ್, ಶ್ರೀನಿವಾಸ್ ಮತ್ತಿತರರಿದ್ದರು.

ಹಾವು ಕಚ್ಚಿ ವ್ಯಕ್ತಿ ಸಾವು



ಹೆಚ್.ಡಿ.ಕೋಟೆ, ಫೆ.25– ಹಾವು ಕಚ್ಚಿ ವ್ಯಕ್ತಿಯೋರ್ವ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಹೊಸಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ರಮೇಶ್(38) ಸಾವನ್ನಪ್ಪಿದವರು. ಈತ ತನ್ನ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಹಾವು ಕಚ್ಚಿ ಸಾವನ್ನಪ್ಪಿದ್ದಾನೆ. ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಶವದ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ವಾರಸುದಾರರಿಗೆ ಒಪ್ಪಿಸಲಾಗಿದ್ದು, ಈ ಸಂಬಂಧ ಅಂತರಸಂತೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಳೆದ ವರ್ಷ ರಮೇಶ್ ಪತ್ನಿ ಸಾವನ್ನಪ್ಪಿದ್ದು, ಮೂರು ಮಕ್ಕಳು ಹಾಗೂ ತಾಯಿ ಅನಾಥರಾಗಿದ್ದಾರೆ. ಹೀಗಾಗಿ ಸರ್ಕಾರ ಸೂಕ್ತ ಪರಿಹಾರ ನೀಡಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಪುಟ್ಟಸುಬ್ಬೇಗೌಡ ನಿಧನ



ಹುಣಸೂರು, ಫೆ.25– ತಾಲೂಕಿನ ಮೋದೂರು ಎಂ. ಕೊಪ್ಪಲು ಗ್ರಾಮದ ನಿವಾಸಿ, ಕುರುಬ ಸಮಾಜದ ಹಿರಿಯ ಮುಖಂಡ ಪುಟ್ಟಸುಬ್ಬೇಗೌಡ(72) ಭಾನುವಾರ ನಿಧನರಾದರು. ಅಂತ್ಯಕ್ರಿಯೆ ಸೋಮವಾರ ಬೆಳಗ್ಗೆ 10 ಗಂಟೆಗೆ ಮೃತರ ತೋಟದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಳಲೆ ಜವರನಾಯಕರ 'ಮುತ್ತಿನ ಕಣಜ' ಕೃತಿ ಲೋಕಾರ್ಪಣೆ



ಕಳಲೆ ಜವರನಾಯಕರ ಮುತ್ತಿನ ಕಣಜ ಕೃತಿ ಲೋಕಾರ್ಪಣೆಗೊಳಿಸಲಾಯಿತು.

ನಂಜನಗೂಡು, ಫೆ.25– ಹಲವು ಕೃತಿಗಳನ್ನು ರಚಿಸುವ ಮೂಲಕ ಕನ್ನಡ ಸಾಹಿತ್ಯ ಲೋಕದಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ಕಳಲೆ ಜವರನಾಯಕರು ಮುತ್ತಿನ ಕಣಜ ಎಂಬ ಮತ್ತೊಂದು ಕೃತಿ ರಚಿಸುವ ಮೂಲಕ ಕನ್ನಡ ಸಾಹಿತ್ಯ ಪರಂಪರೆಯನ್ನು ಶ್ರೀಮಂತಗೊಳಿಸಿದ್ದಾರೆ ಎಂದು ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ ತಿಳಿಸಿದರು.

ನಗರದ ನಾಯಕ ಸಮುದಾಯ ಭವನದಲ್ಲಿ ಸಾಹಿತಿ ಕಳಲೆ ಜವರನಾಯಕ ಅವರ ಮುತ್ತಿನ ಕಣಜ ಮತ್ತು ಜನರಲ್ ಇಂಗ್ಲಿಷ್ ಎಂಬ ಸ್ಪರ್ಧಾತ್ಮಕ ಕೈಪಿಡಿ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಜವರನಾಯಕ ಅವರ ಜೇನುಗೂಡು, ವಿಜ್ಞಾನ ಲೋಕದ ಶಿಖರಗಾಮಿಗಳು, ಜ್ಞಾನಕೋಶ ಮತ್ತು ಮುತ್ತಿನ ಜೋಳಿಗೆ ಕೃತಿಗಳು ಸಾಹಿತ್ಯ ಲೋಕದಲ್ಲಿ ಗಮನಾರ್ಹ ಕೃತಿಗಳಾಗಿವೆ. ಇದೀಗ ಮುತ್ತಿನ ಕಣಜ ಕೃತಿ ವೈಶಿಷ್ಟ್ಯಪೂರ್ಣ, ವೈವಿಧ್ಯಮಯವಾದ ಚಿಂತನೆಗಳ ಕಿರು ಭಂಡಾರವಾಗಿದೆ. ಯಾವುದೇ ಸಾಹಿತಿಯಲ್ಲಿ ಸೃಜನಶೀಲ ಪ್ರತಿಭೆ, ಅಗಾಧ ಜ್ಞಾನ, ವಿಜ್ಞಾನ ಸಂಪತ್ತು, ಲೋಕ ವೀಕ್ಷಣ ಸಾಮರ್ಥ್ಯ ವೈಚಾರಿಕ ಪ್ರಜ್ಞೆ ಜೊತೆಗೆ ಭಾಷಾ ಪ್ರಭುತ್ವ ಒಗ್ಗೂಡುವಿಕೆಯಿಂದ ಮಾತ್ರ ಇಂತಹ ಮೌಲ್ಯಯುತ ಕೃತಿ ರಚನೆಯಾಗಲು ಸಾಧ್ಯ. ಇಂತಹ ಕೃತಿ ರಚನೆ ಮೂಲಕ ಜವರನಾಯಕರು ಕನ್ನಡ ಸಾಹಿತ್ಯ ಪರಂಪರೆ ಶ್ರೀಮಂತಗೊಳಿಸಿದ್ದಾರೆ ಎಂದರು.


ಮುತ್ತಿನ ಕಣಜ ಕೃತಿ ಲೋಕಾರ್ಪಣೆಗೊಳಿಸಿ ಮಾತನಾಡಿದ ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಜವರನಾಯಕ ಅವರ ಜೇನುಗೂಡು ಕೃತಿಗೆ 2016ರಲ್ಲಿ ಅಮ್ಮ ಪುರಸ್ಕಾರ ದೊರೆತಿದ್ದು, ವಿಜ್ಞಾನ ಲೋಕದ ಶಿಖರಗಾಮಿಗಳು ಕೃತಿಗೆ 2019ರಲ್ಲಿ ಕರ್ನಾಟಕ ವಿಜ್ಞಾನ ಅಕಾಡೆಮಿ ಪ್ರಶಸ್ತಿ ದೊರಕಿರುವುದು ಅವರ ಸೃಜನಶೀಲ ಸಾಹಿತ್ಯಕ್ಕೆ ಸಂದ ಗೌರವವಾಗಿದೆ. ಮುತ್ತಿನ ಕಣಜ ಕೃತಿ ಸಮಾಜದ ಸಮಸ್ತ ಜನರ ಬವಣೆ ಅರಿತು ರಚಿಸಿದ ಕೃತಿಯಾಗಿದ್ದು ಸಮಾಜಮುಖಿ, ಆಧ್ಯಾತ್ಮಮುಖಿ ಚಿಂತನೆಗಳ ಮೌಲ್ಯ ಅಡಕಗೊಂಡ ಕೃತಿಯಾಗಿ ಸಮಾಜದ ಜನರನ್ನು ಸರಿದಾರಿಯಲ್ಲಿ ನಡೆಸುವಂತೆ ಪ್ರೇರೇಪಿಸುವ, ಮಾರ್ಗದರ್ಶನ ತೋರುವ ಅಂಶಗಳನ್ನು ಒಳಗೊಂಡು ಸಮಾಜವನ್ನು ಪರಿವರ್ತಿಸುವಂತಹ ಕೃತಿಯಾಗಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು. ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್. ಮಹದೇವಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಬಾಬು ನಾಯಕ್ ಜನರಲ್ ಇಂಗ್ಲಿಷ್ ಎಂಬ ಸ್ಪರ್ಧಾತ್ಮಕ ಕೈಪಿಡಿ ಬಿಡುಗಡೆಗೊಳಿಸಿದರು.

ಸಮಾರಂಭದಲ್ಲಿ ಡಿ.ಮಹೇಂದ್ರಮೂರ್ತಿ, ಕರುನಾಡ ಕಲಾಸಿರಿ ಬಳಗದ ರಾಜ್ಯಾಧ್ಯಕ್ಷ ಡಾ.ಅಂಬರೀಷ್, ಅನುರಾಗ ಮಕ್ಕಳ ಮನೆಯ ಡಿ.ಜಿ.ಸೋಮಶೇಖರ್, ರಂಗಕರ್ಮಿ ಸಿ.ಎಂ.ನರಸಿಂಹಮೂರ್ತಿ, ಲಕ್ಷ್ಮೀಕಾಂತ ದೇವಾಲಯದ ಪಾರುಪತ್ತೇದಾರ್ ಜಯರಾವ್, ಶಿಕ್ಷಕರಾದ ಕಾರಯ್ಯ, ಮೀನಾಕುಮಾರಿ, ಕೆ.ಎನ್.ಕೃಷ್ಣ ಸೇರಿದಂತೆ ಹಲವರಿದ್ದರು.

ಹೊರಗುತ್ತಿಗೆ ಕಾರ್ಮಿಕರ ಸಮಸ್ಯೆ ಬಗೆಹರಿಸದ

ಸಚಿವರು, ಸಿಎಂ ಕಾರಿಗೆ ಅಡ್ಡ ಮಲಗಿ ಪ್ರತಿಭಟಿಸುತ್ತೇವೆ

ದಸಂಸ ಬಣರಹಿತ ಜಿಲ್ಲಾ ಸಂಚಾಲಕ ಸಿ.ಉಮಾಮಹದೇವ ಎಚ್ಚರಿಕೆ



ಸುದ್ದಿಗೋಷ್ಠಿಯಲ್ಲಿ ದಸಂಸ ಬಣರಹಿತ ಜಿಲ್ಲಾ ಸಂಚಾಲಕ ಸಿ.ಉಮಾಮಹದೇವ ಮಾತನಾಡಿದರು.

ತಿ.ನರಸೀಪುರ, ಫೆ.25– ಕರ್ನಾಟಕ ರೇಷ್ಮೆ ಅಭಿವೃದ್ಧಿ ನಿಗಮದ ಹೊರಗುತ್ತಿಗೆ ಕಾರ್ಮಿಕರ ಸಮಸ್ಯೆ ಬಗೆಹರಿಸುವಂತೆ ಅಧಿಕಾರಿಗಳು, ಸಚಿವರು ಹಾಗೂ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದರೂ ಸ್ಪಂದಿಸದ ಕಾರಣ ಸಚಿವರು ಮತ್ತು ಸಿಎಂ ಕಾರಿಗೆ ಅಡ್ಡ ಮಲಗುವ ಮೂಲಕ ಪ್ರತಿಭಟನೆ ಮಾಡಲಾಗುವುದು ಎಂದು ದಸಂಸ ಬಣರಹಿತ ಜಿಲ್ಲಾ ಸಂಚಾಲಕ ಸಿ.ಉಮಾಮಹದೇವ ಎಚ್ಚರಿಕೆ ನೀಡಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಎಸ್‌ಐಸಿ ರೇಷ್ಮೆ ನೂಲು ತೆಗೆಯುವ ಘಟಕದಲ್ಲಿ ಕ್ಷುಲ್ಲಕ ಕಾರಣಕ್ಕೆ ಹೊರಗುತ್ತಿಗೆ ಕಾರ್ಮಿಕರನ್ನು ಕೆಲಸದಿಂದ ತೆಗೆಯಲಾಗಿದೆ. ಹೀಗಾಗಿ ಅವರನ್ನು ಮರು ನೇಮಕ ಮಾಡಬೇಕು. ಹೊರಗುತ್ತಿಗೆ ಮಹಿಳಾ ಕಾರ್ಮಿಕರ ಶೋಷಣೆ ನಿಲ್ಲಬೇಕು. ಕಾರ್ಖಾನೆಯಲ್ಲಿ ಅಂಬೇಡ್ಕರ್ ಜಯಂತಿಯನ್ನು ಸರಿಯಾಗಿ ಆಚರಿಸದಿರುವುದು ಸೇರಿದಂತೆ ಕಾರ್ಖಾನೆ ವ್ಯವಸ್ಥಾಪಕ ವಿನಯ್ ಅವರನ್ನು ವಿಚಾರಣೆ ನಡೆಸಿ ಅಮಾನತು ಮಾಡುವಂತೆ ಆಗ್ರಹಿಸಿ ಕಳೆದ ಆಗಸ್ಟ್‌ನಿಂದ ಇಲ್ಲಿವರೆಗೆ ಅಹೋರಾತ್ರಿ ಧರಣಿ, ಅರೆಬೆತ್ತಲೆ ಪ್ರತಿಭಟನೆ ನಡೆಸಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ, ಸಚಿವರಿಗೆ, ಸಿಎಂಗೆ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಆರೋಪಿಸಿದರು.

ಈ ಹಿನ್ನೆಲೆಯಲ್ಲಿ ತಿ.ನರಸೀಪುರ ಮತ್ತು ವರುಣ ಕ್ಷೇತ್ರಕ್ಕೆ ಆಗಮಿಸುವ ಸಚಿವರು, ಶಾಸಕರು ಮತ್ತು ಮುಖ್ಯಮಂತ್ರಿಗಳ ಕಾರಿಗೆ ಅಡ್ಡ ಮಲಗುವ ಮೂಲಕ ಪ್ರತಿಭಟನೆ ಮಾಡಲಾಗುವುದು ಮತ್ತು ಸಮಸ್ಯೆ ಬಗೆಹರಿಯುವ ತನಕ ಹೋರಾಟ ಮುಂದುವರಿಸುವುದಾಗಿ ಎಚ್ಚರಿಸಿದರು.


ಹೊರ ಗುತ್ತಿಗೆಯಲ್ಲಿ ಮೀಸಲಾತಿ ನೀಡುವುದಾಗಿ ಹೇಳಿ ತಮ್ಮ ಸಮುದಾಯದವರನ್ನು ರೇಷ್ಮೆ ನಿಗಮ, ವಿಧಾನಸೌಧದ ವಿವಿಧ ಸಚಿವಾಲಯ, ಮೈಸೂರಿನ ಮುಕ್ತ ವಿವಿ ಸೇರಿದಂತೆ ಹಲವು ನಿಗಮ ಮಂಡಳಿಗಳಿಗೆ ನೇಮಕಾತಿ ಮಾಡಿಕೊಂಡು ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಅಧಿಕಾರ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಆರೋಪ ಮಾಡಿದರು.

ಜಿಲ್ಲಾ ಸಂಘಟನಾ ಸಂಚಾಲಕ ಶಿವರಾಜ್, ಅಶೋಕ್, ಮಹದೇವ್, ಚಂದ್ರ, ಸಿದ್ದರಾಜು, ಶಿವಪ್ರಕಾಶ್, ಮಹದೇವ, ರಾಜು, ದಿನೇಶ್, ನಾಗೇಶ್, ಪವನ್ ಕುಮಾರ್, ಗೋಪಾಲ್, ನಂಜುಂಡಯ್ಯ, ಲತಾ, ಹೇಮಾ, ಪದ್ಮ, ನಾಗೇಂದ್ರ, ಜಯಪ್ಪ, ಕುಮಾರ್ ಇದ್ದರು.

ನಾಡಕುಸ್ತಿಯಲ್ಲಿ ಪೈಲ್ವಾನರ ಬಲಾಬಲ ಪ್ರದರ್ಶನ



ಸಾಹುಕಾರ್ ಶ್ರೀ ಎಸ್.ಚನ್ನಯ್ಯ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ನಾಡಕುಸ್ತಿ ಪಂದ್ಯಾವಳಿಗೆ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಚಾಲನೆ ನೀಡಿದರು. ಹೆಚ್.ಹೆಚ್. ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಫೌಂಡೇಶನ್ ಟ್ರಸ್ಟಿ ಡಾ.ಎಂ.ಲಕ್ಷ್ಮಿನಾರಾಯಣ್, ಶ್ರೀ ಜಯಚಾಮರಾಜ ಒಡೆಯರ್ ಗರಡಿ ಸಂಘದ ಅಧ್ಯಕ್ಷ ಸಿ.ಬಸವರಾಜು, ಉಪಾಧ್ಯಕ್ಷ ಡಿ.ನಾಗೇಂದ್ರ, ಪ್ರಧಾನ ಕಾರ್ಯದರ್ಶಿ ಯಜಮಾನ್ ಪೈ.ಎಸ್.ಮಹದೇವ್ ಮತ್ತಿತರರಿದ್ದರು.



ನಾಡಕುಸ್ತಿ ಪಂದ್ಯಾವಳಿಯಲ್ಲಿ ಗೆಲುವಿಗಾಗಿ ಸೆಣಸಾಡುತ್ತಿರುವ ಪೈಲ್ವಾನರಾದ ಬೋಗಾದಿ ಶ್ರೀ ವೀರಾಂಜನೇಯ ಗರಡಿಯ ವೈ.ಹೇಮಂತ್ ಕುಮಾರ್(ಹಳದಿಚಡ್ಡಿ) ಹಾಗೂ ಬೆಸ್ತರ ಕಾಳಣ್ಣನವರ ಗರಡಿಯ ಜಿ.ಭೈರಪ್ಪನಾಯಕ(ಕೆಂಪು ಚಡ್ಡಿ) ಅವರನ್ನು ಕಾಣಬಹುದು

ಮೈಸೂರು, ಫೆ.25(ಎಂಕೆ)– ಮಾಘ ಮಾಸದ ಮುಸ್ಸಂಜೆಯಲ್ಲಿ ದೂಳೆಬ್ಬಿಸಿದ ಅತ್ಯಮೋಘ ನಾಡಕುಸ್ತಿ ಪಂದ್ಯಾವಳಿಯಲ್ಲಿ ಮಟ್ಟಿಯಲ್ಲಿ ಮಿಂದೆದ್ದ ಪೈಲ್ವಾನರು ಎದುರಾಳಿಗಳಿಗೆ ಮಣ್ಣು ಮುಕ್ಕಿಸಿ ಗೆದ್ದು ಬೀಗಿದರು...!

ಮೈಸೂರಿನ ದೊಡ್ಡಕೆರೆ ಮೈದಾನದಲ್ಲಿರುವ ಸಾಹುಕಾರ್ ಶ್ರೀ ಎಸ್.ಚನ್ನಯ್ಯ ಕ್ರೀಡಾಂಗಣದಲ್ಲಿ ಶ್ರೀ ಜಯಚಾಮರಾಜ ಒಡೆಯರ್ ಗರಡಿ ಸಂಘದ ವತಿಯಿಂದ ದಿ. ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಜಯಂತಿ ಪ್ರಯುಕ್ತ ಆಯೋಜಿಸಿದ್ದ ನಾಡಕುಸ್ತಿ ಪಂದ್ಯಾವಳಿಯಲ್ಲಿ ಬರೋಬ್ಬರಿ 51 ಜೋಡಿ ಪೈಲ್ವಾನರು ತೊಡೆತಟ್ಟಿದರು.

ಹನುಮಾನ್ ಚಡ್ಡಿ ಹಾಕಿಕೊಂಡು, ನಿಂಬೆಹಣ್ಣನ್ನು ತುಂಡರಿಸಿ ವೀರಾವೇಶದಿಂದ ಅಖಾಡಕ್ಕಿಳಿದ ನೂರಕ್ಕೂ ಹೆಚ್ಚು ಪೈಲ್ವಾನರು ತಮ್ಮ ಎದುರಾಳಿಗಳಿಗೆ ಸೋಲಿನ ರುಚಿ ತೋರಿಸಿದರು. ಪಟ್ಟುಗೆ ಪ್ರತಿ ಪಟ್ಟು ಹಾಕಿ ಸಾಹಸ, ಶಕ್ತಿ ಹಾಗೂ ಜಾಣ್ಮೆ ಪ್ರದರ್ಶನದೊಂದಿಗೆ ನೆರೆದಿದ್ದ ಕುಸ್ತಿ ಪ್ರೇಕ್ಷಕರಿಂದ ಅಪಾರ ಶಿಳ್ಳೆ–ಚಪ್ಪಾಳೆ ಗಿಟ್ಟಿಸಿದರು. ಕೆಲವೇ ಸೆಕೆಂಡುಗಳಲ್ಲಿ ಎದುರಾಳಿಗೆ ಸೋಲುಣಿಸಿ ಅಚ್ಚರಿ ಮೂಡಿಸಿದರು.

ಮಹಿಳಾ ಕುಸ್ತಿ ವಿಭಾಗದಲ್ಲಿ ಫಕೀರ್ ಅಹಮದ್ ಸಾಹೇಬರ ಗರಡಿಯ ಎಸ್.ಹರಿಪ್ರಿಯ ವಿರುದ್ಧ ಮಂಡ್ಯ ಮಹಿಳಾ ಕುಸ್ತಿ ಸಂಘದ ಎಂ.ಎನ್.ಉನ್ನತಿ, ಮಂಡ್ಯ ಮಹಿಳಾ ಕುಸ್ತಿ ಸಂಘದ ಎಂ.ಕೆ. ಮೋನಿಕಾ ವಿರುದ್ಧ ಶ್ರೀ ಜಯಚಾಮರಾಜ ಒಡೆಯರ್ ಅಖಾಡದ ಸಿಂಚನ, ಮಂಡ್ಯ ಮಹಿಳಾ ಕುಸ್ತಿ ಸಂಘದ ವರಲಕ್ಷ್ಮಿ ವಿರುದ್ಧ ಬನ್ನೂರು ಹತ್ತು ಜನಗಳ ಗರಡಿಯ ಚೈತನ್ಯ, ಚಾಮುಂಡಿವಿಹಾರ ಕ್ರೀಡಾಂಗಣದ ಎಂ.ದೀಕ್ಷಾ ವಿರುದ್ಧ ಮಂಡ್ಯ ಮಹಿಳಾ ಕುಸ್ತಿ ಸಂಘದ ಜಿ.ಪಿ.ಸಾಧನ ಅಮೋಘ ಗೆಲುವು ಸಾಧಿಸಿದರು.

ಪುರುಷ ಕುಸ್ತಿಪಟುಗಳ ವಿಭಾಗದಲ್ಲಿ ಬೋಗಾದಿ ಶ್ರೀ ವೀರಾಂಜನೇಯ ಗರಡಿಯ ಎಸ್.ದರ್ಶನ್ ವಿರುದ್ಧ ಮೇಳಾಪುರ ಹತ್ತು ಜನಗಳ ಗರಡಿಯ ಚಂದು, ನಾಗನಹಳ್ಳಿ ಹತ್ತು ಜನಗಳ ಗರಡಿಯ ಅನೂಪ್ ವಿರುದ್ಧ ಬೋಗಾದಿ ಶ್ರೀ ವೀರಾಂಜನೇಯ ಗರಡಿಯ ಎಲ್. ಪ್ರಕಾಶ್, ಇಟ್ಟಿಗೆಗೂಡು ಹತ್ತು ಜನಗಳ ಗರಡಿಯ ಜೆ.ಮನೋಜ್‌ಕುಮಾರ್ ವಿರುದ್ಧ ಬೋಗಾದಿ ಶ್ರೀ ವಿರಾಂಜನೇಯ ಗರಡಿಯ ಎನ್.ಮಹೇಶ್, ಟಿ.ನರಸೀಪುರ ರಾಮಾಂಜನೇಯ ಗರಡಿಯ ಕೆ.ಯಶವಂತ್ ವಿರುದ್ಧ ಬೋಗಾದಿ ಶ್ರೀ ವೀರಾಂಜನೇಯ ಗರಡಿಯ ಚನ್ನಪ್ಪ, ಬೋಗಾದಿ ಶ್ರೀ ವೀರಾಂಜನೇಯ ಗರಡಿಯ ವೈ.ಹೇಮಂತ್ ಕುಮಾರ್ ವಿರುದ್ಧ ಬೆಸ್ತರ ಕಾಳಣ್ಣನವರ ಗರಡಿಯ ಜಿ.ಭೈರಪ್ಪ ನಾಯಕ ಜಯಭೇರಿ ಬಾರಿಸಿದರು.

ಗೌಸಿಯಾನಗರ ಹತ್ತು ಜನಗಳ ಗರಡಿಯ ಮುಬಾರಕ್ ಪಾಷ ವಿರುದ್ಧ ಮಂಡ್ಯ ಜಿಲ್ಲಾ ಗರಡಿಯ ಪೂರ್ವಿಕ್‌ಗೌಡ, ಮಂಡ್ಯ ಜಿಲ್ಲಾ ಗರಡಿಯ ಪ್ರಣವ್‌ಗೌಡ ವಿರುದ್ಧ ಫಕೀರ್ ಅಹಮದ್ ಸಾಹೇಬರ ಗರಡಿಯ ಎಸ್.ವಾಗೀಶ್, ಮಂಡ್ಯ ಜಿಲ್ಲಾ ಗರಡಿಯ ಎಂ.ಸುಜಿತ್‌ಕುಮಾರ್ ವಿರುದ್ಧ ಈಶ್ವರಾಯರ ಹತ್ತು ಜನಗಳ ಗರಡಿಯ ರುಹನ್ ಸತೀಶ್, ಪಾಳ್ಯ ಕೊಳ್ಳೇಗಾಲ ಹತ್ತು ಜನಗಳ ಗರಡಿಯ ಆರ್.ಮೋಹನ್ ಕುಮಾರ್ ವಿರುದ್ಧ ಮಂಡ್ಯ ಜಿಲ್ಲಾ ಗರಡಿಯ ಎನ್.ಆರ್.ನಿಖಿಲ್ ರಾಜ್, ಮಂಡ್ಯ ಜಿಲ್ಲಾ ಗರಡಿಯ ನಿಖಿಲ್ ವರ್ಧನ್ ವಿರುದ್ಧ ಬಸ್ತಿಪುರ ಹತ್ತು ಜನಗಳ ಗರಡಿಯ ಡಿ.ರಾಕೇಶ್ ನಾಯಕ್, ಸುಣ್ಣದಕೇರಿ ಈಶ್ವರರಾಯರ ಗರಡಿಯ ಜ್ಞಾನೇಶ್ ಬಿ.ಸಾಯಿ ವಿರುದ್ಧ ಕಳಲೆ ಚಿಕ್ಕ ಬೀದಿಯ ಮಾದೇಶ್, ಮಂಡಿಮೊಹಲ್ಲಾ ಗರಡಿಯ ಮಂಜುನಾಥ ವಿರುದ್ಧ ಟಿ.ನರಸೀಪುರ ಆಲಗೂಡು ಗರಡಿಯ ಎನ್.ಉಮೇಶ್ ಗೆಲುವು ಸಾಧಿಸಿದರು.

ಪಡುವಾರಹಳ್ಳಿ ಹತ್ತು ಜನಗಳ ಗರಡಿಯ ಪುನೀತ್‌ಕುಮಾರ್ ವಿರುದ್ಧ ಮಂಡ್ಯ ಜಿಲ್ಲಾ ಗರಡಿಯ ಸಿ.ಎ.ಹೇಮಂತ್, ಕಾಳಿಸಿದ್ದನಹುಂಡಿ ಗರಡಿಯ ಜಯಂತ ವಿರುದ್ಧ ಮಂಡಿಮೊಹಲ್ಲಾ ಗರಡಿಯ ಎಂ.ಎ.ಸಿದ್ದಿಖ್, ಚಾಮುಂಡಿವಿಹಾರ ಕ್ರೀಡಾಂಗಣದ ಪಿ.ಶಶಾಂಕ್ ವಿರುದ್ಧ ಮಂಡಿಮೊಹಲ್ಲಾ ಗರಡಿಯ ದಸ್ತಗಿರ್ ಷರೀಫ್, ಮೇಟಗಳ್ಳಿ ಹತ್ತು ಜನಗಳ ಗರಡಿಯ ಸಯ್ಯದ್ ಸಮೀರ್ ವಿರುದ್ಧ ಪಡುವಾರಹಳ್ಳಿ ಹತ್ತು ಜನಗಳ ಗರಡಿಯ ಚಿರಂತ್, ಪಾಲಹಳ್ಳಿ ಗರಡಿಯ ಪಿ.ಎಸ್.ನಂದಕಿಶೋರ್ ವಿರುದ್ಧ ಕ್ಯಾತಮಾರನಹಳ್ಳಿ ಹತ್ತು ಜನಗಳ ಗರಡಿಯ ಆರ್.ಧನುಷ್ ವಿಜಯಿಯಾದರೆ, ಕೆಲ ಪಂದ್ಯಗಳಲ್ಲಿ ಎದುರಾಳಿಗಳಿಲ್ಲದ ಕಾರಣ ಹಾಜರಿದ್ದವರನ್ನೇ ವಿಜಯಿ ಎಂದು ಘೋಷಣೆ ಮಾಡಲಾಯಿತು. ಹಾಗೆಯೇ ಕೆಲ ಪಂದ್ಯಗಳು ಕೂಡ ಸಮಬಲದಲ್ಲಿ ಅಂತ್ಯವಾದವು.

ಅಪಾರ ಸಂಬಂಧ: ನಾಡಕುಸ್ತಿ ಪಂದ್ಯಾವಳಿಗೆ ಚಾಲನೆ ನೀಡಿದ ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ಮಾತನಾಡಿ, ಮೈಸೂರು ರಾಜವಂಶಸ್ಥರಿಗೂ ಕುಸ್ತಿಗೂ ಅವಿನಾಭಾವ ಸಂಬಂಧವಿದ್ದು, ಕುಸ್ತಿ ಕಲೆಯನ್ನು ಉಳಿಸುವಲ್ಲಿ ಅವರ ಕೊಡುಗೆ ಅಪಾರ. ಶ್ರೀ ಜಯಚಾಮರಾಜ ಒಡೆಯರ್ ಗರಡಿ ಸಂಘದ ವತಿಯಿಂದ ನಾಡಕುಸ್ತಿ ಪಂದ್ಯಾವಳಿ ಆಯೋಜಿಸಿರುವುದು ಶ್ಲಾಘನೀಯವಾಗಿದ್ದು, ಇದೇ ರೀತಿ ಮುಂದುವರೆಯಲಿ ಎಂದು ಆಶಿಸಿದರಲ್ಲದೆ ಕುಸ್ತಿ ಕೀಡೆಗೆ ಪ್ರೋತ್ಸಾಹ ಅತ್ಯಗತ್ಯವಾಗಿದ್ದು, ವೈಯಕ್ತಿಕ ಹಾಗೂ ಮೈಸೂರು ವಿವಿಯಿಂದ ಕುಸ್ತಿ ಕ್ರೀಡೆಯನ್ನು ಪ್ರೋತ್ಸಾಹಿಸಲಾಗುವುದು ಎಂದು ತಿಳಿಸಿದರು.

ಹೆಚ್.ಹೆಚ್.ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಫೌಂಡೇಶನ್ ಟ್ರಸ್ಟಿ ಡಾ.ಎಂ.ಲಕ್ಷ್ಮಿನಾರಾಯಣ್, ಶ್ರೀ ಜಯಚಾಮರಾಜ ಒಡೆಯರ್ ಗರಡಿ ಸಂಘದ ಅಧ್ಯಕ್ಷ ಸಿ.ಬಸವರಾಜು, ಉಪಾಧ್ಯಕ್ಷ ಡಿ.ನಾಗೇಂದ್ರ, ಪ್ರಧಾನ ಕಾರ್ಯದರ್ಶಿ ಯಜಮಾನ್ ಪೈ.ಎಸ್. ಮಹದೇವ್, ಹಿರಿಯ ಪೈಲ್ವಾನರಾದ ಎಂ.ಎ.ನಯನಕುಮಾರ್, ಎಂ.ಪ್ರದೀಪ್ ಕುಮಾರ್, ಸಿದ್ದಲಿಂಗಯ್ಯ, ಎಂ.ಗಣೇಶ್, ಜಿ.ಎನ್.ಅನಂತವರ್ಧನ, ಮಂಜು, ತೀರ್ಪುದಾರರಾದ ಹಿರಿಯ ಪೈ.ಶ್ರೀನಿವಾಸ್‌ಗೌಡ, ಎಲ್.ಟಿ.ವೆಂಕಟೇಶ್, ತಬ್ರೀಜ್ ಪಠಾಣ್, ಮಧುಸೂದನ್, ಡಾ.ಬಿ.ಕೃಷ್ಣ, ನಂಜನಗೂಡಿನ ಎಂ.ಮಹದೇವಯ್ಯ ಮತ್ತಿತರರಿದ್ದರು.

ಮನುಷ್ಯರು ಪರಸ್ಪರ ನಂಬಿಕೆ ಉಳಿಸಿಕೊಳ್ಳುವುದೇ ದೊಡ್ಡ ಗುಣ

ನಟ ಪ್ರಕಾಶ್ ರೈ ಅಭಿಮತ



ಮೈಸೂರಿನ ಮಾನಸಗಂಗೋತ್ರಿಯ ಸೆನೆಟ್ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ 'ಸಂಗೀತ ಗೋಷ್ಠಿ'ಯನ್ನು ನಟ ಪ್ರಕಾಶ್ ರೈ ಉದ್ಘಾಟಿಸಿದರು.

ಮೈಸೂರು, ಫೆ.25(ಎಸ್‌ಬಿಡಿ)– ಮನುಷ್ಯರು ಪರಸ್ಪರ ನಂಬಿಕೆ ಉಳಿಸಿಕೊಳ್ಳುವುದೇ ದೊಡ್ಡ ಗುಣ ಎಂದು ನಟ ಪ್ರಕಾಶ್ ರೈ ಅಭಿಪ್ರಾಯಿಸಿದರು.

ಭಾರತೀಯ ವಿದ್ಯಾರ್ಥಿ ಸಂಘ, ಮೈಸೂರು ವಿವಿ ಸಂಶೋಧಕರ ಸಂಘ ಹಾಗೂ ದಲಿತ ವಿದ್ಯಾರ್ಥಿ ಒಕ್ಕೂಟದ ಸಹಯೋಗದಲ್ಲಿ ರಂಗಭೂಮಿಯ ಯುವ ಕಲಾವಿದ ಹೊ.ನಂ.ಅಂಕರಾಜು ಅವರ ತಾಯಿಯ ಚಿಕಿತ್ಸೆ ಸಹಾಯಾರ್ಥವಾಗಿ ಮಾನಸಗಂಗೋತ್ರಿಯ ಸೆನೆಟ್ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ 'ಸಂಗೀತ ಗೋಷ್ಠಿ'ಯನ್ನು ಉದ್ಘಾಟಿಸಿ ಮಾತನಾಡಿದರು.

ಮನುಷ್ಯ ಮತ್ತೊಬ್ಬ ಮನುಷ್ಯನ ಮೇಲೆ ನಂಬಿಕೆ ಉಳಿಸಿಕೊಳ್ಳುವುದೇ ದೊಡ್ಡ ಗುಣ. ಎಲ್ಲರೂ ಒಂದಾಗಿರುವುದು ತುಂಬಾ ಮುಖ್ಯ. ಅದರಲ್ಲೂ ಕಲಾವಿದರೊಬ್ಬರ ತಾಯಿಯ ಚಿಕಿತ್ಸೆಗೆ ಎಲ್ಲರೂ ಒಗ್ಗೂಡಿರುವುದು ಶ್ಲಾಘನೀಯ. ಕಷ್ಟದಲ್ಲಿ ಹೀಗೆ ಪರಸ್ಪರ ಕೈ ಜೋಡಿಸಬೇಕು. ಆ ತಾಯಿಯ ಚಿಕಿತ್ಸೆಗೆ ನಾನೂ ಆರ್ಥಿಕ ನೆರವು ನೀಡುತ್ತೇನೆ ಎಂದು ಭರವಸೆ ನೀಡಿದರು.

ಖ್ಯಾತ ಗಾಯಕಿ ಸಂಗೀತಾ ಕಟ್ಟಿ ಮಾತನಾಡಿ, ಪ್ರಕಾಶ್ ರೈ ಅವರು ಹೆಮ್ಮೆಯ ಕಲಾವಿದ ಹಾಗೂ ಒಳ್ಳೆಯ ಮನುಷ್ಯ. ಭಾರತೀಯ ಚಿತ್ರರಂಗದಲ್ಲಿ ತುಂಬಾ ಪ್ರೀತಿಪಾತ್ರರು. ನಾನೂ ಹಾಗೂ ನನ್ನ ಕುಟುಂಬದವರು ಪ್ರಕಾಶ್ ರೈ ಅವರ ಅಭಿಮಾನಿಗಳು. ಯುವ ಸಮುದಾಯ ಇವರನ್ನು ಕೇವಲ ಫೇಸ್‌ಬುಕ್, ಇನ್ಸ್ಟಾಗ್ರಾಮ್‌ನಲ್ಲಿ ಮಾತ್ರ ಹಿಂಬಾಲಿಸಿದರೆ ಸಾಲದು. ಇವರ ಜೀವನದ ಸಾಧನೆಯ ಹಾದಿಯನ್ನು ಅನುಸರಿಸಬೇಕು ಎಂದರು.

ಇದೇ ವೇಳೆ ಬಸವಣ್ಣನವರ 'ಉಳ್ಳವರು ಶಿವಾಲಯ ಮಾಡುವರು, ನಾನೇನ ಮಾಡಲಿ ಬಡವನಯ್ಯ...' ವಚನವನ್ನು ಶಾಸ್ತ್ರೀಯ ಶೈಲಿಯಲ್ಲಿ ಹಾಡಿದರಲ್ಲದೆ, ಪ್ರಕಾಶ್ ರೈ ಅವರೊಂದಿಗೆ ಫೋಟೋ ತೆಗೆಸಿಕೊಂಡು ಸಂತಸ ವ್ಯಕ್ತಪಡಿಸಿದರು.

ಅಕ್ಕ ಐಎಎಸ್ ಅಕಾಡೆಮಿ ಮುಖ್ಯಸ್ಥ ಶಿವಕುಮಾರ್ ಕಾರ್ಯಕ್ರಮದ ಉದ್ದೇಶ ತಿಳಿಸಿ, 50ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸುವುದರ ಜೊತೆಗೆ ಹಲವು ನಾಟಕಗಳ ನಿರ್ದೇಶನ ಹಾಗೂ ಮೂಕಾಭಿನಯದ ಮೂಲಕ ಕಲಾ ಸೇವೆ ಮುಂದುವರೆಸಿರುವ ಯುವ ಕಲಾವಿದ ಅಂಕರಾಜು ಅವರ ತಾಯಿ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾರೆ. ಅವರ ಚಿಕಿತ್ಸೆಗೆ ಹೆಚ್ಚು ಹಣ ಅಗತ್ಯವಿರುವುದರಿಂದ ನೆರವಿಗಾಗಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಆಧ್ಯಾತ್ಮ ಚಿಂತಕ ಶಂಕರ್ ದೇವನೂರು, ಖ್ಯಾತ ವೈದ್ಯರೂ ಆದ ಕಾಂಗ್ರೆಸ್ ಮುಖಂಡ ಡಾ.ಸುಶ್ರುತ್ ಗೌಡ, ಮೈಸೂರು ವಕೀಲರ ಸಂಘದ ಕಾರ್ಯದರ್ಶಿ ಉಮೇಶ್, ಜಿಪಂ ನಿವೃತ್ತ ಉಪ ಕಾರ್ಯದರ್ಶಿ ಡಾ.ಎಸ್.ಪ್ರೇಮ್ ಕುಮಾರ್, ಮೈಸೂರು ವಿವಿ ಸಂಶೋಧಕರ ಸಂಘದ ಅಧ್ಯಕ್ಷ ಸಿ.ಮಹೇಶ್ ಕುಮಾರ್, ದಲಿತ ವಿದ್ಯಾರ್ಥಿ ಒಕ್ಕೂಟದ ಸಚಿನ್ ಮತ್ತಿತರರು ಉಪಸ್ಥಿತರಿದ್ದರು.

ಬಳಿಕ ಸಂಗೀತ ಕಟ್ಟಿ, ಮಹೇಂದ್ರ ರಂಗದಾಸ್, ದೇವಾನಂದ ವರಪ್ರಸಾದ್, ರಾಜಾರಾಮ್ ಶಾಸ್ತ್ರಿ, ಪುರುಷೋತ್ತಮ್ ಕಿರಗಸೂರು, ನಾಗೇಶ್ ಕಂದೇಗಾಲ, ಜಯಶಂಕರ ಮೇಸ್ತ್ರಿ, ಋತ್ವಿಕ್ ಸಿ.ರಾಜ್, ನಿತಿನ್, ಸಿಂಚನ, ಪ್ರೀತು ಎಸ್.ರವಿ, ಭವತಾರಿಣಿ ಇನ್ನಿತರ ಗಾಯಕರು 'ಸಂಗೀತ ಗೋಷ್ಠಿ' ನಡೆಸಿಕೊಟ್ಟರು.

ಬಿಜೆಪಿಯವರಿಗೆ ಎಸ್‌ಸಿಪಿ, ಟಿಎಸ್‌ಪಿ ಅರ್ಥವೇ ಗೊತ್ತಿಲ್ಲ

ಕೆಪಿಸಿಸಿ ವಕ್ತಾರ ಲಕ್ಷ್ಮಣ್ ಲೇವಡಿ

ಮೈಸೂರು,ಫೆ.25(ಎಂಟಿವೈ)– ಎಸ್‌ಸಿಪಿ, ಟಿಎಸ್‌ಪಿ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಲಾಗುತ್ತಿದೆ ಎಂದು ಬಿಜೆಪಿ ನಾಯಕರು ಸುಳ್ಳು ಹೇಳುವ ಮೂಲಕ ಕೇಂದ್ರ ಸರ್ಕಾರ ರಾಜ್ಯಕ್ಕೆ ನೀಡಬೇಕಾದ ತೆರಿಗೆ ಪಾಲಿನ ಹಣ ನೀಡದಿರುವುದನ್ನು ಮರೆಮಾಚುತ್ತಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿಯವರಿಗೆ ಎಸ್‌ಸಿಪಿ, ಟಿಎಸ್‌ಪಿ ಅರ್ಥವೇ ತಿಳಿದಿಲ್ಲ ಎಂದು ಲೇವಡಿ ಮಾಡಿದ ಅವರು, ಲೋಕಸಭಾ ಚುನಾವಣೆ ಸಮೀಪಿಸುತ್ತಿರುವುದರಿಂದ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರ ಮೇಲೆ ಎಲ್ಲಿಲ್ಲದ ಪ್ರೀತಿ ತೋರಿಸುತ್ತಿದ್ದಾರೆ. ಬಿಜೆಪಿ ಸರ್ಕಾರದಲ್ಲಿ ಎಷ್ಟು ಹಣ ಮೀಸಲಿಟ್ಟಿದ್ದೀರಿ ಎಂಬುದನ್ನು ತಿಳಿಸಬೇಕು. ಬಿಜೆಪಿ ಸರ್ಕಾರದಲ್ಲಿ ಎಸ್ಸಿ–ಎಸ್ಟಿ ಮಕ್ಕಳಿಗೆ ಕೊಡುತ್ತಿದ್ದ ವಿದ್ಯಾರ್ಥಿ ವೇತನ ನಿಲ್ಲಿಸಿದರು. ದೇಶದಲ್ಲಿ ಮೊಟ್ಟ ಮೊದಲು ಎಸ್‌ಇಪಿ, ಟಿಎಸ್‌ಪಿ ಯೋಜನೆ ಜಾರಿಗೆ ತಂದ ಕೀರ್ತಿ ಸಿದ್ದರಾಮಯ್ಯ ಅವರಿಗೆ ಸಲ್ಲುತ್ತದೆ. 2017ರಲ್ಲಿ ಸುಮಾರು 17 ಸಾವಿರ ಕೋಟಿ ಮೀಸಲಿಟ್ಟಿದ್ದರು. 2024ರಲ್ಲಿ ಎಸ್‌ಇಪಿ, ಟಿಎಸ್‌ಪಿಗೆ 39 ಸಾವಿರ ಕೋಟಿ ಹಣ ಮೀಸಲಿಟ್ಟಿದ್ದಾರೆ ಎಂದು ವಿವರಿಸಿದರು.

ಜೆಡಿಎಸ್–ಬಿಜೆಪಿ ಮೈತ್ರಿ ಸೀಟು ಹಂಚಿಕೆ ಸ್ವ್ಯಾಪಿಂಗ್ ಸಿಸ್ಟಂ ಆಗಿದೆ. ಜೆಡಿಎಸ್ ಪಕ್ಷವನ್ನು ಮುಗಿಸಲು ಬಿಜೆಪಿ ಹೊರಟಿದೆ. ಈಗಾಗಲೇ ಮೈತ್ರಿಯಿಂದ ಜೆಡಿಎಸ್ ಕಾರ್ಯಕರ್ತರಿಗೆ ಅಸಮಾಧಾನವಾಗಿದೆ. ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ 28ಕ್ಕೆ 28 ಸ್ಥಾನ ಗೆಲ್ಲುವುದಾಗಿ ಬಿಜೆಪಿಯವರು ಹೇಳುತ್ತಿದ್ದಾರೆ. ಆದರೆ, ಅದು ಸಾಧ್ಯವಿಲ್ಲ. ಬಿಜೆಪಿ ಅವರು 7 ರಿಂದ 8 ಸೀಟು ಗೆಲ್ಲೋದೆ ಕಷ್ಟ. ಕಾಂಗ್ರೆಸ್ 20 ರಿಂದ 22 ಸ್ಥಾನ ಗೆಲ್ಲಲಿದೆ ಎಂದರು.

ಕುಡಿಯುವ ನೀರಿನ ಸಮಸ್ಯೆ : ರಾಜ್ಯದಲ್ಲಿ ಭೀಕರ ಬರಗಾಲ ಬಂದಿದೆ. ಜಲಾಶಯಗಳಲ್ಲಿ ನೀರಿನ ಮಟ್ಟ ಕುಸಿದಿದೆ. ಮಳೆಗಾಲಕ್ಕೆ ಇನ್ನೂ ಮೂರು ತಿಂಗಳಿದೆ. ರಾಜ್ಯದ ಎಲ್ಲಾ ಜಲಾಶಯಗಳಲ್ಲಿ ಪ್ರಸ್ತುತ ಲಭ್ಯ ಇರುವುದು 14 ಟಿಎಂಸಿ ನೀರು ಮಾತ್ರ. ಇದರಿಂದ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗುವ ಸಂಭವ ಇದೆ. ಸಿಡಬ್ಲ್ಯೂಆರ್‌ಸಿ ಮತ್ತು ಕೇಂದ್ರ ಸರ್ಕಾರಕ್ಕೆ ಒತ್ತಡ ತಂದು ತಮಿಳುನಾಡಿಗೆ ನೀರು ಬಿಡುವುದನ್ನು ನಿಲ್ಲಿಸಲು ಸಂಸದರು ಕೇಂದ್ರ ಸರ್ಕಾರಕ್ಕೆ ಒತ್ತಡ ಹೇರಬೇಕು. ಅದನ್ನು ಬಿಟ್ಟು ರಾಜ್ಯ ಸರ್ಕಾರದ ಮೇಲೆ ಗೂಬೆ ಕೂರಿಸುವ ಕೆಲಸವನ್ನು ಬಿಜೆಪಿಯವರು ಮಾಡಬಾರದು. ರಾಜ್ಯ ಸರ್ಕಾರ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಕ್ರಮ ಕೈಗೊಂಡಿದೆ ಎಂದು ತಿಳಿಸಿದರು.

ಸ್ವಪಕ್ಷೀಯರಿಂದಲೇ ಶೋಭಾ ವಿರುದ್ಧ ಅಸಮಾಧಾನ: ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ಕರ್ನಾಟಕಕ್ಕೆ ಬಂದಾಗಲೆಲ್ಲ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಮಾತನಾಡುತ್ತಾರೆ. ಆದರೆ, ಶೋಭಾ ಕರಂದ್ಲಾಜೆ ಕ್ಷೇತ್ರದಲ್ಲಿ ಬಿಜೆಪಿ ಕಾರ್ಯಕರ್ತರೇ ಗೋ ಬ್ಯಾಕ್ ಶೋಭಾ ಅಭಿಯಾನ ಆರಂಭಿಸಿದ್ದಾರೆ. ಕಳೆದ 5 ವರ್ಷಗಳಲ್ಲಿ 6 ಬಾರಿಯೂ ಕ್ಷೇತ್ರಕ್ಕೆ ಭೇಟಿ ಕೊಟ್ಟಿಲ್ಲ. ದಿಶಾ ಮೀಟಿಂಗ್‌ಗಳಲ್ಲಿ ಭಾಗವಹಿಸಿಲ್ಲ. ಚುನಾವಣೆಯಲ್ಲಿ ಜನರೇ ಅವರಿಗೆ ತಕ್ಕ ಉತ್ತರ ಕೊಡಲಿದ್ದಾರೆ ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ನಗರಾಧ್ಯಕ್ಷ ಆರ್.ಮೂರ್ತಿ, ನಗರ ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಮಾಜಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಬಿ.ಎಂ.ರಾಮು, ಮಾಧ್ಯಮ ವಕ್ತಾರ ಎಂ.ಮಹೇಶ್, ಮುಖಂಡ ಗಿರೀಶ್ ಇದ್ದರು.